ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಪ್ರಾಮುಖ್ಯವಾದ ವಿಷಯ. ನಮ್ಮ ಮಂತ್ರಿಮಂಡಲದ ಮೇಲೆ ಬಲವಾದ ಆಘಾತ ಬಿದ್ದಿದೆ. ಮುಖ್ಯಮಂತ್ರಿಯವರು ಸಹ ಇಲ್ಲಿ ಈಗ ಇಲ್ಲ. ಆದ್ದರಿಂದ ಅದರ ಬಗ್ಗೆ ಅವರು ಒಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು. ನಮ್ಮ ಮಂತ್ರಿಮಂಡಲದ ಬಗ್ಗೆ ನಮಗೆ ಗಾಬರಿಯಾಗುತ್ತದೆ. ತಾವು ಅವರನ್ನು ಬರಮಾಡಿಸಿಕೊಂಡು ಒಂದು ಹೇಳಿಕೊಡಿಸಬೇಕೆಂದು ಹೇಳುತ್ತೇನೆ.

BUDGET ESTIMATES FOR 1973-74

Demands for Grants

Demand Nos. 1737 and 17A (Debate Contd)

† ಶ್ರೀ ಕೆ. ಮಾದೇಗೌಡ (ಬನ್ನೂರು).—ಮಾನ್ಯ ಅಧ್ಯಕ್ಷರೆ, ಈ ಬೇಡಿಕೆಯ ಮೇಲೆ ನಿನ್ನೆ ಮಾತನಾಡುತ್ತಾ ಸರ್ಕಾರದ ಹೊಣೆಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ಸರ್ಕಾರದ ಹೊಣೆ ಹೆಚ್ಚಾಗಿ ಇದರಲ್ಲಿ ಇದೆ. ಅದನ್ನು ಇವತ್ತು ಸರ್ಕಾರ ಸಂಪೂರ್ಣವಾಗಿ ಮನಗಾಣಬೇಕಾಗಿದೆ. ಮೂಲತಃ ನಾವು ಪ್ರಾಥಮಿಕ ಶಿಕ್ಷಣವನ್ನು ಯಾವ ರೀತಿಯಲ್ಲಿ ಇವತ್ತು ಕೊಡುತ್ತಿದ್ದೇವೆ ಎನ್ನುವುದರ ಬಗ್ಗೆ ಸರ್ಕಾರ ಪೂರ್ಣ ಗಮನವನ್ನು ಹರಿಸಬೇಕೆಂಬುದೇ ನಮ್ಮ ಇಚ್ಛೆ. ಇವತ್ತು ಪ್ರಾಥಮಿಕ ಶಿಕ್ಷಣ ಅಂದರೆ, ನಾವು ಚಿಕ್ಕ ಮಕ್ಕಳಿಗೆ ಯಾವ ರೀತಿ ಪೌಷ್ಟಿಕ ಆಹಾರವನ್ನು ಕೊಟ್ಟು ಸಾಕುತ್ತೇವೆಯೋ, ಅದೇ ರೀತಿಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೂ ಆದ್ಯತೆಯನ್ನು ಕೊಡಬೇಕು. ಆದರೆ ಶಿಕ್ಷಣದ ಪ್ರತಿಕ್ರಿಯೆ ಮತ್ತು ಶಿಕ್ಷಣ ನೀಡತಕ್ಕದ್ದನ್ನು ನೋಡಿದರೆ ನಮಗೆ ಬಹಳ ನೋವು ಉಂಟಾಗುತ್ತದೆ. ಪ್ರಾಥಮಿಕ ಶಿಕ್ಷಣವನ್ನು ಹಿಂದೆ ಯಾವ ರೀತಿಯಲ್ಲಿ ಕೊಡುತ್ತಿದ್ದೇವೋ ಅದರ ಕನಿಷ್ಟ ಮಟ್ಟಕ್ಕೆ ಇಂದು ಬಂದಿದೆ. ಅದಕ್ಕೆ ಕಾರಣವಾದದ್ದೂ ಇಷ್ಟೆ. ನಮ್ಮ ಈ ಶಿಕ್ಷಣವನ್ನು ಬೋಧನೆ ಮಾಡತಕ್ಕವರು ಸುಸಂಸ್ಕೃತರೂ ಮತ್ತು ಪ್ರವೀಣರೂ ಆಗಿರಬೇಕು. ಆ ಒಂದು ಆಧಾರವನ್ನು ಇಟ್ಟುಕೊಳ್ಳದೆ ಮಾಡಿದರೆ ಇದರಿಂದ ಅಷ್ಟು ಫಲ ದೊರೆಯುವುದಿಲ್ಲ. ಇದರಿಂದ ಮಾತ್ರ ಮೂಲ ಶಿಕ್ಷಣ ಸುಧಾರಣೆಯಾಗುತ್ತದೆ. ಮಕ್ಕಳಿಗೆ ಈ ರೀತಿಯಲ್ಲಿ ಒಂದು ಒಳ್ಳೆಯ ಪ್ರಾಥಮಿಕ ಶಿಕ್ಷಣವನ್ನು ಕೊಡದೆ ಹೋದರೆ, ಮುಂದೆಯೂ ಮಕ್ಕಳ ಶಿಕ್ಷಣ ಒಳ್ಳೆಯದಾಗುವುದಿಲ್ಲ; ಮತ್ತು ಮುಂದಿನ ಮಕ್ಕಳ ಭವಿಷ್ಯವೇ ಒಳ್ಳೆಯದಾಗುವುದಿಲ್ಲ. ಮೂಲತಃ ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಬೆಳೆಯುತ್ತದೆ ಎಂದು ತಿಳಿದರೂ ಕೂಡ, ಈ ವಿದ್ಯಾಭ್ಯಾಸ ನಿಜವಾಗಿಯೂ ಬೆಳೆಯುತ್ತದೆಯೇ ಎಂಬುದನ್ನು ಸರ್ಕಾರ ಮನಗಾಣಬೇಕು; ಮತ್ತು ಇದಕ್ಕೆ ಉತ್ತೇಜನ ಕೊಡಬೇಕು. ಇವತ್ತು ಉದಾಹರಣೆಗೆ ಯುವಕರಲ್ಲಿ ಶಿಕ್ಷಣ ಬೆಳೆಯುತ್ತಿರುವುದನ್ನು ನೋಡಿದರೆ, ಇದರಿಂದ ನಮ್ಮ ದೇಶಕ್ಕೆ ಮುಂದೆ ಹಾನಿ ಉಂಟಾಗಬಹುದೇ ಎಂಬ ಅನುಮಾನ ಬರುತ್ತದೆ. ಇದಕ್ಕೆ ಕಾರಣವಾದದ್ದೂ ಇಷ್ಟೆ. ಯಾವ ರೈತ ತನ್ನ ಮಗನನ್ನು ಓದಿಸಿ, ಮುಂದೆ ಒಳ್ಳೆಯ ವಿದ್ಯಾವಂತನಾಗಬೇಕೆಂದು ಆಶೆ ಇಟ್ಟುಕೊಂಡು ಇರುತ್ತಾನೋ, ಅಂಥವನಿಗೆ ತನ್ನ ಮಗನು ವಿದ್ಯಾಭ್ಯಾಸ ಮುಗಿಸಿದ ನಂತರ, ಆತನ ಹೊರೆಯನ್ನು ಕಡಿಮೆ ಮಾಡುವ ಬದಲು ಇನ್ನೂ ಹೆಚ್ಚಿನ ಹೊರೆ ಬೀಳುವ ಹಾಗೆ ಮಾಡುತ್ತದೆ ಇಂದಿನ ವಿದ್ಯಾಭ್ಯಾಸ ಕ್ರಮ. ರೈತನ ಮಗನು ವಿದ್ಯಾಭ್ಯಾಸವಾದ ಮೇಲೆ ತನ್ನ ಕಾಲ ಮೇಲೆ ನಿಲ್ಲುವುದಕ್ಕೆ ಆಗದೆ ಆತನ ಸಂಸಾರಕ್ಕೆ ಒಂದು ಹೊರೆಯಾಗುತ್ತಾನೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನವನ್ನು ಕೊಡಬೇಕು. ಇಲ್ಲದಿದ್ದರೆ ವಿದ್ಯಾರ್ಥಿಗಳು ಎಷ್ಟೇ ವಿದ್ಯಾವಂತರಾದರೂ ಕೂಡ ಅದರಿಂದ ಸಮಾಜಕ್ಕೆ ಬಹಳ ಹಾನಿಯೇ ಅಲ್ಲದೆ ಪ್ರಯೋಜನವಿಲ್ಲ. ಇಂಥ ಹಾನಿಯನ್ನು ತಪ್ಪಿಸುವುದಕ್ಕೋಸ್ಕರ ತಾವು ವಿದ್ಯಾರ್ಥಿಗಳ ನಡತೆಯ ಬಗ್ಗೆ ಒಂದು ಅಂಕ ಪಟ್ಟಿಯನ್ನು ಇಟ್ಟು ಆಗಾಗ್ಗೆ ಪರೀಕ್ಷಿಸದೆ ಹೋದರೆ ಇಂಥ ವಿದ್ಯಾಭ್ಯಾಸದಿಂದ ಯಾವ ದೇಶಕ್ಕೂ ಒಳ್ಳೆಯದಾಗುವುದಿಲ್ಲ. ನಮ್ಮ ವಿದ್ಯಾರ್ಥಿಗಳಲ್ಲಿ ಅಶಿಸ್ತು ಇದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅದರಲ್ಲಿಯೂ ಕೂಡ ಬಹುಶಃ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿಯೂ ದುರ್ನಡತೆ ಹೆಚ್ಚುತ್ತಾ ಇದೆ. ದುರ್ನಡತೆ ಅಂದರೆ, ಕುಡಿಯತಕ್ಕದ್ದು, ದುಶ್ಚಟಗಳು ಇವು ಹೆಚ್ಚುತ್ತ ಇವೆ. ಇದರಿಂದ ವಿದ್ಯಾರ್ಥಿಗಳು ಬಹಳವಾಗಿ ಕೆಟ್ಟುಹೋಗುತ್ತಿದ್ದಾರೆಂಬುದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಂಬಿದ್ದೇನೆ. ಇದರಿಂದ ಮುಂದೆ ನಮ್ಮ ದೇಶಕ್ಕೆ, ಹಾಗೂ ನಮ್ಮ ಸಮಾಜಕ್ಕೆ ಇನ್ನೂ ಕೆಟ್ಟ ಪರಿಣಾಮ ಉಂಟಾಗುತ್ತದೆ. ಇದಕ್ಕೆ ಪರಿಹಾರ, ಇವರ ನಡತೆಯ ಬಗ್ಗೆ ಸರಿಯಾದಂಥ ಒಂದು ಶಿಕ್ಷಣವನ್ನು ಕೊಡತಕ್ಕದ್ದು ಮುಖ್ಯ. ಅದ

ಕ್ಕಾಗಿ ಒಂದು ರೀತಿಯಾದಂಥ ವಿದ್ಯಾಭ್ಯಾಸವನ್ನು ಈಗ ಸುಧಾರಣೆ ಮಾಡಬೇಕು. ಏತಕ್ಕೆಂದರೆ, ಇಂತಹ ದುರ್ನಡತೆ ಹಾಗೂ ದುಶ್ಚಟಗಳಿಂದ ಇರುವಂಥ ವಿದ್ಯಾರ್ಥಿಗಳ ಬಗ್ಗೆ ಸರ್ಟಿಫಿಕೇಟ್ ಕೊಡುವ ಕಾಲದಲ್ಲಿ ಸರಿಯಾದ ರೀತಿಯಲ್ಲಿ ಬಿಗಿಯಾದ ಸರ್ಟಿಫಿಕೇಟ್ ಕೊಡುವುದಾದರೆ ಬಹುಶಃ ಅಂಥಾದ್ದನ್ನು ತಪ್ಪಿಸಬಹುದೆಂದು ನನ್ನ ಸಲಹೆ. ಏಕೆಂದರೆ ಅವರ ನಡತೆಯನ್ನು ತಿದ್ದದಿದ್ದರೆ ನೀವು ಎಂತಹ ವಿದ್ಯಾಭ್ಯಾಸವನ್ನು ಅವರಿಗೆ ಕೊಟ್ಟರೂ ಕೂಡ ಅವರಿಂದ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆಯೇ ? ಅವರಿಗೆ ಯಾವ ರೀತಿಯಾಗಿ ಅವರ ನಡತೆಯ ಬಗ್ಗೆ ತಿಳಿವಳಿಕೆ ಕೊಡಬೇಕೆಂಬುದನ್ನು ಯೋಚನೆ ಮಾಡದೇ ಹೋದರೆ, ನೀವು ವಿದ್ಯಾಭ್ಯಾಸಕ್ಕೆ ಎಷ್ಟು ಪ್ರೋತ್ಸಾಹ ಕೊಟ್ಟರೂ ಕೂಡ ಪ್ರಯೋಜನವಿಲ್ಲ. ಈಗಿನ ವಿದ್ಯಾಭ್ಯಾಸದಿಂದ ಖಂಡಿತವಾಗಿ ಇನ್ನೂ ಹಾನಿಯಾಗುತ್ತದೆ. ಎಷ್ಟೋ ಸಂಸಾರಗಳಲ್ಲಿ ಇದರಿಂದ ತೊಂದರೆಯಾಗಿದೆ. ಎಷ್ಟೇ ವಿದ್ಯಾಭ್ಯಾಸ ಮಾಡಿಸಿದರೂ ಈ ದುರ್ನಡತೆಯಿಂದ ಅಂತಹವರಿಗೆ ಇರತಕ್ಕ ಆಸ್ತಿಯೂ ಕೂಡ ಹಾಳಾಗಿ ಹೋಗಿ ಅವರ ಸಂಸಾರ ದಿಕ್ಕುಪಾಲಾಗಿರತಕ್ಕ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಅವರ ನಡತೆಯ ಬಗ್ಗೆ ಒಂದು ಹೊಸ ರೀತಿನೀತಿ, ವ್ಯವಸ್ಥೆಯನ್ನು ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲಿಯೂ ಇಟ್ಟುಕೊಳ್ಳಬೇಕು. ಆ ರೀತಿಯಾಗಿ ಇಟ್ಟುಕೊಳ್ಳದೇ ಹೋದರೆ, ಅವರು ಯಾವ ಡಿಗ್ರಿಯನ್ನು ಹೊಂದಿದ್ದರೂ ಪ್ರಯೋಜನವಿಲ್ಲ. ಅದು ಡಿಸ್‌ಕ್ವಾಲಿಫಿಕೇಷನ್ ಆಗುತ್ತದೆ. ಶಿಕ್ಷಕರಲ್ಲಿ ಬಿಗಿ ಇದ್ದರೆ ವಿದ್ಯಾರ್ಥಿಗಳು ಹೆದರುತ್ತಾರೆ ಅದರೆ ಸಾಮಾನ್ಯವಾಗಿ ನಾಲ್ಕು ಜನ ವಿದ್ಯಾರ್ಥಿಗಳು ಒಟ್ಟಿಗೆ ಹೋಗಿ ಶಿಕ್ಷಕರನ್ನು ನೋಡತ್ತೇವೆಂದರೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಹೆದರಬೇಕೆನ್ನುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಶಿಕ್ಷಕರ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಂಡು ಸರಿಯಾದ ರೀತಿಯಲ್ಲಿ ಅವರಿಗೆ ಪ್ರೊಟೆಕ್ಷನ್ ಕೊಡದೇ ಇರುವುದು ವಿದ್ಯಾರ್ಥಿಗಳಲ್ಲಿ ಅಶಿಸ್ತಿಗೆ ಮುಖ್ಯ ಕಾರಣವೆಂದು ನಾನು ಹೇಳಬೇಕಾಗಿದೆ. ಹಿಂದೆ ಯಾವ ರೀತಿಯಾಗಿ ಇತ್ತು ? ತಾವೆಲ್ಲರೂ ಹಿಂದೆ ವಿದ್ಯಾಭ್ಯಾಸಮಾಡಲಿಲ್ಲವೇ ? ತಮ್ಮ ಕಾಲದಲ್ಲಿ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಂಬಂಧ ಹೇಗಿತ್ತೆಂಬುದು ತಮಗೆ ಅರ್ಥವಾಗುವುದಿಲ್ಲವೇ ? ಕಾರಣವಾದರೂ ಏನು ಈಗ ಪರಿಸ್ಥಿತಿ ಹೀಗಾಗಿರುವುದಕ್ಕೆ ಎಂಬುದನ್ನು ವಿಚಾರ ಮಾಡಿದ್ದೀ ಆದರೆ ನಾನು ನೋಡಿದ ಹಾಗೆ ವಿದ್ಯಾರ್ಥಿಗಳಲ್ಲಿ ದುರ್ನಡತೆ, ಅಶಿಸ್ತು ವಿಶೇಷವಾಗಿ ಬೆಳೆಯುತ್ತಿದೆ ಎಂಬುದನ್ನು ವಿಚಾರಮಾಡಿದ್ದೇ ಆದರೆ ನಾವೆಲ್ಲರೂ ಸೇರಿ ಇಂಥಾದ್ದಕ್ಕೆ ಉತ್ತೇಜನ ಕೊಡುವುದನ್ನು ತಪ್ಪಿಸದೇ ಹೋದರೆ ನಾವೇ ಅವರನ್ನು ಹಾಳು ಮಾಡಿದಂತಾಗುತ್ತದೆ. ಆದ್ದರಿಂದ ಅವರ ನಡತೆಯ ಬಗ್ಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ತಕ್ಕ ಷರತ್ತನ್ನು ಹಾಕಿ ಅವರ ಬಗ್ಗೆ ಸರ್ಕಾರದವರು ಸಾಕಷ್ಟು ಗಮನ ಕೊಡದೇ ಹೋದರೆ, ಖಂಡಿತವಾಗಿ ಇಂತಹ ವಿದ್ಯಾಭ್ಯಾಸದಿಂದ ನಮ್ಮ ದೇಶಕ್ಕೇ ಹಾನಿ, ರೈತರಿಗೂ ಹಾನಿ, ಸಮಾಜಕ್ಕೂ ಹಾನಿ, ಅವರ ಸಂಸಾರಕ್ಕೂ ಹಾನಿ ಎಂಬುದಾಗಿ ನಾನು ಮತ್ತೊಮ್ಮೆ ಈ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಹೇಳುವುದಕೆ ಇಷ್ಟಪಡುತ್ತೇನೆ.

ನಾವು ಮೂಲತಃ ಶಿಕ್ಷಣ ಕೊಡುವ ಕಾಲದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಮುಂಚಿತವಾಗಿ ನರ್ಸರಿ ಎಂದು ಇವತ್ತಿನದಿವಸ ಕೆಲವುಕಡೆ ಏನು ಪ್ರಾರಂಭವಾಗಿದೆಯೋ ಅದು ಪ್ರತಿಯೊಂದು ಹಳ್ಳಿಯಲ್ಲಿಯೂ ಇನ್ನುಮುಂದೆ ಜಾಸ್ತಿಯಾಗಬೇಕು. ಆ ರೀತಿಯಾಗಿ ಜಾಸ್ತಿಮಾಡದಿದ್ದರೆ ಅವರು ಮೂಲತಃ ಪ್ರಾಥಮಿಕ ಶಿಕ್ಷಣಕ್ಕೆ ಹೋಗುವುದಕ್ಕಾಗುವುದಿಲ್ಲ. ಮೊದಲು ಹಳ್ಳಿಯ ರೈತರ ಮಕ್ಕಳಿಗೆ ಅವರ ನಡವಳಿಕೆಯನ್ನು ಸರಿಯಾದ ರೀತಿಯಲ್ಲಿ ತಿದ್ದಿಕೊಳ್ಳುವ ಅವಕಾಶವನ್ನು ಈ ಶಿಶುವಿಹಾರಗಳಲ್ಲಿ ಕೊಡಬೇಕು. ಇಂತಹ ಶಿಶುವಿಹಾರಗಳನ್ನು ಪ್ರತಿಯೊಂದು ಗ್ರಾಮದಲ್ಲಿಯೂ ಲೋಕಲ್ ಬಾಡೀಸ್ ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಗಮನಕೊಡಬೇಕು. ಈಗ ತಾವು ಏನು ಶಿಶುವಿಹಾರಕ್ಕೆ 24 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ, ಅದು ಏನೇನೂ ಸಾಲದು. ಒಂದು ಕೋಟಿ ರೂಪಾಯಿಗಳನ್ನಾದರೂ ಕೂಡ ಶಿಶುವಿಹಾರಗಳ ಬೆಳವಣಿಗೆಗಾಗಿ ಸರ್ಕಾರದವರು ಇಡಬೇಕು, ಹಾಗೂ ರೈತರ ಮಕ್ಕಳ ಮೂಲತಃ ಅಭಿವೃದ್ಧಿಗೆ ಸರ್ಕಾರ ಅವಕಾಶ ಮಾಡಿಕೊಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ.

ಈಗಿನ ಒಂದು ಶಿಕ್ಷಣ ಪದ್ಧತಿಯಲ್ಲಿ ಫಿಜಿಕಲಿ—ಹ್ಯಾಂಡಿಕ್ಯಾಪ್ಡ್ ಬಾಯ್ಸ್‌ಗೆ ಉತ್ತೇಜನ ಕೊಡುವುದನ್ನು ಇಟ್ಟುಕೊಂಡಿದ್ದೀರೆಯೋ ಇಲ್ಲವೋ ಎಂದು ನಾನು ಕೇಳುತ್ತೇನೆ. ನೀವು ನರಗಳ ದೌರ್ಬಲ್ಯತೆ ಇರತಕ್ಕ ವಿದ್ಯಾರ್ಥಿಗಳಿಗೆ ಉಪಕಾರ ಮಾಡುವ ಅವಶ್ಯಕತೆಯನ್ನು ಈ ಬೇಡಿಕೆಯಲ್ಲಿ ಹೇಳಿದ್ದೀರಿ. ನಾನು ನೋಡಿದ್ದೇನೆ ತಮ್ಮ ಬೇಡಿಕೆಯಲ್ಲಿ ವಿದ್ಯಾರ್ಥಿಗಳಿಗೆ ಬೇಕಾದಂಥ ಸೌಲಭ್ಯಗಳನ್ನು ಒದಗಿಸುವುದಕ್ಕೆ ಕೇವಲ 10 ಸಾವಿರ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ ಮತ್ತು ಎರಡೂವರೆ ಲಕ್ಷ ರೂಪಾಯಿಗಳನ್ನು ಸಿಬ್ಬಂದಿಗಾಗಿ ಇಟ್ಟಿದ್ದೀರಿ. ಹೀಗಿರುವಾಗ ಫಿಜಿಕಲಿ ಹ್ಯಾಂಡಿಕ್ಯಾಪ್ಡ್ ಬಾಯ್ಸ್‌ಗೆ ಸರಿಯಾದ ರೀತಿಯಲ್ಲಿ ಸೌಲಭ್ಯಗಳನ್ನು ಕೊಡುವುದಕ್ಕೆ ಏನು ಅವ

(ಶ್ರೀ ಕೆ. ಮಾದೇಗೌಡ)

ಕಾಶ ಮಾಡಿದ್ದೀರಿ ? ಈ ವಿಚಾರದಲ್ಲಿ ಸರ್ಕಾರಕ್ಕೆ ಹೇಳುತ್ತೇನೆ. ಇಂತಹ ಸಂಸ್ಥೆಗಳು ನಾಲ್ಕಾರು ನಮ್ಮ ದೇಶದಲ್ಲಿ ಬೆಳೆಯುತ್ತಾ ಇವೆ. ಬಹುಶಃ ನಾನು ಇವತ್ತು ಒಂದು ಸಂಸ್ಥೆಯನ್ನು ತೆಗೆದು ಕೊಂಡು ಉದಾಹರಣೆಗಾಗಿ ಹೇಳುತ್ತೇನೆ. ಮೇಲುಕೋಟೆಯಲ್ಲಿ ಕರುಣಾಗೃಹ ಎಂಬುದು ಫಿಜಿ ಕಲಿ ಹ್ಯಾಂಡಿಕ್ಯಾಪ್ಡ್ ಬಾಯ್ಸ್‌ಗೆ ಸಂಬಂಧಪಟ್ಟ ಒಂದು ಸಂಸ್ಥೆ. ಅದು ಬಹಳ ಉತ್ತಮ ದರ್ಜೆ ಯಲ್ಲಿ ನಡೆಯುತ್ತಿದೆ. ಅಂಥಾದ್ದಕ್ಕೆ ಭೇಟಿ ಕೊಟ್ಟು ಅದು ಸರಿಯಾಗಿ ಕೆಲಸ ಮಾಡುತ್ತಿದ್ದ ಪಕ್ಷದಲ್ಲಿ. ಅವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ ಇಲ್ಲವೇ ಎಂಬುದು ಸತ್ಯವಾಗಿದ್ದ ಪಕ್ಷದಲ್ಲಿ ಅಂತಹ ಸಂಸ್ಥೆ ಗಳಿಗೆ ಸಹಾಯ ಮಾಡಿದರೆ ಈ ದೇಶದಲ್ಲಿರತಕ್ಕ ಫಿಜಿಕಲಿ ಹ್ಯಾಂಡಿಕ್ಯಾಪ್ಡ್ ಮಕ್ಕಳನ್ನು ಸರಿಯಾದ ರೀತಿಯಲ್ಲಿ ತರಬಹುದು. ಇಂಥಾದ್ದಕ್ಕೆ ಕೇವಲ 10 ಸಾವಿರ ರೂಪಾಯಿಗಳನ್ನು ಇಟ್ಟು ಎರಡೂ ವರೆ ಲಕ್ಷ ರೂಪಾಯಿಗಳನ್ನು ಸಿಬ್ಬಂದಿಗೋಸ್ಕರ ಇಂತಹ ಬೇಡಿಕೆಯನ್ನು ತೆಗೆದುಕೊಳ್ಳುವುದಕ್ಕೆ ಬದಲು ಅಂತಹ ಒಂದು ಖಾಸಗಿಯಾದ ಹಾಗೂ ಉತ್ತಮವಾಗಿ ಕೆಲಸ ನಡೆಸತಕ್ಕ ಒಂದು ಸಂಸ್ಥೆ ಯನ್ನು ಪರೀಕ್ಷಿಸಿ ಇಂಥಾದ್ದಕ್ಕೆ ಹೆಚ್ಚಿಗೆ ದುಡ್ಡು ಕೊಡುವುದಾದರೆ, ಆಗ ನೀವು ಮಾಡುವಂತ ಕೆಲ ಸದ ಹತ್ತರಷ್ಟು ಅವರು ಮಾಡಬಹುದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಖಾಸಗಿ ಪ್ರೌಢಶಾಲೆಗಳಲ್ಲಿರುವ ಉಪಾಧ್ಯಾಯರಿಗೆ ಬಹಳ ಅನ್ಯಾಯವನ್ನು ಮಾಡು ತ್ತಿದ್ದೀರಿ ಅವರಿಗೆ ಸೇಕಡ 90ರಷ್ಟು ಭಾಗವನ್ನು ಸರ್ಕಾರ ಕೊಡಬೇಕೆಂಬುದಾಗಿ ಒಂದು ಸರ್ಕಾ ರದ ಆಜ್ಞೆ ಇದ್ದರೂ ಆ ರೀತಿಯಾಗಿ ನಡೆಯುತ್ತಿಲ್ಲ. ಒಂದು ಉದಾಹರಣೆಯನ್ನು ಈ ಸಂದರ್ಭ ದಲ್ಲಿ ಹೇಳುವುದಾದರೆ, ಮೈಸೂರಿನಲ್ಲಿ ದಳವಾಯಿ ಹೈಸ್ಕೂಲ್ ಎಂಬುದಾಗಿದೆ. ಅಲ್ಲಿನ ಪ್ರೈವೇಟ್ ಮ್ಯಾನೇಜ್‌ಮೆಂಟಿನ ಒಂದು ಉದ್ದೇಶಕ್ಕೆ 2–3 ಜನ ಉಪಾಧ್ಯಾಯರು ಈಗ ದಿವಾಳಿಯಾಗಿ ದ್ದಾರೆ. ಕಾರಣವಾದರೂ ಕೂಡ ಇಷ್ಟೇ ಅವರು ಸರ್ಕಾರದಲ್ಲಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿ ಗಳನ್ನು ಹಿಡಿದು ಸರ್ಕಾರದ ವತಿಯಿಂದ ಆಜ್ಞೆ ಪಡೆದಿದ್ದರೂ ಸಹ ಆ ಸಂಸ್ಥೆಯವರು ಅವರನ್ನು ಕೆಲ ಸಕ್ಕೆ ತೆಗೆದುಕೊಂಡಿಲ್ಲ. ಹೀಗಾಗಿ ಎರಡು ಸಂಸಾರಗಳು ಮೈಸೂರಿನಲ್ಲಿ ದಿವಾಳಿಯಾಗಿದ್ದಾರೆ. ಅವರು ಈಗ ಬಹಳ ಕಷ್ಟದಲ್ಲಿದ್ದಾರೆ. ಇದರಲ್ಲಿ ನನಗೆ ಗೊತ್ತಿರುವುದು ಇಷ್ಟು. ಇನ್ನೇನೋ ಅನ ರ್ಥವಾಗಿದೆ. ಸೇಕಡ 90 ಭಾಗದಷ್ಟು ಸಹಾಯವನ್ನು ಸರ್ಕಾರದಿಂದ ತೆಗೆದುಕೊಂಡಿರತಕ್ಕ ಈ ಸಂಸ್ಥೆ ಸರ್ಕಾರದ ಅಧಿಕಾರಿಗಳ ಆಜ್ಞೆ ಇದ್ದರೂ ಅದನ್ನು ಉಲ್ಲಂಘನೆ ಮಾಡಿದ್ದಾರೆ.

ಶ್ರೀ ಎ. ಆರ್. ಬದರೀನಾರಾಯಣ್.—ಸರ್ಕಾರದ ಮುಂದೆ ಅಪೀಲು ಬಂದಿದೆ.

ಶ್ರೀ ಕೆ. ಮಾದೇಗೌಡ.—ಇದನ್ನು ಯಾವಾಗ ತೀರ್ಮಾನಿಸುತ್ತೀರಿ ? ನಿಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅಲ್ಲಿ ಆಗಿರತಕ್ಕ ಅನ್ಯಾಯವನ್ನು ನಿಲ್ಲಿಸಿ. ಆ ಸಂಸಾರಗಳ ದಿವಾಳಿಗೆ ಅವಕಾಶ ವಾಗದಂತೆ ಎಷ್ಟು ಬೇಗ ತೀರ್ಮಾನ ಮಾಡುತ್ತೀರೋ ಅಷ್ಟೂ ಒಳ್ಳೆಯದು. ಈ ಸಂಸ್ಥೆಯು ಸರಿ ಯಾದ ನಡೆವಳಿಕೆಯಿಂದ ನಡೆಯುವ ಹಾಗೆ ಸರ್ಕಾರದಿಂದ ಒಂದು ಆಜ್ಞೆ ಕೊಡಿ. ಈಗ ರಾಜ ಕೀಯ ಸಂತ್ರಸ್ತರಿಗೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವುದಕ್ಕಾಗಿ ಹಣ ಇಟ್ಟಿದ್ದಾರೆ. ಅದು ಬಹಳ ಕಡಿಮೆಯಾಗಿದೆ. ಅದನ್ನು ಇನ್ನೂ ಜಾಸ್ತಿಯಾಗಿ ಮಾಡಬೇಕು. ಒಟ್ಟಿನಲ್ಲಿ ಈಗ ರಾಜಕೀಯ ಸಂತ್ರಸ್ತರ ಮಕ್ಕಳಿಗೆ ಹೆಚ್ಚಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ, ನನಗೆ ಇಷ್ಟು ಹೊತ್ತು ಈ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡಗಿ (ಬೈಂದೂರು).—ಮಾನ್ಯ ಅಧ್ಯಕ್ಷರೇ : ಮಾನ್ಯ ವಿದ್ಯಾಸಚಿವರು ಮಂಡಿಸಿರತಕ್ಕ ವಿದ್ಯಾ ಬೇಡಿಕೆಗೆ ನಾನು ನನ್ನ ಬೆಂಬಲವನ್ನು ಸೂಚಿಸುತ್ತ ಕೆಲವು ವಿಷಯಗಳನ್ನು ವಿದ್ಯಾಮಂತ್ರಿಗಳ ಗಮನಕ್ಕೆ ತರಬಿಚ್ಛಿಸುತ್ತೇನೆ.

ದೇಶದ ಅಭಿವೃದ್ಧಿಯು ಆ ದೇಶದ ವಿದ್ಯೆಯನ್ನು ಅವಲಂಬಿಸಿದೆ ಯೆನ್ನುವುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲವೆಂದು ನಾನು ನಂಬಿದ್ದೇನೆ. ಒಂದು ಯಾವುದೇ ರಾಷ್ಟ್ರದಲ್ಲಿ ಯೋಗ್ಯ ವಿದ್ಯೆ ಇದ್ದು, ಅದು ಸರಿಯಾದ ರೀತಿಯಲ್ಲಿ ದೊರೆಯುತ್ತಿದ್ದರೆ, ಅಂಥಾ ರಾಷ್ಟ್ರ ಶೀಘ್ರವಾಗಿ ಏಳಿ ಗೆಗೆ ಬರುತ್ತದೆಂಬುದರಲ್ಲಿ ಯಾವ ಸಂಶಯವೂ ಇಲ್ಲ—ಇದನ್ನು ಎಲ್ಲರೂ ಒಪ್ಪುತ್ತಾರೆಂದು ನಾನು ನಂಬಿದ್ದೇನೆ.

ಇನ್ನೂ ನಮ್ಮಲ್ಲಿ ಹಿಂದೆ ಏನು ಬ್ರಿಟಿಷರ ಕಾಲದಲ್ಲಿ ಅವರೊಂದು ವಿದ್ಯೆಯನ್ನು ಇಲ್ಲಿ ಜಾರಿಗೆ ತಂದಿದ್ದರೋ ಅದನ್ನೇ ಮುಂದುವರಿಸಿಕೊಂಡು ಬರುತ್ತಿದ್ದೇವೆ, ನಾವು ಹೀಗೇ ಇದನ್ನೇ ಮುಂದು ವರಿಸುತ್ತಾ ಹೋದಲ್ಲಿ ದೇಶಕ್ಕೆ ಗಂಡಾಂತರ ತಪ್ಪಿದ್ದಲ್ಲ ಎಂದು ಹೇಳುತ್ತೇನೆ. ಈ ವಿದ್ಯೆ ಏನಿದ್ದರೂ

ಬರಿ ಕಾರ್ಕೂನರುಗಳನ್ನು ತಯಾರಿಸತಕ್ಕ ವಿದ್ಯೆಯೇ ವಿನಾ ದೇಶವನ್ನು ಕಟ್ಟುತಕ್ಕ ಅಥವಾ ಬೆಳೆಸತಕ್ಕ ವಿದ್ಯೆಯಲ್ಲ. ನಾವು ಇಂದೂ ಕೂಡ ಈ ಕಾರ್ಕೂನರನ್ನು ತಯಾರಿಸತಕ್ಕ ವಿದ್ಯೆಯನ್ನೇ ಮುಂದುವರಿಸಿಕೊಂಡು ಬರುತ್ತಿದ್ದೇವೆ. ಈ ವಿದ್ಯೆಯನ್ನು ಪಡೆಯತಕ್ಕವರ ಗುರಿ ಏನಿದ್ದರೂ ಸರ್ಕಾರಿ ಉದ್ಯೋಗದತ್ತ ಓಡುತ್ತಿದೆಯೇ ವಿನಾ, ಅವರು ಎಷ್ಟೇ ವಿದ್ಯಾವಂತರಾಗಿರಲಿ-ಎಷ್ಟೇ ಪದವೀಧರರಾಗಿರಲಿ, ಅವರಿಗೆ ತಮ್ಮ ಸ್ವಂತ ಕಾಲಮೇಲೆ ತಾವು ನಿಲ್ಲುವಂಥ ಧೈರ್ಯ ಅವರಲ್ಲಿ ಇರುವುದಿಲ್ಲ. ಈ ಗುರಿ ಬದಲಾವಣೆಯಾಗದಿದ್ದರೆ ನಮ್ಮ ದೇಶದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯನ್ನು ತಡೆಗಟ್ಟುವುದಕ್ಕೇ ಸಾಧ್ಯವಾಗುವುದಿಲ್ಲ ಯಾವಾಗ ಇದನ್ನು ತಡೆಗಟ್ಟುವುದಕ್ಕಾಗುವುದಿಲ್ಲವೋ ಆಗ ದೇಶಕ್ಕೆ ಗಂಡಾಂತರ ಶತಸಿದ್ಧ. ಆದುದರಿಂದ ಆದಷ್ಟು ಬೇಗ ನಮ್ಮ ವಿದ್ಯಾಭ್ಯಾಸದ ಗುರಿಯನ್ನು ನಾವು ಬದಲಾವಣೆ ಮಾಡಬೇಕು. ಆದರೆ ವಿದ್ಯಾವಂತನಾದ ವ್ಯಕ್ತಿಯ ಮನಸ್ಸು ಧನಾರ್ಜನೆಯತ್ತ ಓಡುವುದು ಸ್ವಾಭಾವಿಕ ಆದರೆ ಅತನು ಸಮಾಜಕ್ಕೆ ಉತ್ತಮ ರೀತಿಯಲ್ಲಿ ಕೆಲಸ ಮಾಡಿದರೆ ಅದು ಬಹಳ ಉತ್ತಮ. ಆದರೆ ಇದರಲ್ಲಿ ಯಾವುದು ಉತ್ತಮ ಯಾವುದು ಸರಿ, ಎಂಬುದನ್ನು ನಿರ್ಧಾರಮಾಡತಕ್ಕ ಕೆಲಸ ಈ ರಾಜಕೀಯ ವಲಯಕ್ಕೆ ಬಂದರೆ ಇದರಿಂದಲೂ ಕೂಡ ದೇಶಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಅನರ್ಥಗಳೇ ಆಗಬಹುದೆಂಬುದು ನನ್ನ ಅಭಿಪ್ರಾಯ; ಮತ್ತು ಆಗಲು ದೇಶಕ್ಕೆ ಅನರ್ಥಗಳು ತಪ್ಪಿದ್ದಲ್ಲ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಒಂದು ಕಾಲದಲ್ಲಿ ಯಾವ ಒಂದು ರಾಜಕೀಯ ಪಕ್ಷ ಅಧಿಕಾರದಲ್ಲಿ ಇರುತ್ತದೆಯೋ ಅದೊಂದು ತನಗೆ ಸೊಗಸಿದ ರೀತಿಯಲ್ಲಿ ವಿದ್ಯಾಸುಧಾರಣೆಯನ್ನು ಮಾಡಿದರೆ, ಆದಾದನಂತರ ಅಧಿಕಾರಕ್ಕೆ ಬರತಕ್ಕ ಬೇರೊಂದು ರಾಜಕೀಯ ಪಕ್ಷ ಅದನ್ನು ಒಪ್ಪದಿರಬಹುದು; ಅದಕ್ಕಾಗಿ ಅದು ತನಗೆ ಬೇಕಾದಂತೆ ಇದನ್ನು ಬದಲಾವಣೆ ಮಾಡುತ್ತಾ ಹೋದರೆ ಇದಕ್ಕೆ ಕೊನೆಮೊದಲಿಲ್ಲದಂತಾಗುತ್ತದೆ. ಆದುದರಿಂದ ಇದೂ ಕೂಡ ತಪ್ಪೇ ಎಂಬುದು ನನ್ನ ಅಭಿಪ್ರಾಯ. ಆದುದರಿಂದ ಇದನ್ನು ನಿರ್ಧರಮಾಡತಕ್ಕ ಜವಾಬ್ದಾರಿಯನ್ನು ತಜ್ಞರ ಅಭಿಪ್ರಾಯಕ್ಕೆ ಮನ್ನಣೆಕೊಟ್ಟು ಅವರ ಹೇಳಿಕೆಯಂತೆ ಇದನ್ನು ಬದಲಾವಣೆ ಮಾಡುವುದು ಉತ್ತಮ. ಈ ದಿವಸ ಇಂಜಿನಿಯರಿಂಗ್ ಅಥವಾ ಮೆಡಿಕಲ್ ಡಿಗ್ರಿ ಪಡೆದವರೂ ಕೂಡ ಅವರ ಸ್ವಂತಕಾಲಮೇಲೆ ಅವರಿಗೆ ನಿಲ್ಲತಕ್ಕ ಧೈರ್ಯವಿಲ್ಲ. ಅವರೂ ಕೂಡ ಸರ್ಕಾರದ ಉದ್ಯೋಗಕ್ಕೆ ಹಾತುವರಿಯುತ್ತಿದ್ದಾರೆ. ಅದಕ್ಕಾಗಿ ನಾನು ನಮ್ಮ ವಿದ್ಯೆಯಲ್ಲಿ ಮೂಲಭೂತ ಬದಲಾವಣೆ ಮಾಡಬೇಕೆಂದು ಒತ್ತಾಯಮಾಡುತ್ತಿದ್ದೇನೆ.

ಇನ್ನು ನಾನು ನಮ್ಮ ವಿದ್ಯಾ ಇಲಾಖೆಯಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಎಲ್ಲಾ ವಿದ್ಯಾಭ್ಯಾಸಕ್ಕೂ ಮೂಲ ತಳಹದಿ ಪ್ರಾಥಮಿಕ ವಿದ್ಯಾಭ್ಯಾಸ. ಇಲ್ಲಿ ಈ ಅಂತಸ್ತಿನಲ್ಲಿ ಮಕ್ಕಳಿಗೆ ಸರಿಯಾದ ಒಂದು ಬುನಾದಿಯನ್ನು ವಿದ್ಯೆಬಗ್ಗೆ ಹಾಕದಿದ್ದರೆ ಮುಂದೆ ಅವರ ವಿದ್ಯಾಭ್ಯಾಸ ಸರಿಯಾಗಿ ನಡೆಯಲಾರದು. ಪ್ರಾಥಮಿಕ ಶಿಕ್ಷಣ ಪಡೆದ ನಂತರವೇ ವಿದ್ಯಾರ್ಥಿಗಳು ಸೆಕೆಂಡರಿ ಶಾಲೆಗಳಿಗೆ ಬರಬೇಕು. ಅಲ್ಲಿಂದ ಮುಂದೆ ಮತ್ತೊಂದು ಹೆಚ್ಚಿನ ಶಾಲೆಗೆ ಹೋಗಬೇಕು. ಆದರೆ ದೇಶದಲ್ಲಿರತಕ್ಕ ಪ್ರತಿಯೊಬ್ಬ ಬಾಲಕನಿಗೂ ಪ್ರಾಥಮಿಕ ಶಿಕ್ಷಣವನ್ನು ಒದಗಿಸಿಕೊಡತಕ್ಕ ಒಂದು ಕರ್ತವ್ಯ ಅಥವಾ ಜವಾಬ್ದಾರಿ ಸರ್ಕಾರದ ಮೇಲಿದೆ. ಆದರೆ ನಾವು ಇಲ್ಲಿಯ ಪರಿಸ್ಥಿತಿಯನ್ನು ನೋಡಿ ಪಶ್ಚಾತ್ತಾಪ ಪಡಬೇಕಾಗಿದೆ. ಅನೇಕ ಕಡೆ ಪ್ರಾಥಮಿಕ ಶಾಲೆಗಳಿಗೆ ಸರಿಯಾಗಿ ಕಟ್ಟಡಗಳೇ ಇಲ್ಲ. ಕಟ್ಟಡಗಳಿದ್ದರೆ ಅಲ್ಲಿ ಸಾಕಷ್ಟು ಉಪಾಧ್ಯಾಯರುಗಳಿರುವುದಿಲ್ಲ. ಇನ್ನು ಎಲ್ಲಿ ಉಪಾಧ್ಯಾಯರು ಸಾಕಷ್ಟು ಸಂಖ್ಯೆಯಲ್ಲ ಇರುತ್ತಾರೋ ಅಲ್ಲಿ ಸಾಕಷ್ಟು ವಿದ್ಯಾರ್ಥಿಗಳಿರುವುದಿಲ್ಲ ಒಂದು ಕಡೆ ನಮ್ಮ ಜಿಲ್ಲೆಯಲ್ಲಿ 6 ಜನ ಉಪಾಧ್ಯಾಯರಿದ್ದ ಕಡೆಯಲ್ಲಿ ಕೇವಲ 50 ಜನರು ವಿದ್ಯಾರ್ಥಿಗಳಿದ್ದಾರೆಂದು ಗೊತ್ತಾಯಿತು. ಹೀಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣದ ವಿಭಾಗದಲ್ಲಿ ಒಂದು ಸರಿಯಾದ ವ್ಯವಸ್ಥೆಯಿಲ್ಲ. ನಮ್ಮ ರಾಜ್ಯದಲ್ಲಿ ಒಟ್ಟು 32,692 ಪ್ರಾಥಮಿಕ ಶಾಲೆಗಳಿದ್ದು, ಇವುಗಳ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಶಾಲೆಗಳ ಬಗ್ಗೆ ನಾನು ಕೆಲವು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1593 ಪ್ರಾಥಮಿಕ ಶಾಲೆಗಳಿವೆ. ಇವುಗಳಿಗೆ 2 ಲಕ್ಷದ 25 ಸಾವಿರದ 927 ರೂಪಾಯಿಗಳು ಖರ್ಚಾಗುತ್ತವೆ. ಅಲ್ಲಿ 1972 ಮತ್ತು 1973ನೇ ಸಾಲಿಗೆ ಇದ್ದ ಲೆಕ್ಕದ ಪ್ರಕಾರ ಒಂದು ಲಕ್ಷ ಇಪ್ಪತ್ತೈದು ಸಾವಿರದ ಮೂವತ್ತೊಂದು ಜನ ವಿದ್ಯಾರ್ಥಿಗಳು ಇದ್ದರು. ಅಲ್ಲಿ ಖಾಸಗೀ ಮತ್ತು ಸರ್ಕಾರಿ ಎರಡೂ ಸೇರಿ ಒಟ್ಟು 7972 ಜನ ಉಪಾಧ್ಯಾಯರಿದ್ದಾರೆ. ಆದರೆ ಎಲ್ಲಿ ಒಂದು ಶಾಲೆಯಲ್ಲಿ 40 ಜನ ವಿದ್ಯಾರ್ಥಿಗಳಿರುತ್ತಾರೋ ಅಲ್ಲಿ ಒಬ್ಬ ಉಪಾಧ್ಯಾಯರು ಇರಬೇಕೆಂದು ಒಂದು ಸರ್ಕಾರಿ ಆಜ್ಞೆಯೇ ಇದೆ. ಆದರೆ ನಮ್ಮಲ್ಲಿ ಕೆಲವು ಕಡೆ 30 ವಿದ್ಯಾರ್ಥಿಗಳಿಗೇ ಒಬ್ಬ ಉಪಾಧ್ಯಾಯರು 735 ಜನ ವಿದ್ಯಾರ್ಥಿಗಳಿಗೇ ಒಬ್ಬ ಉಪಾಧ್ಯಾಯರು ಇರತಕ್ಕ ನಿದರ್ಶನಗಳೂ ಇವೆ. ಇನ್ನು ಕೆಲವು ಕಡೆ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಇದ್ದಾಗ್ಯೂ ಉಪಾಧ್ಯಾಯರನ್ನು

(ಶ್ರೀ ಎ. ಜಿ. ಕೊಡಗಿ)

ಅಲ್ಲಿಗೆ ಕೊಟ್ಟಿಲ್ಲ. ಹಾಲಿ ಇರತಕ್ಕ ಒನ್ ಈಸ್ಟು ಫಾರ್ಟಿ ರೂಲನ್ನು ಕಡ್ಡಾಯವಾಗಿ ಜಾರಿಗೆ ತಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಜನ ಉಪಾಧ್ಯಾಯರ ಸ್ಥಾನಗಳು ಭರ್ತಿಯಾಗತಕ್ಕದ್ದು ಇದೆ. ನಮ್ಮಲ್ಲಿ 375 ಪೋಸ್ಟ್‌ಗಳನ್ನು ಮಂಜೂರು ಮಾಡತಕ್ಕ ಅಗತ್ಯ ವಿದ್ದರೂ ಅಲ್ಲಿಗೆ ಸಧ್ಯದಲ್ಲಿ 95 ಪೋಸ್ಟುಗಳನ್ನು ಮಾತ್ರ ಸ್ಯಾಂಕ್ಷನ್ ಮಾಡಿದ್ದಾರೆ. ಅದೇರೀತಿ ಇನ್ನುಳಿದ ಸ್ಥಾನಗಳನ್ನೂ ಕೂಡ ಸರ್ಕಾರದವರು ಕೂಡಲೆ ಮಂಜೂರು ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇದರಿಂದ ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆ ಕೂಡ ಬಹಳ ಮಟ್ಟಿಗೆ ಬಗೆಹರಿಯುತ್ತದೆ. ನಮ್ಮಲ್ಲಿ ಈ ಉಪಾಧ್ಯಾಯರಿಗೆ ತುಂಬಾ ಅಭಾವ ಉಂಟಾಗಿದೆ. ಆದುದ ರಿಂದ ಅಲ್ಲಿಗೆ ನೂತನ ಒಳ್ಳೆ ಶಿಕ್ಷಕರನ್ನು ಬೇಗ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೇಯದಾಗಿ ಗ್ರ್ಯಾಜುಯೇಟಾಗಿರತಕ್ಕವರನ್ನು ಹೆಡ್ಮಾಸ್ಟರಾಗಿ ನೇಮಕ ಮಾಡ ತಕ್ಕ ವಿಚಾರದಲ್ಲಿ ಕೇಂದ್ರದವರ ಒಂದು ಸಲಹೆ ಮೇರೆಗೆ 1965 ರಲ್ಲಿ ಇದನ್ನು ಜಾರಿಗೆ ತಂದರು. ಒಂದು ವರ್ಷಮಾತ್ರ ಅದನ್ನು ಚಲಾವಣೆಗೆ ಕೊಟ್ಟರು. ಆದರೆ ಅದು ಅಷ್ಟಕ್ಕೆ ನಿಂತುಹೋಯಿತು. ಇತ್ತೀಚೆಗೆ ಖಾಸಗೀ ಶಾಲೆಗಳಲ್ಲಿ ಈ ಉಪಾಧ್ಯಾಯರುಗಳನ್ನು ವರ್ಷ ವರ್ಷವೂ ಅವರನ್ನು ವರ್ಷದ ಕೊನೆಯಲ್ಲಿ ರಲೀವ್ ಮಾಡಿ ಮತ್ತೆ ವರ್ಷಾರಂಭವಾದ ನಂತರ ಅವರನ್ನು ಕೆಲಸಕ್ಕೆ ನೇಮಕ ಮಾಡಿ ಕೊಳ್ಳುತಿದ್ದಾರೆ. ಇದರಿಂದ ಅನೇಕರಿಗೆ ಬಹಳ ಅನ್ಯಾಯವಾಗುತ್ತಿದೆ. ಈ ವರ್ಷ ಒಬ್ಬ ಉಪಾ ಧ್ಯಾಯ ತಾನು ಯಾವ ಶಾಲೆಯಲ್ಲಿ ಹೆಡ್ಮಾಷ್ಟರಾಗಿ ಕೆಲಸಮಾಡುತ್ತಿರುತ್ತಾನೋ ಅದೇ ಹೆಡ್ಮಾ ಸ್ಟರು ಮಾರನೇ ವರ್ಷ ತನ್ನ ಕೈಕೆಳಗಿದ್ದ ಅಸಿಸ್ಟೆಂಟ್ ಮಾಸ್ಟರಿಗೆ ಅಸಿಸ್ಟೆಂಟಾಗಿ ಕೆಲಸ ಮಾಡತಕ್ಕ ಸಂದರ್ಭಗಳು ಬಂದಿವೆ. ಇಂಥ ಸಂದರ್ಭಗಳಿರುತ್ತವೆ...........

Sri A. R. BADARINARAYANA.—In regard to these service matters there are so many problems. So the Government are taking interest in constituting a Committee to go into the question regarding the disparities in the salary conditions and service conditions because the Government have received inumerable representations regarding the injustice done to them. So I think after that Committee has been constituted and it goes into the question in detail it may be possible to regularise the irregularities that may have been there.

2. 30 P.M.

ಶ್ರೀ ಎ. ಜಿ. ಕೊಡಗಿ.—ವಿದ್ಯಾ ಸಚಿವರು ಕೊಟ್ಟಿರುವ ವಿವರಣೆ ಬಹಳ ಸೂಕ್ತವಾಗಿದೆ. ಆದರೆ ಇರುವ ತೊಡಕುಗಳನ್ನು ಶೀಘ್ರವಾಗಿ ಪರಿಹಾರ ಮಾಡದಿದ್ದರೆ ಮುಂದೆ ತೊಂದರೆಯಾಗು ವುದು. ಉಪಾಧ್ಯಾಯರ ನೇಮಕದ ವಿಚಾರದಲ್ಲಿ ಸಾಕಷ್ಟು ಗಮನ ಹರಿಸಬೇಕು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಸಂಖ್ಯೆ ಜಾಸ್ತಿ ಇದೆ, ವಿದ್ಯಾ ಸಂಸ್ಥೆಗಳೂ ಹೆಚ್ಚಾಗಿವೆ. ವಿದ್ಯಾ ಇಲಾಖೆ ಬಹು ದೊಡ್ಡ ಇಲಾಖೆ. ಬಹುಶಃ ರಾಜ್ಯದ ಬೊಕ್ಕಸದಿಂದ ಶೇಕಡ 50 ರಷ್ಟು ಈ ಇಲಾಖೆಗೆ ಖರ್ಚಾಗುತ್ತಿದೆ. ಇನ್ನೂ ಹೆಚ್ಚು ಖರ್ಚು ಮಾಡ ಬೇಕಾಗುತ್ತದೆ, ಈಗ ಒದಗಿಸಿರುವುದು ಸಾಕಾಗುವುದಿಲ್ಲ, ಈಗ ಮಂಗಳೂರಿನಲ್ಲಿ ಒಬ್ಬ ಡಿ.ಡಿ.ಪಿ.ಐ. ರವರ ಆಫೀಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯಾ ಸಂಸ್ಥೆ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರ ಸಂಖ್ಯೆ ಜಾಸ್ತಿಯಾಗಿರುವುದರಿಂದ ಅಷ್ಟು ವಿಶಾಲವಾದ ಪ್ರದೇಶದಲ್ಲಿ ಅವನ್ನು ಮ್ಯಾನೇಜ್ ಮಾಡಲು ಒಬ್ಬ ಡಿ. ಡಿ. ಪಿ. ಐ. ಗೆ ಕಷ್ಟವಾಗುವುದು. ಈ ದೃಷ್ಟಿಯಿಂದ ಇನ್ನೊಬ್ಬ ಡಿ. ಡಿ. ಪಿ. ಐ. ರವರನ್ನು ಉಡುಪಿಗೆ ಅಥವ ಬೇರೆ ಜಾಗದಲ್ಲಿ ಆ ಜಿಲ್ಲೆಯಲ್ಲಿ ಹಾಕಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಖಾಸಗಿ ಶಾಲೆಗಳ ವಿಚಾರದಲ್ಲಿ ಎರಡು ಮಾತು ಹೇಳುತ್ತೇನೆ. ಖಾಸಗಿ ಶಾಲೆಗಳು ಪ್ರಾಥಮಿಕ ಹಂತದಿಂದ ಕಾಲೇಜಿನವರೆಗೆ ಇವೆ. ಆ ಶಾಲೆಗಳಲ್ಲಿ ದುರ್ವ್ಯವಹಾರ ಇರುವುದನ್ನು ತಡೆಗಟ್ಟಬೇಕು, ಇಲ್ಲದಿದ್ದರೆ ಗಂಡಾಂತರ ಬರುವುದು. ಶಾಲೆಗಳಲ್ಲಿ ಉಪಾಧ್ಯಾಯರನ್ನು ನೇಮಕ ಮಾಡಲು ಲಂಚ ತೆಗೆದುಕೊಳ್ಳುವರು, ವರ್ಷೇ ವರ್ಷೆ ಉಪಾಧ್ಯಾಯರಿಂದ ಹಣ ವಸೂಲು ಮಾಡು ವರು. ವಿದ್ಯಾರ್ಥಿವೇತನ ಮತ್ತು ಫ್ರೀಶಿಪ್ಪುಗಳಲ್ಲಿ ವಂಚನೆಯಾಗುತ್ತಿದೆ. ಇದನ್ನು ಒಂದೆರಡು

ಸಂದರ್ಭಗಳಲ್ಲಿ ಗಮನಕ್ಕೆ ತಂದಿದ್ದೇನೆ. ಇದಕ್ಕೇ ಒಬ್ಬರು ಅಧಿಕಾರಿಗಳನ್ನು ವಿದ್ಯಾ ಇಲಾಖೆಯಲ್ಲಿ ನೇಮಿಸುವುದು ಒಳ್ಳೆಯದು. ಹಾಗೆ ಮಾಡಿದರೆ ಅವರು ಇದಕ್ಕೆಲ್ಲಾ ಗಮನ ಕೊಡಲು ಸಾಧ್ಯವಾಗುವುದು. ದುರುಪಯೋಗವನ್ನು ತಡೆಗಟ್ಟಲು ಒಬ್ಬರು ಅಧಿಕಾರಿ ಬೇಕು. ಹೊಸ ಒಂದು ಶಾಖೆಯನ್ನು ಇದಕ್ಕಾಗಿ ವಿದ್ಯಾ ಇಲಾಖೆಯಲ್ಲಿ ತೆರೆಯಬಹುದು. ಹಾಗೆ ಮಾಡದಿದ್ದರೆ ಒತ್ತಡವಿರುವಾಗ ಇದರ ಕಡೆಗೆ ಗಮನಹರಿಸುವುದು ಕಷ್ಟವಾಗುವುದು. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ವರ್ಷಗಟ್ಟಲೆ ಕ್ರಮ ತೆಗೆದುಕೊಳ್ಳುವುದು ನಿಧಾನವಾಗಬಹುದು. ಖಾಸಗಿ ಶಾಲೆಗಳಲ್ಲಿ ಉಪಾಧ್ಯಾಯರನ್ನು ನೇಮಕ ಮಾಡುವಾಗ ಜಾತಿಯ ತಳಹದಿಯಮೇಲೆ ನೇಮಕ ಮಾಡುವರು. ಬೇರೆ ಜಾತಿಯವರಿದ್ದರೆ ಏನಾದರೂ ನೆಪ ಹೂಡಿ ಅವರನ್ನು ಹೊರಗೆ ಹಾಕುವರು. ಇದರಿಂದ ದೇಶಕ್ಕೆ ಗಂಡಾಂತರ ಒದಗಬಹುದು. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಇದಕ್ಕೆ ಅವಕಾಶವಿಲ್ಲದಂತೆ ಮಾಡಬೇಕು. ಅನೇಕ ಸೂಚನೆಗಳನ್ನು ನಾವು ಕೊಟ್ಟಾಗ ಹಣದ ಅಭಾವವಿದೆ ಎಂದು ಹೇಳುವರು. ಇದರ ಬಗ್ಗೆ ಒಂದು ಸೂಚನೆ ಕೊಡುತ್ತೇನೆ. ಇಂದು ರಾಜ್ಯದಲ್ಲಿ ಪ್ರೌಢಶಾಲೆಯವರೆಗೆ ಶಿಕ್ಷಣ ಕೊಡುವ ಹೊಣೆ ಸರಕಾರದಮೇಲಿದೆ. ಅದಕ್ಕಿಂತ ಮುಂದಕ್ಕೆ ಶಿಕ್ಷಣ ಕೊಡಬೇಕಾದ ಜವಾಬ್ದಾರಿ ಸರಕಾರದ ಮೇಲಿಲ್ಲ. ಇಂದು ಯಾವ ರಾಷ್ಟ್ರದಲ್ಲೂ ಕೂಡ ಉಚ್ಛ ಶಿಕ್ಷಣ ಕೊಡುವ ಜವಾಬ್ದಾರಿಯನ್ನು ಸರಕಾರ ವಹಿಸಿಕೊಂಡಿಲ್ಲ. ಆ ಜವಾಬ್ದಾರಿ ಸಮಾಜದಮೇಲಿದೆ. ಕಾಲೇಜು ಶಿಕ್ಷಣದ ಬಗ್ಗೆ ಸರಕಾರದ ಹೊಣೆಯಿಲ್ಲ. ಹೈಯರ್ ಎಜುಕೇಷನ್‌ಗೆ ಈಗಿರುವ ಅಗ್ರಿಕಲ್ಚರಲ್ ರಿಫೈನಾನ್ಸ್ ಕಾರ್ಪೊರೇಷನಿನಂತೆ ಒಂದು ಎಜುಕೇಷನಲ್ ರೀಫೈನಾನ್ಸ್ ಕಾರ್ಪೊರೇಷನ್ ಮಾಡಿ ಉಚ್ಛ ಶಿಕ್ಷಣಕ್ಕೆ ಸಾಲ ಕೊಟ್ಟು ವಿದ್ಯಾರ್ಥಿ ಓದಿ ಕೆಲಸಕ್ಕೆ ಸೇರಿದ ಮೇಲೆ ಅದನ್ನು ಕಂತಿನ ರೂಪದಲ್ಲಿ ವಸೂಲು ಮಾಡಬೇಕು. ಹಾಗೆ ಮಾಡಿದರೆ ಸಮಾಜಕ್ಕೆ ಹೆಚ್ಚು ಸಹಾಯ ಮಾಡಿದಂತಾಗುವುದು. ಹಾಗಿಲ್ಲದೆ ಸಂಪೂರ್ಣ ಜವಾಬ್ದಾರಿಯನ್ನು ಸರಕಾರ ವಹಿಸಿಕೊಂಡರೆ ಹತ್ತು ವರ್ಷದಮೇಲಾಗಬಹುದು. ಸಂಪೂರ್ಣ ಜವಾಬ್ದಾರಿ ಸರಕಾರ ವಹಿಸುವುದಕ್ಕಾಗುವುದಿಲ್ಲ. ಈಗ ಉಚ್ಛ ಶಿಕ್ಷಣ ಪಡೆದವರಿಂದ ಸಮಾಜಕ್ಕೆ ಸಲ್ಲಬೇಕಾದ ಸೇವೆ ಸಲ್ಲುತ್ತಿಲ್ಲವೆಂಬ ಭಾವನೆ ಇದೆ. ಅನೇಕರು ಸರಕಾರಿ ಖರ್ಚಿನಲ್ಲಿ ಹೊರದೇಶಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡಿ ಅಲ್ಲೇ ನೆಲಸುವರು, ಅದನ್ನು ತಮ್ಮ ಸ್ವಂತ ಉಪಯೋಗಕ್ಕೆ ಉಪಯೋಗಮಾಡಿಕೊಳ್ಳುವರು, ಅದರ ಬಗ್ಗೆ ಅವರು ಸಮಾಜಕ್ಕೆ ಹೊಣೆಗಾರರಲ್ಲ ಎಂಬ ಭಾವನೆ ಇದೆ. ಉಚ್ಛ ಶಿಕ್ಷಣ ಪಡೆದವರ ಮೇಲೆ ಸಮಾಜದ ಹೊಣೆ ಇದೆ ಎಂಬುದನ್ನು ಅವರ ಗಮನಕ್ಕೆ ತರಬೇಕಾಗಿದೆ. ಹಾಗೆ ಮಾಡಿದರೆ ಇಂದು ಇರುವ ಸಮಸ್ಯೆ ಪರಿಹಾರವಾಗಬಹುದು. ಸರಕಾರ ಸಹಾಯಮಾಡದಿದ್ದರೆ ಅನೇಕರಿಗೆ ಉಚ್ಛ ಶಿಕ್ಷಣ ಪಡೆಯಲು ಅವಕಾಶವಾಗುವುದಿಲ್ಲ. ಆದುದರಿಂದ ಸರಕಾರ ಸಹಾಯ ಮಾಡಿ ಅದನ್ನು ವಾಪಸು ಪಡೆಯಬಹುದು, ಕೆಲಸ ಸಿಕ್ಕಿದಮೇಲೆ ಸಾಲವನ್ನು ಕಂತುಗಳ ಪ್ರಕಾರ ವಸೂಲು ಮಾಡಬಹುದು. ಹಾಗೆ ಮಾಡದಿದ್ದರೆ ಇಂದು ಇರುವ ಸೇಕಡ 30 ರಷ್ಟು ವಿದ್ಯಾವಂತರ ಸಂಖ್ಯೆ ಜಾಸ್ತಿಯಾಗಲು ಅವಕಾಶವಾಗುವುದಿಲ್ಲ. ಹೀಗೆ ಸರಕಾರ ಸಹಾಯ ಮಾಡಿ ಹಿಂದುಳಿದ ಜನರನ್ನು ಮುಂದಕ್ಕೆ ತರಬೇಕು.

ಕೊನೆಯದಾಗಿ ಒಂದು ಮಾತು. ಯೂನಿವರ್ಸಿಟಿ ರಚನೆಯ ವಿಷಯದಲ್ಲಿ ಸಾಕಷ್ಟು ಹೇಳುತ್ತಿದ್ದಾರೆ. ರಾಜಕೀಯ ಪ್ರಶ್ನೆ ಇದರಲ್ಲಿ ಅಡಕವಾಗಿದೆ. ಅನೇಕರು ತಮ್ಮ ಜಿಲ್ಲೆಯಲ್ಲಿ ಹೊಸ ಯೂನಿವರ್ಸಿಟಿಯಾಗಬೇಕೆಂದು ಕೇಳುತ್ತಿದ್ದಾರೆ. ಇದು ರಾಜಕೀಯ ಪ್ರಶ್ನೆಯಾಗಬಾರದು. ಹೆಚ್ಚಿನ ಅನುಕೂಲತೆ ಇರುವ ಕಡೆ ಹೆಚ್ಚು ಕಾಲೇಜುಗಳು, ಶಾಲೆಗಳು, ಇರುವ ಕಡೆ ಹೊಸ ಯೂನಿವರ್ಸಿಟಿಯನ್ನು ಸ್ಥಾಪಿಸಬೇಕಾದ್ದು ಯೋಗ್ಯ. ರಾಜಕೀಯ ಒತ್ತಡಕ್ಕೆ ಮಣಿದು ಯೂನಿವರ್ಸಿಟಿ ಸ್ಥಾಪಿಸುವುದು ಸರಿಯಲ್ಲ. ಈ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ಪರಿಗಣಿಸಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸುವುದು ಯೋಗ್ಯವಾಗಿದೆ. ಕೇವಲ ತಾಂತ್ರಿಕ ಅಭಿಪ್ರಾಯವನ್ನು ಮಾತ್ರ ಗಣನೆಗೆ ತೆಗೆದುಕೊಂಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸುವುದು ಆಗತ್ಯವಾಗಿರುವುದರಿಂದ ಮತ್ತು ಅದು ಯೋಗ್ಯ ಸ್ಥಳವಾಗಿರುವುದರಿಂದ ಅಲ್ಲಿ ಹೊಸ ಯೂನಿವರ್ಸಿಟಿಯನ್ನು ಸ್ಥಾಪಿಸಬೇಕೆಂದು ಪ್ರಾರ್ಥಿಸಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಅಧ್ಯಕ್ಷಣಿಯವರೆ, ಈ ವಿದ್ಯಾ ಇಲಾಖೆಯ ಬೇಡಿಕೆಯನ್ನು ನಾನು ಬಹಳ ವಿಷಾದದಿಂದ ವಿರೋಧಿಸಬೇಕಾಗಿದೆ. ಕಾರಣ ಇಷ್ಟು, ಬೃಹದಾಕಾರವಾಗಿ ಬೆಳೆಯುತ್ತಾ ಇರತಕ್ಕಂಥ ವಿದ್ಯಾ ಇಲಾಖೆಗೆ ಕೊಟ್ಟಿರತಕ್ಕಂಥ 67 ಕೋಟಿ 1 ಲಕ್ಷ ರೂಪಾಯಿಗಳು ಏನು ಇವೆ. ಅದು ನಮ್ಮ ದೇಶದ ಅವಿದ್ಯಾವಂತ ಜನರನ್ನು ಸಾಕಷ್ಟು ವಿದ್ಯಾವಂತರನ್ನಾಗಿ ಮಾಡತಕ್ಕ ಸದುದ್ದೇಶದಿಂದ ಕೊಟ್ಟಿರತಕ್ಕದ್ದು. ಎಲ್ಲಾ ಇಲಾಖೆಗೆ ಕೊಟ್ಟ

(ಶ್ರೀ ಎಚ್. ಎಸ್. ಸಿದ್ದಪ್ಪ)

ಹಾಗೆ ಇದಕ್ಕೂ ಕೊಡಬೇಕು ಎನ್ನತಕ್ಕಂಥ ಏನೋ ಒಂದು ನಿರ್ದಿಷ್ಟವಾದ ಆಧಾರದ ಮೇಲೆ ಕೊಟ್ಟಿದ್ದಾರೆ ವಿನಹ ಗ್ರಾಮಾಂತರ ಪ್ರದೇಶದಲ್ಲಿ ಅದರಲ್ಲೂ ನಮ್ಮ ಸಂಸ್ಥಾನದಲ್ಲಿರತಕ್ಕಂಥ ರೈತಾಪಿ ಜನ ಏನು ಇದ್ದಾರೆ ಅವರಲ್ಲಿರತಕ್ಕ ಅವಿದ್ಯಾವಂತತನವನ್ನು ನಿವಾರಣೆ ಮಾಡತಕ್ಕ ಪ್ರಯತ್ನದಿಂದ ಅಲ್ಲ ಎಂದು ಇದನ್ನು ವಿರೋಧಿಸಬೇಕಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಇವತ್ತು ಪ್ರೈಮರಿ ಪಾಠಶಾಲೆಗಳಲ್ಲಿ ಏನಾಗಿದೆ ಎಂದರೆ, ಅಲ್ಲಿ ಅವಿದ್ಯಾವಂತ ವರ್ಗ ಏನು ಇದೆ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ನೇಮಿಸತಕ್ಕ ಸಂದರ್ಭ ಬಂದಾಗ ಉಪಾಧ್ಯಾಯರುಗಳನ್ನು ಆದಷ್ಟು ಜನ ಮಹಿಳೆಯರನ್ನೆ ನೇಮಿಸಿದರೆ ಅವರು ಈ ಅವಿದ್ಯಾವಂತತೆಯನ್ನು ನಿವಾರಣೆ ಮಾಡುವುದಕ್ಕೆ ಸಹಾಯವಾಗುತ್ತಾರೆ. ಕಾರಣ ಇಷ್ಟೆ, ಈಗ ಇರತಕ್ಕ ಅಧ್ಯಾಪಕರು, ಏನು ಇದ್ದಾರೆ, ಅವರಿಗೆ ಪ್ರತಿಯೊಬ್ಬರಿಗೂ 100-75 ಎಕರೆ ಜಮೀನು, ತೋಟ ತುಡಿಕೆ ಮಾಡಿಕೊಂಡಿದ್ದಾರೆ. ಬೇರೆ ವೃತ್ತಿಗಳಲ್ಲಿ ತೊಡಗಿದ್ದಾರೆ. ಮಾನ್ಯ ಮಂತ್ರಿಗಳ ಜೊತೆಯಲ್ಲಿ ಹಿಂದೆ ನಾನು ಒಂದು ಸಾರಿ ಪ್ರಯಾಣ ಮಾಡುವಾಗ ಇದನ್ನು ಹೇಳಿದ್ದೇನೆ. ಒಂದು ಪಾಠ ಶಾಲೆಗೆ ನಾನು ಡಿ. ಇ. ಒ. ಅವರು ಮತ್ತು ಮಂತ್ರಿಗಳು ನಮ್ಮ ಕ್ಷೇತ್ರದಲ್ಲಿ ಭೇಟಿ ಮಾಡಿದಾಗ ಅದು ಬಿಸಿಲ ಕಾಲ, ಅಲ್ಲಿಯ ಉಪಾಧ್ಯಾಯರು, ಬನಿಯನ್ ಬಿಚ್ಚಿ ಹಾಕಿಕೊಂಡು ಚಡ್ಡಿಯಲ್ಲಿದ್ದು ಪೇಪರಿನಲ್ಲಿ ಹಲಸಿನ ಬೀಜ ತಿನ್ನುತ್ತಿದ್ದರು. ಆಗ ನಾವು ಇದು ಏನೆಂದು ಕೇಳಿದರೆ, ಅವರು ಸೈನ್ಸ್ ಪಾಠ ಹೇಳಿಕೊಡುತ್ತೇನೆಂದು ಹೇಳಿದರು. ಹಲಸಿನ ಬೀಜ ಇಟ್ಟುಕೊಂಡು ಏನು ಪಾಠ ಹೇಳಿಕೊಡುತ್ತೀರಿ ಎಂದರೆ, ಅವರು ಹುರಿದ ಹಲಸಿನ ಬೀಜ ಹುಟ್ಟುವುದಿಲ್ಲ ಎಂದು ಸೈನ್ಸ್ ಪಾಠ ಹೇಳುತ್ತಿದ್ದೇನೆ ಎಂದು ಹೇಳಿದರು. ಪ್ರೈಮರಿ ಶಾಲೆಯ ಮಕ್ಕಳಿಗೆ ಹಲಸಿನ ಬೀಜ ಪಾಠ ಹೇಳಿಕೊಡುವ ಪ್ರಮೇಯವೇ ಇಲ್ಲ. ಇಂಥ ಅಧ್ಯಾಪಕರು ಎಲ್ಲೆಲ್ಲಿ ಇದ್ದಾರೆ ಅವರು ಪಾಠ ಪ್ರವಚನವನ್ನು ನಮ್ಮ ಮಕ್ಕಳಿಗೆ ಮಾಡುವುದಿಲ್ಲ. ಅವರು ಬೆಳಿಗ್ಗೆ ಎದ್ದ ತಕ್ಷಣ ಅವರ ತೋಟ ಮಾಡಿಕೊಂಡು 10 ಹತ್ತೂವರೆ ಗಂಟೆಗೆ ಸ್ಕೂಲಿಗೆ ಬಂದರೆ, ಒಂದು ಮಾವಿನಕಾಯಿ ಚಿತ್ರ ಬರೆದು ಆರಾಮವಾಗಿ ತೂಕಡಿಸುತ್ತಾ ಇರುತ್ತಾರೆ. ಇಂಥ ಅಧ್ಯಾಪಕರನ್ನು ಇಟ್ಟುಕೊಂಡು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಪ್ರೈಮರಿ ವಿದ್ಯಾಭ್ಯಾಸ ನಡೆಸುವುದು ಕಷ್ಟವಾಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಆದ್ದರಿಂದ ಕಡ್ಡಾಯವಾಗಿ ಒಂದು ನಿಯಮ ಮಾಡಿ ಯಾವ ಅಧ್ಯಾಪಕರೂ ಪ್ರೈಮರಿ ಅಧ್ಯಾಪಕರ ಮಟ್ಟದಲ್ಲಿಯೂ ಜಮೀನು ವಗೈರೆ ಹೊಂದಿರಬಾರದು ಎಂದು ಹೇಳಬೇಕು. ಹಿಂದಿನಕಾಲದಲ್ಲಿ ಮಕ್ಕಳಿಗೆ ಪೂರ್ಣ ವಿದ್ಯೆಯನ್ನು ಕೊಟ್ಟು ಜ್ಞಾನವಂತರನ್ನಾಗಿ ಮಾಡುತ್ತಿದ್ದುದು ನಮಗೆ ನೆನಪು ಬರುತ್ತದೆ. ಆ ರೀತಿ ಆಶ್ರಮದಲ್ಲಿ ಮಾಡುವಂತೆ, ಈಗಿನ ವಿದ್ಯಾಭ್ಯಾಸದಲ್ಲಿ ಮಕ್ಕಳಿಗೆ ವಿದ್ಯೆಯನ್ನು ಕೊಡುತ್ತಿದ್ದಾರೆಯೇ ? ಇದು ಪ್ರಜಾಪ್ರಭುತ್ವದಲ್ಲಿ ದುರಾದೃಷ್ಟ. ಸ್ವತಂತ್ರ ಸರ್ಕಾರದಲ್ಲಿ ಅಧ್ಯಾಪಕರು, ರಾಜಕೀಯ ಅಧ್ಯಾಪಕರುಗಳು, ವ್ಯವಸಾಯದ ಅಧ್ಯಾಪಕರುಗಳು ಹೀಗೆ ತರಹ ತರಹ ಅಧ್ಯಾಪಕರುಗಳಾಗಿದ್ದಾರೆ. ಇವರನ್ನೆಲ್ಲಾ ನಿರ್ಮೂಲ ಮಾಡುವ ವ್ಯವಸ್ಥೆಯನ್ನು ಮಾನ್ಯ ಸಚಿವರು ಕೈಗೊಳ್ಳಬೇಕು.

ಶ್ರೀ ಎ. ಆರ್. ಬದರೀನಾರಾಯಣ್.—ಈಗ ಇರುವವರನ್ನು ಏನು ಮಾಡಬೇಕು ?

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರನ್ನು ಆದಷ್ಟು ಬೇಗ ರಿಟೈರ್ ಮಾಡಿಸಿ, ಹೆಣ್ಣುಮಕ್ಕಳನ್ನು ನೇಮಕ ಮಾಡಿಕೊಳ್ಳುವುದನ್ನು ಜಾಸ್ತಿಮಾಡಿ. ಹೆಣ್ಣು ಮಕ್ಕಳಿಗೆ ಇಂಥ ಹವ್ಯಾಸಗಳು ಇರುವುದಿಲ್ಲ. ಅವರು ಸ್ಕೂಲಿನಲ್ಲಿ ಮಕ್ಕಳಿಗೆ ನಿಷ್ಠೆಯಿಂದ ಪಾಠ ಮಾಡುತ್ತಾರೆ.

ಕಳೆದ ಸಾರಿ ಮಾನ್ಯ ಸಚಿವರು ನಮ್ಮ ರಾಜ್ಯಾದ್ಯಂತ ಜೂನಿಯರ್ ಕಾಲೇಜುಗಳನ್ನು ತೆರೆದಿದ್ದಾರೆ. ಅದಕ್ಕೆ ಸಾಕಷ್ಟು ಹಣ ಸಾಲದು, ಕೊರತೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಜೂನಿಯರ್ ಕಾಲೇಜುಗಳನ್ನು ಅವಶ್ಯಕವಾಗಿ ಮಾಡಿ ಬಡಬಗ್ಗರಿಗೆ ಸಹಾಯಮಾಡಬೇಕು. ಇಲ್ಲದೆ ಹೋದರೆ ಅವರು ಕಾಲೇಜು ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಪ್ರತಿ ವರ್ಷವೂ ಇಂತಿಷ್ಟು ಕಾಲೇಜುಗಳನ್ನು ತೆಗೆಯಬೇಕು ಎನ್ನುವ ಪದ್ಧತಿ ಹಾಕಿಕೊಂಡು ಮಾಡುವುದು ಒಳ್ಳೆಯದು. ಹಣದ ಅಭಾವದಿಂದ ಜೂನಿಯರ್ ಕಾಲೇಜುಗಳನ್ನು ತೆಗೆಯುವುದಿಲ್ಲ ಎಂದು ನಿಲ್ಲಿಸಬಿಡಬೇಡಿ. ಅನೇಕ ಗ್ರಾಮೀಣ ಜನರಿಗೆ ಇದರಿಂದ ವಿದ್ಯಾ ಪ್ರಸಾರ ಕಡಿಮೆಯಾಗುತ್ತದೆ. ಹೇಗಾದರೂ ತಾವು ಹೋರಾಟ ಮಾಡಿ ಮತ್ತಷ್ಟು ಜೂನಿಯರ್ ಕಾಲೇಜುಗಳನ್ನು ಸ್ಥಾಪನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮೈಸೂರು ಯೂನಿವರ್ಸಿಟಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಮೈಸೂರು ಯೂನಿವರ್ಸಿಟಿಯಲ್ಲಿ ಬಹಳ ಅತ್ಯಾಚಾರಗಳು, ಗುಂಪುಗುಳಿತನ, ರಾಜಕೀಯ ನಡೆಯುತ್ತಿದೆ ಎಂದು ಗುರುತರವಾದ ಅಪಾದನೆ ಇದೆ. ಈ ಸಂದರ್ಭವಲ್ಲಿ ಉದಾಹರಣೆಗೆ ಹೇಳುವುದಾದರೆ, ಇನ್ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡಿ ಎಂದು ಹೇಳಿ ಒಂದು ಅಲ್ಲಿ ಸೆಕ್ಷನ್ ಅನ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಒಬ್ಬ ಜಿಯಾಗ್ರಫೀ, ಲೆಕ್ಚರರ್ ಅನ್ನು ಡೈರೆಕ್ಟರ್ ಆಗಿ ಮಾಡಿದ್ದಾರೆ. ಆತ ಶ್ರೀಮಾಲಿಯವರ ಕಾಲದಲ್ಲಿ ಅನೇಕ ಸಾರಿ ಪ್ರೊಫೆಸರ್ ಹುದ್ದೆಗೆ ಇಂಟರ್‌ವ್ಯೂ ಬಂದಾಗಲೆಲ್ಲ ಡಿಸ್‌ಕ್ವಾಲಿಫೈ ಆಗಿದ್ದಾನೆ. ಅಂಥವನನ್ನು ತೆಗೆದುಕೊಂಡು ಹೋಗಿ ಇನ್ಸ್‌ಸ್ಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್ ನಲ್ಲಿ ಡೈರೆಕ್ಟರ್ ಮಾಡಿದ್ದಾರೆ. ಇನ್ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್ ಏತಕ್ಕೋಸ್ಕರ ಎಂದರೆ, ದೇಶದ ಆರ್ಥಿಕ ಪ್ರಗತಿಯ ಸಾಧನೆ ಬಗ್ಗೆ ಒಂದು ಎಕಾನಾಮಿಕ್ ಸ್ಟಡಿ ಮಾಡುವುದಕ್ಕೆ. ಅದರಲ್ಲಿ ಎಕ್‌ನಾಮಿಕ್ ಪ್ಲಾನಿಂಗ್ ಮಾಡಬೇಕು, ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಪರಿಶೀಲನೆ ಮಾಡಿ ಸಹಾಯ ಮಾಡಬೇಕು. ಅಂಥ ಒಂದು ಸಮಿತಿಗೆ ಎಕನಾಮಿಸ್ಟ್ ಅನ್ನು ಡೈರೆಕ್ಟರ್ ಮಾಡ ತಕ್ಕಂಥಾದ್ದು ಸ್ವಾಭಾವಿಕವಾಗಿ ನಡೆದುಕೊಂಡು ಬಂದಿದೆ ನನಗೆ ಆಶ್ಚರ್ಯವೇನೆಂದರೆ, ಜಿಯಾಗ್ರಫಿ ಲೆಕ್ಚರ್‌ರನ್ನು ತೆಗೆದುಕೊಂಡು ಹೋಗಿ ಇನ್ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್ ಡೈರೆಕ್ಟರ್ ಮಾಡತಕ್ಕ ಅವಶ್ಯಕತೆ ಏನು ಇತ್ತು ? ಏಕೆ ಮಾಡಿದರು ? ಬೆಂಗಳೂರಿನಲ್ಲಿ ಇನ್ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್ ಇದೆ, ಆದಕ್ಕೆ ಡಾ. ವಿ. ಕೆ. ಆರ್ ವಿ. ರಾವ್ ಅವರು ಡೈರೆಕ್ಟರ್ ಆಗಿದ್ದಾರೆ. ಧಾರವಾಡದಲ್ಲಿ ಇದೇ ಸಂಸ್ಥೆಗೆ ಒಳ್ಳೆಯ ಎಕಾನಮಿಸ್ಟ್ ಅನ್ನು ನೇಮಕ ಮಾಡಿದ್ದಾರೆ. ಆದರೆ ಮೈಸೂರು ಯೂನಿವರ್ಸಿಟಿಯಲ್ಲಿ ಭೂಗೋಳದ ಅಧ್ಯಾಪಕರನ್ನು ತೆಗೆದುಕೊಂಡು ಹೋಗಿ ಡೈರೆಕ್ಟರ್ ಮಾಡಿದ್ದಾರೆ. ಈ ವ್ಯವಸ್ಥೆಯನ್ನು ಏತಕ್ಕೆ ಮಾಡಿದರು ? ಅದಕ್ಕೆ ಮುಂಜೂರಾತಿ ದೊರೆತಿದೆಯೋ ? ಇವನ್ನು ಮಾನ್ಯ ಸಚಿವರು ತೀವ್ರವಾಗಿ ಪರಿಶೀಲಿಸಬೇಕು. ಮೈಸೂರು ಯೂನಿವರ್ಸಿಟಿಯಲ್ಲಿ ಆರ್. ಪಿ. ಮಿಶ್ರಾ ಅವರು ಜಿಯಾಗ್ರಫಿ ಆರ್ಡಿನರಿ ರೀಡರ್, ಅವರನ್ನು ಇದಕ್ಕೆ ಡೈರೆಕ್ಟರ್ ಮಾಡತಕ್ಕಂಥ ಕುತಂತ್ರ ನಡೆದಿದೆ ಅದನ್ನು ತಾವು ಪರಿಶೀಲನೆ ಮಾಡ ಬೇಕು; ಎಂದು ಈ ಸಂದರ್ಭವಲ್ಲಿ ಹೇಳಬಯಸುತ್ತೇನೆ.

ಇನ್ನು ಮೈಸೂರು ಯೂನಿವರ್ಸಿಟಿಯಲ್ಲಿ ಕಳೆದ ಸಾರಿ ಪ್ರಶ್ನೆ ಪತ್ರಿಕೆಗಳಿಗೆ ಉತ್ತರವನ್ನು ಇಂಗ್ಲೀಷಿನಲ್ಲಿ ಬರೆಯುವುದಕ್ಕೆ, ಒಬ್ಬ ವಿದ್ಯಾರ್ಥಿ ಕನ್ನಡದಲ್ಲಿ ಉತ್ತರ ಬರೆದ. ಹೊರಗಡೆಯಿಂದ ಎಕ್ಸಾಮಿನಸ್ಸ್‌ಗೆ ಕನ್ನಡ ಬರುವುದಿಲ್ಲ. ಅವನು ನ್ಯಾಯವಾಗಿ ಇಂಗ್ಲೀಷನಲ್ಲಿ ಉತ್ತರ ಬರೆಯ ಬೇಕಾಗಿತ್ತು. ಆದರೆ ಒಬ್ಬ ವ್ಯಕ್ತಿ ಮಾತ್ರ ಕನ್ನಡದಲ್ಲಿ ಉತ್ತರ ಬರೆಯುವುದಕ್ಕೆ ಅವಕಾಶ ಮಾಡಿ ಕೊಟ್ಟು, ಕನ್ನಡದ ಪ್ರೊಫೆಸರ್ ಅನ್ನು ಅಪಾಯಿಂಟ್ ಮಾಡಿ, ಅವರು ಫೇಲ್ ಆಗುವ ಈ ವಿದ್ಯಾರ್ಥಿಗೆ ಫಸ್ಟ್ ರ‍್ಯಾಂಕ್ ಎಂ ಎಸ್ ಸಿ, ಕೊಡುವ ವ್ಯವಸ್ಥೆಯನ್ನು ಯೂನಿವರ್ಸಿಟಿಯ ವೈಸ್ ಚಾನ್ಸಲರ್ ಮಾಡಿದ್ದಾರೆ. ಇದರ ಬಗ್ಗೆ ಗುರುತರವಾದ ಅಪಾದನೆಗಳನ್ನು ವಿದ್ಯಾರ್ಥಿಗಳು, ಅಧ್ಯಾಪಕರು ಮಾಡುತ್ತಾರೆ. ಈ ವಿದ್ಯಾರ್ಥಿ ವೈಸ್ ಚಾನ್ಸಲರ್ ಅವರ ಡಿಸ್ಟೆಂಟ್ ರಿಲೇಟೀವ್. ಅಂಕಗಳನ್ನು ಕೊಟ್ಟ ಪ್ರೊಫೆಸರ್‌ಗೂ ಇವನು ಡಿಸ್ಟೆಂಟ್ ರಿಲೇಟೀವ್ ಇಂಥ ವ್ಯವಸ್ಥೆ ನಡೆಯ ಬಾರದು. ವಿದ್ಯಾ ಪ್ರಸಾರ ಕಾಲದಲ್ಲಿ ನಿಜವಾಗಿಯೂ ಇಂಥಾದ್ದು ನಡೆಯ ಬಾರದು ಎಂದು ಬಹು ಜನ ಹೇಳುತ್ತಿದ್ದಾರೆ, ಇದನ್ನು ಪರಿಶೀಲನೆ ಮಾಡಿ, ಇದು ನಿಜವಲ್ಲದೆ ಹೋದರೆ, ಆಪ್ಯಾಯಮಾನವಾಗಿ ಸ್ವೀಕರಿಸುತ್ತೇವೆ, ನಿಜ ಇದ್ದಪಕ್ಷದಲ್ಲಿ ಅವರ ಬಗ್ಗೆ ಗುರುತರವಾದ ಕ್ರಮ ತೆಗೆದುಕೊಂಡು ಅವರನ್ನು ಶಿಕ್ಷಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸು ತ್ತೇನೆ.

ಇನ್ನು ಕೇಂದ್ರದ ಪುಸ್ತಕ ಭಂಡಾರ ಇಲ್ಲಿದೆ, ಕಳೆದ ಅಧಿವೇಶನದಲ್ಲಿ ಸುಮಾರು ಐದು ಜನ ಸದಸ್ಯರು ಕೇಂದ್ರ ಪುಸ್ತಕ ಭಂಡಾರದ ಬಗರಿಯವರು ಮಾಡಿರತಕ್ಕ ಅನೇಕ ಅವ್ಯವಹಾರಗಳನ್ನು ಒಂದೆರಡು ಅಲ್ಲ ಐದಾರು ಲಿಸ್ಟ್ ಮಾಡಿ ತಮಗೆ ತಿಳಿಸಿದ್ದೇವೆ. ಅದು ಏನಾಯಿತೋ, ತನಿಖೆ ನಡೆಯಿತೋ ಇಲ್ಲವೋ ಗೊತ್ತಿಲ್ಲ.

ಶ್ರೀ ವಿ. ಎಸ್. ಕೌಜಲಗಿ.—ಅದರ ಬಗ್ಗೆ ಕಳೆದ ಅಧಿವೇಶನವಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದೇವೆ ಈ ಅಪಾದನೆಗಳು ಸುಳ್ಳು, ಸರಿ ಕಂಡರೆ ನನ್ನ ಮೇಲೆ ಕ್ರಮ ತೆಗೆದುಕೊಳ್ಳಿ, ನಾನು ಗಳಿಸಿರತಕ್ಕ ಆಸ್ತಿಪಾಸ್ತಿಗಳ ವಿವರವೂ ಇದೆ. ಎಂದು ಅವರು ಅವರ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದಾರೆ. ಅದರ ಮೇಲೆ ಏನಾದರೂ ಇದೆಯೇ ಎಂದು ಚೌಕಾಸಿ ಮಾಡಿದ್ದೇವೆ. ಏನೂ ಇಲ್ಲ.

(ಶ್ರೀ ವಿ. ಎಸ್ ಕೌಜಲಗಿ

ಸನ್ಮಾನ್ಯ ಅಧ್ಯಕ್ಷರೇ, ಸಂಗೀತ, ನಾಟಕ ಅಕಾಡಮಿ ವಿಷಯದ ಬಗ್ಗೆ ಬಹುತೇಕ ಎಲ್ಲಾ ಸದಸ್ಯರು ಮಾತನಾಡಿದ್ದಾರೆ ಎಂದು ಕಾಣುತ್ತದೆ. ಇದನ್ನು ಹೇಗೆ ನಡೆಸಬೇಕು ಎನ್ನತಕ್ಕದ್ದರ ಕಡೆಗೆ ತೀವ್ರವಾಗಿ ಗಮನಹರಿಸಬೇಕು. ಸಂಗೀತ ಶಾಲೆಗಳು ಗ್ರಾಂಟನ್ನು ತೆಗೆದುಕೊಂಡು ಏನು ರನ್ ಮಾಡುತ್ತಿವೆ ಅವುಗಳ ಬಗ್ಗೆ ಒಂದೆರಡು ವಿಷಯವನ್ನು ಸಭೆಯಲ್ಲಿ ಹೇಳಬೇಕಾಗಿದೆ. ಅಧ್ಯಕ್ಷಿಣಿಯವರು ಕೂತಿದ್ದಾರೆ. ಹೇಳಬೇಕು ಎನ್ನುವುದಾದರೆ ಶ್ರೀ ಕೆ.ಎಚ್. ಪಾಟೀಲರು ಈ ಕಡೆ ಇದ್ದಾಗ ಆ ಸಂಸ್ಥೆಗಳ ಬಗ್ಗೆ ಹೇಳಿದ್ದಾರೆ. ಸನಾತನ ಕಲಾಕ್ಷೇತ್ರ ಬೆಂಗಳೂರಿನಲ್ಲಿ ಇದೆ. ಇದಕ್ಕೆ ಸಾಕಷ್ಟು ಹಣ ಕೊಡುತ್ತಿದ್ದೇವೆ, ಸನಾತನ ಕಲಾಕ್ಷೇತ್ರದ ಮಾಲೀಕರು ಅಲ್ಲಿಯ ಅಧ್ಯಾಪಕರನ್ನು ಯಾವರೀತಿ ನಡೆಸಿಕೊಳ್ಳುತ್ತಿದ್ದಾರೆ, ಅವರಿಗೆ ಯಾವ ರೀತಿ ಹಿಂಸೆ ಕೊಡುತ್ತಿದ್ದಾರೆ, ಹಿಂದೆ ಏನು ನಡದಿದೆ ಎಂದು ಶ್ರೀಮಾನ್ ಕೆ. ಎಚ್. ಪಾಟೀಲರು ಹೇಳಿದ್ದನ್ನು ಕೇಳಿದ್ದೇನೆ. ಹೆಣ್ಣುಮಕ್ಕಳು ಹಾಸ್ಟಲ್‌ನಲ್ಲಿ ಇರುವಾಗ ರಾತ್ರಿ ವೇಳೆಯಲ್ಲಿ ಹೋಗಿ ಅಸಭ್ಯರೀತಿಯಿಂದ ವರ್ತನೆ ಮಾಡಿದರು ಎಂದು ದೂರು ಬಂದವು, ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದರೂ ಕೂಡ ಈ ಬಗ್ಗೆ ಯೋಗ್ಯವಾದ ಕಾರ್ಯಕ್ರಮ ನಡೆದಿಲ್ಲ ಎಂದು ಕೇಳಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಹೇಳುತ್ತೇನೆ ಈ ದುರ್ವ್ಯವಹಾರ ದಿನೇ ದಿನೇ ಉಲ್ಬಣವಾಗುತ್ತಿದೆ. ಒಂದು ವಾರದ ಹಿಂದೆ ನಾವು ಹಬ್ಬದ ರಜೆ ಬರುವುದಕ್ಕೆ ಮುಂಚೆ ಯಾವುದೋ ಒಂದು ಪ್ರಶ್ನೆಯಲ್ಲಿ ತಿಳಿಸಿದೆ. ರಾಜಾಜಿನಗರದ ಹೊಸಹಳ್ಳಿ ಎಕ್ಸ್‌ಟೆನ್‌ಷನ್‌ನಲ್ಲಿ ಒಂದು ವಿದ್ಯಾಸಂಸ್ಥೆ ಅಧ್ಯಾಪಕಿಯನ್ನು ಸೀರೆ ರವಿಕೆ ಹರಿದು ಹೊಡೆದು ಕಳುಹಿಸಿದ್ದಾರೆ (ಆಕೆಯ ಹೆಸರು ಶ್ರೀಮತಿ ಎಚ್.ಆರ್. ರತ್ನ) ಈ ರೀತಿ ವಿದ್ಯಾಸಂಸ್ಥೆಗಳಲ್ಲಿ ನಡೆಯುತ್ತಿದ್ದರೆ ಹೇಗೆ ಇದರ ಮೇಲೆ ಸರಿಯಾದ ಹಿಡಿತ ಇಟ್ಟುಕೊಳ್ಳಬೇಕು ? ಇನ್ನು ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡತಕ್ಕ ಅನೇಕ ಜನ ಹುಡುಗಿಯರು ಕಡು ಬಡತನದಲ್ಲಿ ಇರುವವರು ಅವರು ಅಧ್ಯಾಪಕರಾಗಿ ಹೋಗಿ ಕೆಲಸಮಾಡಿ ಹಣ ಸಂಪಾದನ ಮಾಡಿ ಜೀವನ ಮಾಡುವ ದೃಷ್ಟಿಯಿಂದ ಕೆಲಸಕ್ಕೆ ಸೇರುತ್ತಾರೆ ಅವರಿಗೆ ಹಿಂಸೆ ಆಗಬಾರದು. ಖಾಸಗಿ ಶಾಲೆಗಳಲ್ಲಿ ಅಧ್ಯಾಪಕರ ಅಪಾಯಿಂಟ್‌ಮೆಂಟ್ ಮಾಡುವುದು, ತೆಗೆಯುವುದು ಅವನ್ನೆಲ್ಲಾ ಸರ್ಕಾರ ಇಟ್ಟುಕೊಳ್ಳಬೇಕು. ಅವರಿಗೆ ಕೊಡುವ ಸಂಬಳ ಸರ್ಕಾರವೇ ರಿಕವರ್‌ಮಾಡಿ ಅವರಿಗೆ ಕೊಡುವ ವ್ಯವಸ್ಥೆ ಮಾಡಿದರೆ ನೆಟ್ಟಗೆ ಆಗುತ್ತದೆ ಎಂದು ನನಗನಿಸುತ್ತದೆ ಸನ್ಮಾನ್ಯ ಅಧ್ಯಕ್ಷರೇ, ಈ ವಿದ್ಯಾಭ್ಯಾಸದ ಬಗ್ಗೆ ನಮ್ಮ ವಿದ್ಯಾಪ್ರಸಾರದಲ್ಲಿ ಸ್ಟ್ಯಾಂಡರ್ಡ್ ದಿನೇ ದಿನೇ ಕುಸಿಯುತ್ತಿದೆ. ಬಹುತೇಕ ಸದಸ್ಯರೆಲ್ಲರಿಗೂ ಗೊತ್ತಿರಬಹುದು. ಹಿಂದೆ ಒಬ್ಬ ಎಸ್.ಎಸ್.ಎಲ್. ಸಿ., ಬಿ.ಎ. ಪಾಸ್ ಮಾಡಿದ ವಿದ್ಯಾರ್ಥಿ ಬರೆಯುತ್ತಿದ್ದ ಕಾಗದವನ್ನು ಇವೊತ್ತಿನದಿನ ಎಂ.ಎ. ಮತ್ತು ಎಂ.ಎಸ್.ಸಿ ಮಾಡಿರುವ ವಿದ್ಯಾರ್ಥಿಗಳು ಬರೆಯುವ ಕಾಗದಕ್ಕೂ ಹೋಲಿಸಿ ನೋಡಿದರೆ ಆಸಹ್ಯಕರವಾಗುತ್ತವೆ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಬಿ.ಎಸ್.ಸಿ. ಮತ್ತು ಬಿ.ಎಡ್. ಮಾಡಿದ ಒಬ್ಬ ಹುಡುಗ ನನಗೆ ಒಂದು ಕಾಗದ ಬರೆದಿದ್ದಾನೆ. ಇದು ಏತಕ್ಕೆ ಹೇಳುತ್ತೇನೆಂದರೆ ಅದನ್ನು ನೋಡಿದರೆ ನಮ್ಮ ಮನಸ್ಸು ನೋಯುತ್ತದೆ. ನಾವು ರೈತಾಪಿ ಜನ ವ್ಯವಸಾಯ ಮಾಡಿ ಬೆವರು ಸುರಿಸಿದ ಹಣದಿಂದ ನಮ್ಮ ಮಕ್ಕಳು ಒಳ್ಳೆಯ ಹೆಸರು ಪಡೆಯಲಿ ಎಂದು ಕಳುಹಿಸಿದರೆ ಈ ರೀತಿ ವಿದ್ಯಾಭ್ಯಾಸ ಕೊಟ್ಟು ಮನೆಗೆ ಕಳುಹಿಸಿದರೆ ಅವನು ಬುಷ್ ಶರಟು, ಕೂಲಿಂಗ್ ಗ್ಲಾಸ್ ಹಾಕಿಕೊಂಡು ಮನೆಗೆ ವಾಪಸು ಬರುತ್ತಾನೆ, ಅವನು ಹಳ್ಳಿಯಲ್ಲಿ ಕೆಲಸ ಮಾಡಲಿಕ್ಕೆ ಆಗುವುದಿಲ್ಲ, ಸಿಟಿಗೆ ಕೆಲಸಕ್ಕೆ ಹೋಗುತ್ತಾನೆ, ಇಲ್ಲಿ ವ್ಯವಸಾಯ ಹಾಳಾಗಿ ಹೋಗುತ್ತದೆ. ಸಿಟಿಯಲ್ಲಿ ಕೆಲಸ ಸಿಕ್ಕುವುದಿಲ್ಲ, ಈ ತರಹ ವಿದ್ಯಾಬ್ಯಾಸ ನಡೆಯುತ್ತಿದೆ. ಈ ಪ್ರಸಂಗ ನಮ್ಮ ಸದಸ್ಯರು ಹೇಳಿದಹಾಗೆ ಕೆಲವು ಮಕ್ಕಳು ಮಮ್ಮಿ ಎಂದಾಗ ನನ್ನ ಮಂಗ ಎನ್ನುತ್ತೀಯಾ ಅಥವಾ ಬೆಕ್ಕು ಎಂದು ಹೇಳುತ್ತೀಯಾ ಎನ್ನುವ ಪ್ರಸಂಗ ಬರುತ್ತದೆ ಎಂದು ನಾನು ಮನವಿ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಮ್ಮಿ ಎಂದು ಹೇಳುವಾಗ ಸಂತೋಷ ಪಡುವಂತ ತಂದೆ ತಾಯಿಗಳು ಇರುತ್ತಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ವಿದ್ಯಾಭ್ಯಾಸದಲ್ಲಿ ಬಹಳ ಬದಲಾವಣೆಗಳು, ಕ್ರಾಂತಿಕಾರಕವಾದ ಬದಲಾವಣೆಗಳು ಆಗಬೇಕು. ಇದರ ಬಗ್ಗೆ ಸರ್ಕಾರ ಪ್ರೋಗ್ರೆಸ್ ಇನ್ ಎಜುಕೇಷನ್ ಎಂದು ಶ್ರೀ ಎ. ಸಿ. ದೇವೇಗೌಡರಿಂದ ಬರೆಸಿರತಕ್ಕ ಪುಸ್ತಕ ಏನಿದೆ-ಅವನ್ನು ಪೂರ್ತಿ ಓದುವುದಕ್ಕೆ ಅವಕಾಶವಿಲ್ಲ, ಓದಿ ಹೇಳುವುದಕ್ಕೆ ಟೈಮ್ ಇಲ್ಲ. ಅದರಲ್ಲಿ ಇರತಕ್ಕ ಅಂಶಗಳನ್ನು ನಿಮ್ಮ ಸರ್ಕಾರ

ಆದಷ್ಟು ಜಾಗ್ರತೆ ವಿದ್ಯಾ ಇಲಾಖೆಯಲ್ಲಿ ಅನುಷ್ಠಾನಕ್ಕೆ ತಂದರೆ ಒಳ್ಳೆಯದು ಆದೀತು. ಸಂಸ್ಥಾನದ ಜನರ ವಿದ್ಯಾ ಮಟ್ಟ ಚೆನ್ನಾಗಿ ಅದೀತು ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಐ.ಜಿ. ಸನದಿ (ಹುಬ್ಬಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ವಿದ್ಯಾಮಂತ್ರಿಗಳು ತಂದಿರತಕ್ಕ 67 ಕೋಟಿ 1 ಲಕ್ಷದ 40 ಸಾವಿರ ರೂಪಾಯಿಗಳ ವಿದ್ಯಾ ಬೇಡಿಕೆಗೆ ಹೃತ್ಪೂರ್ವಕವಾದ ಬೆಂಬಲವನ್ನು ನಾನು ಸೂಚಿಸುತ್ತಾ ಅದರ ಜೊತೆಗೆ ಕಳೆದ ಒಂದು ವರ್ಷದಲ್ಲಿ ವಿದ್ಯಾ ಇಲಾಖೆಯಲ್ಲಿ ನಡೆದಂತ ಕೆಲವು ಸುಧಾರಣೆಗಳ ಕಡೆಗೆ ದೃಷ್ಟಿಯನ್ನು ಹಾಯಿಸಿ ಕೆಲವೊಂದು ಸಲಹೆಗಳನ್ನು ಮಾಡಬೇಕೆಂದು ಭಾವಿಸಿದ್ದೇನೆ. ಮುಖ್ಯವಾಗಿ ಒಂದು ರಾಷ್ಟ್ರ ಅಥವಾ ಒಂದು ದೇಶ ಕಟ್ಟುವ ಸಲುವಾಗಿ ವಿದ್ಯೆ ಮಹತ್ತರವಾದ ಪಾತ್ರ ವಹಿಸದೆ ಎನ್ನುವುದನ್ನು ಯಾರೂ ಮರೆಯಲಾಗದು. ಆದರ ಮೇಲೆ ಜವಾಬ್ದಾರಿಯುತ ಸಮಾಜ ಮತ್ತು ಸರ್ಕಾರ ಕಣ್ಣು ತೆರೆದು ಇರಬೇಕಾದುದು ಅಷ್ಟೇ ಮುಖ್ಯ. ಮನುಷ್ಯ ಎಂಥ ಕಾರ್ಯ ಮಾಡಬೇಕಾದರೂ ವಿದ್ಯೆ ಸಂಪಾದನೆ ಮಾಡಬೇಕು. ಸಂಪಾದನೆ ಮಾಡಿದಂತಹ ವಿದ್ಯೆ ಕೇವಲ ನೌಕರಿಗಳನ್ನು ಅಥವಾ ಹಣ ಸಂಪಾದನೆ ಮಾಡುವುದಕ್ಕೆ ಆದರೆ ಸಾಲದು. ಮನುಷ್ಯ ನಿಜವಾದ ಜೀವನವನ್ನು ನಡೆಸಿ ಮನುಷ್ಯನಾಗಿರಬೇಕು, ಮಾನವ ಮಾನವನಾಗಿರುವುದಕ್ಕೆ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎನ್ನುವುದೇ ವಿದ್ಯಾಭ್ಯಾಸದ ಗುರಿ, ಅದರ ಕಡೆಗೆ ವಿದ್ಯಾ ಇಲಾಖೆ ಲಕ್ಷ ವಹಿಸಬೇಕು. ವಿದ್ಯಾರ್ಥಿಗಳ ಜೀವನದ ಧ್ಯೇಯ, ಗುರಿ ಏನು ಇವೆ ಅದರ ಸಾಧನೆಯ ಜೊತೆಗೆ ಬಹಳ ಅತ್ಯಂಥ ಮುಖ್ಯವಾದ ನಾಯಕತ್ವವನ್ನು ವಹಿಸಲು ಬೇಕಾದ ಶಕ್ತಿ ನಿರ್ಮಾಣ ಮಾಡುವಂಥ ಒಂದು ಅವಕಾಶ ವಿದ್ಯಾಭ್ಯಾಸದಿಂದ ಉಂಟಾಗಬೇಕು. ಒಳ್ಳೆಯ ಚಾರಿತ್ರವನ್ನು ಪಡೆದಂಥಹ ಪೌರ ಸತ್ತ್ವಾತ್ಮಕ ಜೀವನ ಬೆಳೆಸತಕ್ಕಂಥ ವ್ಯಕ್ತಿಯನ್ನು ನಿರ್ಮಾಣ ಮಾಡತಕ್ಕ ಜವಾಬ್ದಾರಿ ಇವೊತ್ತು ವಿದ್ಯಾ ಇಲಾಖೆಯ ಮೇಲೆ ಇದೆ. ಮುಖ್ಯವಾಗಿ ಈಗ ನಾವು ನೋಡುತ್ತಿದ್ದೇವೆ, ಜೀವನದಲ್ಲಿ ಮೌಲ್ಯಗಳು ಬದಲಾವಣೆ ಹೊಂದಿವೆ. ಒಂದಾನೊಂದು ಕಾಲದಲ್ಲಿ ವಿದ್ಯಾ ಇದ್ದವರಿಗೆ ಗೌರವ, ಸ್ಥಾನಮಾನ ಸಿಕ್ಕುತ್ತಾ ಇದ್ದವು. ಈಗ ಈ ಮೌಲ್ಯ ಬದಲಾವಣೆಯಾಗಿ ಯಾವನ ಹತ್ತಿರ ಬಿಲ್ಡಿಂಗ್‌ಗಳು, ಮೋಟಾರ್‌ಕಾರ್‌ಗಳು ಇವೆ ಅಂತವರ ಚಾರಿತ್ರ್ಯ ಹೇಗೆ ಇದ್ದರೂ ಸರಿ ಗೌರವಿಸತಕ್ಕ ಕಾಲ ಬಂದಿರುವುದರಿಂದ ವಿದ್ಯಾ ಕ್ಷೇತ್ರದಲ್ಲಿ ಮಕ್ಕಳ ಸೇವೆ ಮಾಡತಕ್ಕ ಜನರೂ ಕೂಡ ಅದರಿಂದ ದೂರ ಸರಿದು ಹೋಗತಕ್ಕ ಪ್ರಸಂಗ ಇವೊತ್ತು ಬಂದಿದೆ ಎನ್ನುವುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ.

3-00 P. M.

ಒಂದು ಕಾಲಕ್ಕೆ ಹೇಳುತ್ತಿದ್ದರು. ಏನೆಂದರೆ ವಿದ್ಯೆ ಎಷ್ಟು ಮಹತ್ವದ್ದು ಎನ್ನುವುದರ ಬಗ್ಗೆ ಒಂದೇ ಒಂದು ಶ್ಲೋಕವನ್ನು ತಮ್ಮ ಎದುರಿಗೆ ಇಡಬಯಸುತ್ತೇನೆ. ಅದು ಈ ರೀತಿ ಇದೆ:—

''ವಿಧ್ಯಾನಾಮ ನರಸ್ಯ ರೂಪಮಧಿತಂ
ಪ್ರಚ್ಛನ್‌ಗುಪ್ತಂಧನಮು'.
ವಿದ್ಯಾಭೋಗತರಿ ಯಶಃ ಸುಖತರಿ
ವಿದ್ಯಾ ಗುರುಣಾಂ ಗುರುಃ
ವಿದ್ಯಾ ಬಂಧುಜನೋ ವಿದೇಶ ಗಮನೆ
ವಿದ್ಯಾ ಪರಂ ದೈವತಂ,
ವಿದ್ಯಾ ಸತ್ಕೃತಿ ನೃಪ ನತು ಧನಮ್
ವಿದ್ಯಾ ವಿಹೀನಃ ಪಶುಃ''

ಎಂದು ಈ ಮಾತನ್ನು ಹೇಳುತ್ತಿದ್ದರು. ಈ ರೂಪ, ಈ ಧನ, ಈ ಭೋಗ, ಈ ಸುಖ ಇವೆಲ್ಲವೂ ಕೂಡ ವಿದ್ಯೆಯಲ್ಲಿ ಇತ್ತು. ಸಮಾಜದಲ್ಲಿ ಪ್ರತಿಯೊಬ್ಬರಿಗೂ ವಿದ್ಯೆ ಇದ್ದರೆ ಅದನ್ನು ಅಷ್ಟು ಸುಲಭವಾಗಿ ಕಸಿದುಕೊಳ್ಳುವುದಕ್ಕಾಗುವುದಿಲ್ಲ. ಶಿಕ್ಷಣ ರಂಗದಲ್ಲಿ ಮಕ್ಕಳು ಎಂದರೆ ದೇವತೆ ಇದ್ದ ಹಾಗೆ. ಈ ಶಿಕ್ಷಣ ಕ್ಷೇತ್ರದಲ್ಲಿ ಮಕ್ಕಳಿಗೆ ಒಳ್ಳೆಯ ಸ್ಥಾನ ಗಳಿಸಿಕೊಡಬೇಕು. ಆದರೆ ಈಗ ಇದಕ್ಕೆ ಪ್ರಧಾನ ಸ್ಥಾನ ಸಿಕ್ಕುತ್ತಾ ಇಲ್ಲ. ಈ ವಿದ್ಯೆಯಲ್ಲಿ ಮಹಾಶಕ್ತಿ ಅಡಗಿದೆ. ಆದುದರಿಂದ ತಾವು ಈ ವಿದ್ಯಾ ಕ್ಷೇತ್ರಕ್ಕೆ ತ್ಯಾಗಜೀವಿಯಂತೆ ದುಡಿಯಬೇಕು. ಇದು ಮಕ್ಕಳ ಕಲ್ಯಾಣ ಉಂಟು

(ಶ್ರೀ ಐ. ಜಿ. ಸನದಿ)

ಮಾಡತಕ್ಕಂಥ ಶಿಕ್ಷಣ ಸಮುದಾಯ. ಆದುದರಿಂದ ಇದಕ್ಕೆ 67—68 ಕೋಟಿ ರೂಪಾಯಿ ಖರ್ಚು ಮಾಡುವುದು ಯೋಗ್ಯ ಎಂದು ಕಾಣುತ್ತದೆ. ವಿದ್ಯಾಮಂತ್ರಿಗಳು ಬಡವರ ಮೇಲೆ ಬಿದ್ದಿರುವುದು ನಿಜವಾದ ಸಂಗತಿಯಾಗಿದೆ. ಅದೇ ರೀತಿ ಎಲ್ಲರೂ ಕೂಡ ಮಾನವೀಯತೆಯಿಂದ ಈ ವಿದ್ಯಾ ಮಶಿಲ್ಯಕ್ಕೆ ತ್ಯಾಗ ಮಾಡಬೇಕು. ಈ ಪುಣ್ಯ ಎಲ್ಲರಿಗೂ ದೊರೆಯುವುದಿಲ್ಲ. ಏತಕ್ಕೆಂದರೆ ಈ ಶಿಕ್ಷಣ ಕ್ಷೇತ್ರದ ದುಡಿಮೆಯಿಂದ ಅರ್ಹತೆ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಪ್ರೈಮರಿ ಸ್ಕೂಲ್ ಕಟ್ಟಡದ ವಿಷಯವಾಗಿ ನಾನು ಹೋದ ಸಲ ಅಸೆಂಬ್ಲಿಯಲ್ಲೂ ಕೂಡ ಹೇಳಿದ್ದೆ. ಹುಬ್ಬಳ್ಳಿ ಧಾರವಾರ ನಗರದಲ್ಲಿರುವ ಪ್ರೈಮರಿ ಸ್ಕೂಲ್ ಗುಡಿಗಳಲ್ಲಿ, ಛತ್ರಗಳಲ್ಲಿ, ದೇವಾಲಯಗಳಲ್ಲಿ ಮತ್ತು ಹಳೇ ಕಟ್ಟಡಗಳಲ್ಲಿ ನಡೆಯುತ್ತಾ ಇದೆ ಅದು ಯಾವ ಸಮಯದಲ್ಲಾದರೂ ಮದರಿ ಬಿದ್ದುಹೋಗ ಬಹುದು ಎಂದು ಹೇಳಿದ್ದೆ. ಈವೊತ್ತು ಆ ಸ್ಕೂಲುಗಳನ್ನು ಮುನಿಸಿಪಾಲಿ ಯಿಂದ ಸರ್ಕಾರಕ್ಕೆ ವಹಿಸಿಕೊಂಡಮೇಲೆ ಸಾಮಾನ್ಯವಾಗಿ ಅವಕ್ಕೆ 1—2 ವರ್ಷಗಳಿಂದಲೂ ಕೂಡ ರಿಪೇರಿ ಆಗಿಲ್ಲ. ಅದು ಸರ್ಕಾರಕ್ಕೆ ಗೊತ್ತಿದೆಯೋ ಇಲ್ಲವೋ, ಪಿ. ಡಬ್ಲು. ಡಿ. ಯವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಮುನಿಸಿಪಾಲಿಟಿಯವರು ಈ ಬಿಲ್ಡಿಂಗಿಗೆ ಒಂದು ಪೈಸೇ ಕೂಡ ಖರ್ಚುಮಾಡುವುದಿಲ್ಲ. ಒಂದು ಸಲ ಏನಾಯಿತು ಎಂದರೆ ಮಳೆ ಬರುತ್ತಾ ಇತ್ತು. ಆವಾಗ ಮಳೆ ಬರುತ್ತಾ ಇದೆ ಕಟ್ಟಡ ಕುಸಿದು ಹೋಗಬಹುದು, ಹುಡುಗರೆಲ್ಲಾ ಹೊರಗೆ ಹೋಗಬೇಕು ಎಂದು ಹೇಳಿದಾಗ ಅದರಂತೆ ಹುಡುಗರೆಲ್ಲಾ ಹೊರಗೆ ಬಂದರು. ದೈವವಶಾತ್ ಆ ರೀತಿ ಹುಡುಗರೆಲ್ಲಾ ಹೊರಗೆ ಬಂದ ಮೇಲೆ ಆ ಕಟ್ಟಡ ಕುಸಿದು ಬಿದ್ದು ಹೋಯಿತು. ಈ ತರಹ ಬಿಲ್ಡಿಂಗ್ ನೂರಾರು ಇವೆ. ಈಗ ಸ್ವಲ್ಪ ದಿವಸದ ಹಿಂದೆ ನಮ್ಮ ಜಿಲ್ಲೆಗೆ ಸರ್‌ಪ್ರೈಸ್ ವಿಸಿಟ್ ಬಂದಿದ್ದಾಗ ಅವರನ್ನು ಕರೆದುಕೊಂಡು ಹೋಗಿದ್ದೆ. ಅವರು ಈ ರೀತಿ ಎಷ್ಟು ಶಾಲೆಗಳು ಆಗಿವೆ ಕಾಗದ ಬರೆಯಿರಿ ಎಂದು ಹೇಳಿದರು. ಆದರೆ ಇದರಲ್ಲಿ ಏನಾಗಿದೆ ಎಂದರೆ ರೆಡ್‌ಟೇಪಿಸಮ್ ಜಾಸ್ತಿಯಾಗಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇದಕ್ಕೋಸ್ಕರವಾಗಿ ಈಗಾಗಲೇ ಎಷ್ಟೋ ಪ್ರಾಥಮಿಕ ಶಾಲೆಗಳಿಗೆ ಸಾಕಷ್ಟು ಹಣ ವನ್ನು ಇಟ್ಟಿದ್ದಾರೆ. ಆ ಹಣ ಅವರಿಗೆ 31 ನೇ ಮಾರ್ಚ್ ಒಳಗೆ ಬರುತ್ತದೆ. ಈ ಬಗ್ಗೆ ಮುನಿಸಿ ಪಾಲಿಟಿಗಳಿಗೆ 6—6 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಅವರನ್ನು ಕೇಳಿದರೆ ನಮಗೆ ಸಚಿವ ರಿಂದ ಯಾವ ಆರ್ಡರ್ ಕೂಡ ಬಂದಿಲ್ಲ, ಆದುದರಿಂದ ನಾವು ಆ ಕೆಲಸವನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಮಾನ್ಯ ವಿದ್ಯಾಮಂತ್ರಿಗಳು ಇತ್ತ ಕಡೆ ಗಮನ ಕೊಡಬೇಕು ಎಂದು ಹೇಳಬಯಸುತ್ತೇನೆ. ಈಗ ಪ್ರಾಥಮಿಕ ಶಾಲೆಗಳು ಅನೇಕ ಕಡೆಗಳಲ್ಲಿ ಗುಡಿಸಲುಗಳಲ್ಲಿ, ಛತ್ರಗಳಲ್ಲಿ, ದೇವಾಲಯಗಳಲ್ಲಿ ಏನು ನಡೆಯುತ್ತಾ ಇದೆ ಇದರಿಂದ ಜಾತೀಯತೆ ಮನೋಭಾವ ಬೆಳೆಸಿದಂತಾಗುತ್ತದೆ ಎಂದು ಹೇಳುತ್ತೇನೆ. ಹೇಗೆಂದರೆ ಹರಿಜನ ಗಿರಿಜನರ ಮಕ್ಕಳು ಆ ಶಾಲೆ ಗಳಿಗೆ ಬಂದರೆ ಇತರ ಕೋಮಿನವರೊಂದಿಗೆ ಸೇರದೆ ದೂರವಾಗಿ ಕೂರಬೇಕಾಗುತ್ತದೆ ಆದುದರಿಂದ ಈ ಒಂದು ಪ್ರಶಾಂತ ವಾತಾವರಣವಿರುವುದರಿಂದ ಆ ಮಕ್ಕಳಿಗೆ ಯೋಗ್ಯವಾದ ಒಂದು ಶಿಕ್ಷಣ ಒದಗಿಸಿ ಕೊಡುವ ಸಲುವಾಗಿ ನಾವೆಲ್ಲಾ ಸೇರಿ ಅವರಿಗೆ ಅನುವು ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಶಿಕ್ಷಕರ ಬಗ್ಗೆ ಹೇಳುವುದಾದರೆ ಈ ವಿಷಯದಲ್ಲಿ ಅನೇಕರು ಬಹಳಷ್ಟು ಮಾತನಾಡಿದ್ದಾರೆ. ಈ ವಿಚಾರದಲ್ಲಿ ನಾನು ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಏನೆಂದರೆ ಗುರು ಅನ್ನುವುದು ಒಂದು ಭಾವನೆ ಏನು ಇದೆ ಆದರಲ್ಲಿ ವ್ಯಕ್ತಿ ಭಾವನೆ ಮುಖ್ಯ. ಆ ಭಾವನೆ ಪರಿಪೂರ್ಣ ವಾಗಿ ಮಕ್ಕಳಲ್ಲಿ ಬರಬೇಕು. ಶಾಲೆ ಎಂದರೆ ದೇವಾಲಯ ಇದ್ದ ಹಾಗೆ, ಮಕ್ಕಳು ಎಂದರೆ ದೇವರು ಇದ್ದ ಹಾಗೆ. ಈ ಭಾವನೆಯಿಂದ ನಾವು ಅವರನ್ನು ಕಾಪಾಡಬೇಕು. ಅದಕ್ಕಾಗಿ ಅವರು ತ್ಯಾಗ ಜೀವಿ ಆಗಬೇಕು. ಈ ವಿದ್ಯಾ ಕ್ಷೇತ್ರಕ್ಕೆ ಎಷ್ಟು ಹಣ ಖರ್ಚಾದರೂ ಸರಿ. ಆ ಮಕ್ಕಳು ಒಳ್ಳೆಯ ನಾಗರೀಕರಾಗಬೇಕು. ಈವೊತ್ತು ಒಳ್ಳೆಯ ಗುರು ಆಗಬೇಕು ಎಂದು ಏನು ಹೇಳುತ್ತೇವೆಯೋ ಅದೇ ರೀತಿ ಶಿಷ್ಯರೂ ಕೂಡ ಒಳ್ಳೆಯವರಾಗಬೇಕು. ಇದನ್ನು ನಿರೀಕ್ಷಿಸುವ ಸಲುವಾಗಿ ಮಾನ್ಯ ವಿದ್ಯಾ ಮಂತ್ರಿಗಳು ಇದಕ್ಕೆ ಹೆಚ್ಚಿನ ಸಹಾಯ ಮಾಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ.

ಇನ್ನು ಹೈಸ್ಕೂಲ್ ಸ್ಥಿತಿ ತೆಗೆದುಕೊಂಡರೆ ಅಲ್ಲಿ ಟೇಬಲ್ ಕಳುಹಿಸಿದಾಗ ಏನು ತೊಂದರೆ ಕೊಡುತ್ತಾರೆ ಎನ್ನುವುದನ್ನು ನಾನು ನೋಡಿದ್ದೇನೆ. ಇದರಲ್ಲಿ ಸರ್ಕಾರದ ಪಾತ್ರ ಬಹಳ ಮುಖ್ಯ ಇದೆ ಎಂದು ನಾನು ಹೇಳಬಯಸುತ್ತೇನೆ. ಏತಕ್ಕೆಂದರೆ ಅಲ್ಲಿರತಕ್ಕಂಥಾ ಅಧಿಕಾರಿಗಳ ಮೇಲೆ ಸರಿಯಾಗಿ ಸರ್ಕಾರದ ಹತೋಟಿ ಇಲ್ಲದೇ ಇರುವುದರಿಂದ ಅವರು ಸರ್ಕಾರಕ್ಕೆ ಕೆಟ್ಟ ಹೆಸರು ತರು

ತ್ತಾರೆ. ಒಂದು ಫೈಲನ್ನು ಮತ್ತೊಂದು ಕಡೆಗೆ ಕಳುಹಿಸುತ್ತಾರೆ, ಅದು ಮತ್ತೆ ವಾಪಸ್ಸು ಬರುತ್ತದೆ, ಹೀಗಾಗಿ ಕೆಲಸಗಳು ತುಂಬಾ ನಿಧಾನವಾಗುತ್ತವೆ. ಈ ವಿಚಾರವನ್ನು ಡಿ. ಡಿ. ಪಿ. ಐ. ಅವರ ಗಮನಕ್ಕೂ ತಂದಿದ್ದೇನೆ. ಕೆಲವು ಬಿಲ್ಡಿಂಗ್‌ಗಳಿಗೆ 4—5 ವರ್ಷವಾದರೂ ಬಾಡಿಗೆ ಕೊಡುವುದಿಲ್ಲ. ಈ ವಿಚಾರದಲ್ಲಿ ಒಂದು ಫೈಲು ಧಾರವಾಡಕ್ಕೆ ಬರುವುದಕ್ಕೆ ಬದಲಾಗಿ ಬೇರೆ ಎಲ್ಲೋ ಹೋಗಿ ವಾಪಸ್ಸು ಬಂತು. ಈ ರೀತಿ ಅಡ್ಮಿನಿಸ್ಟ್ರೇಷನ್‌ನಲ್ಲಿ ಕೆಲಸಗಳು ಬಹಳ ನಿಧಾನ ಆಗುತ್ತದೆ. ಈ ಬಗ್ಗೆ ಡಿಪಾರ್ಟ್‌ಮೆಂಟಲ್ ಅಧಿಕಾರಿಗಳನ್ನು ಕೇಳಿದರೆ ಏನೇನೋ ಹೇಳುತ್ತಾರೆ. ಸರಿಯಾಗಿ ಜವಾಬು ಕೊಡುವುದಿಲ್ಲ. ಇದಕ್ಕೆ ಒಬ್ಬ ಶಾಸಕರು ಮಧ್ಯೆ ಪ್ರವೇಶಿಸಬೇಕಾಯಿತು. ಈ ಸಣ್ಣ ವಿಷಯಕ್ಕೆಲ್ಲಾ ಶಾಸಕರು ಮಧ್ಯೆ ಪ್ರವೇಶಿಸಬೇಕಾದರೆ ಈ ಡಿಪಾರ್ಟ್‌ಮೆಂಟ್‌ನಲ್ಲಿರುವ ಅಧಿಕಾರಿಗಳು ಮತ್ತೇನು ಕೆಲಸ ಮಾಡುತ್ತಾರೆ ಎಂದು ಕೇಳುತ್ತೇನೆ.

ಇನ್ನು ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಮರಾಠಿ ಶಾಲೆಗಳು, ಉರ್ದು ಶಾಲೆಗಳು ಏನು ಇವೆ ಅಲ್ಲಿ ಇನ್‌ಸ್ಪೆಕ್ಷನ್ ಮಾಡಬೇಕಾದರೆ ಕನ್ನಡ ಕಲಿತವರೋ ಇಂಗ್ಲಿಷ್ ಕಲಿತವರೋ ಹೋಗುತ್ತಾರೆ. ಅವರು ಅಲ್ಲಿ ಇನ್‌ಸ್ಪೆಕ್ಷನ್‌ಗೆ ಹೋಗಿ ಗೊಂಬೆ ಹಾಗೆ ಕುಳಿತುಕೊಂಡು ನೋಡಿಕೊಂಡು ಬಂದುಬಿಡುತ್ತಾರೆ. ಕಾರಣ ಅವರಿಗೆ ಆ ಭಾಷೆ ಬರುವುದಿಲ್ಲ. ಆದುದರಿಂದ ಈ ವಿಷಯದಲ್ಲಿ ಹೇಳುವುದಾದರೆ ಅಂಥಾ ಕಡೆ ಇನ್‌ಸ್ಪೆಕ್ಷನ್ ಮಾಡಬೇಕಾದರೆ ಸಂಬಂಧಪಟ್ಟ ಭಾಷೆ ಕಲಿತಿರತಕ್ಕಂಥ, ಉರ್ದು ಕಲಿತಿರತಕ್ಕಂಥ ಇನ್‌ಸ್ಪೆಕ್ಟರನ್ನು ಇಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ಇಲ್ಲದೆ ಹೋದರೆ ಒಂದು ಜಾತೀಯತೆ ಭಾವನೆ ಬೆಳೆದಂತಾಗುತ್ತದೆ. ಹಿಂದೂ ಆಗಲಿ, ಮುಸ್ಲಿಂ ಆಗಲಿ, ಕ್ರಿಶ್ಚಿಯನ್ ಆಗಲಿ ಈ ಜಾತೀಯ ಮನೋಭಾವನೆ ಬಾಲ್ಯದಿಂದಲೇ ಬರತಕ್ಕಂಥ ಗುಣ, ದೊಡ್ಡವರಾದ ಮೇಲೆ ಇದು ಕೂಡುವುದಿಲ್ಲ. ಒಂದು ಶಾಲೆಯಲ್ಲಿ 10 ರೂಮುಗಳು ಇದ್ದರೆ 2 ರೂಮು ಉರ್ದು ಶಾಲೆಗಳು, 2 ರೂಮು ಮರಾಠಿ ಶಾಲೆಗಳು ಇರುತ್ತವೆ. ಆದುದರಿಂದ ಇವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಕಟ್ಟಡಂಬದವರು ಎಂದು ಮಾಡಿ ಒಬ್ಬರು ಹೆಡ್‌ಮಾಸ್ತರನ್ನು ಇಡಿ. ಆವಾಗ ಮಕ್ಕಳಲ್ಲಿ ಒಂದೇ ಭಾವನೆ ಬರುವ ಹಾಗೆ ಆಗುತ್ತದೆ. ಆ ರೀತಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಹೈಸ್ಕೂಲ್ ವಿಚಾರ ತೆಗೆದುಕೊಂಡರೆ ಅಲ್ಲಿ ಇನ್‌ಸ್ಪೆಕ್ಟಿಂಗ್ ಅಥಾರಿಟಿ ಏನು ಬರುತ್ತಾರೋ ಅವರು ಬರೀ ಇನ್‌ಸ್ಪೆಕ್ಷನ್ ಮಾಡಿಕೊಂಡು ಹೋಗುತ್ತಾರೆಯೇ ವಿನಾ ಅವರಿಗೆ ಸರಿಯಾಗಿ ಹಿಂದಿ ಬರುವುದಿಲ್ಲ. ಒಂದು ಸಲ ಏನಾಯಿತು ಎಂದರೆ ನಾನು ಹಿಂದೀ ಪಾಠ ಹೇಳಬೇಕಾದ ಪ್ರಸಂಗ ಬಂತು. ಆ ಪಾಠ ಹೇಳಾದ ಮೇಲೆ ತಾವು ಏನಾದರೂ ಕೊಶ್ಚನ್ ಕೇಳಬಹುದು ಎಂದು ಹೇಳಿದೆ. ಅವರು ಆಗ ಎದ್ದು ಹೊರಗೆ ಹೊರಟು ಹೋದರು. ಆಗ ಹುಡುಗರೆಲ್ಲಾ ನಕ್ಕರು. ಏತಕ್ಕೆಂದರೆ ಅವರು ಏನು ಪ್ರಶ್ನೆಯೇ ಕೇಳಲಿಲ್ಲವಲ್ಲಾ ಎಂದು. ಆದುದರಿಂದ ಭಾಷೆ ಗೊತ್ತಿಲ್ಲದೇ ಇದ್ದಂಥಾವರನ್ನು ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಕಳುಹಿಸಬೇಡಿ, ಅದರಲ್ಲಿ ಅರ್ಹತೆ ಇರುವವರು ಹೋಗಿ ಅಲ್ಲಿ ದುಡಿಯಬೇಕು ಎಂದು ಹೇಳುತ್ತೇನೆ.

ಇನ್ನು ಹುಬ್ಬಳ್ಳಿ—ಧಾರವಾಡದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಿಕ್ಷಕರು ಇದ್ದಾರೆ. ಧಾರವಾಡದವರು ಈ ಬಗ್ಗೆ ಯಾವುದಾದರೂ ಕೆಲಸಕ್ಕೆ ಬರಬೇಕಾದರೆ ಹುಬ್ಬಳ್ಳಿಗೆ ಬರಬೇಕು. ಇದು ತಪ್ಪಬೇಕು ಎಂದು ಹೇಳುತ್ತೇನೆ. ಆದುದರಿಂದ ಎಜುಕೇಷನ್ ಡಿಸ್ಟ್ರಿಕ್ಟ್ ಏನು ಇದೆ ಅದು ಧಾರವಾಡದಲ್ಲಿ ಒಂದು ಆಫೀಸು ಆಗಬೇಕು. ಈ ರೀತಿ 2—3 ಆಫೀಸುಗಳನ್ನು ತೆರೆದರೆ ಅವರು ಎಫಿಷಿಯೆನ್ಸಿ ಆಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಈ ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ.

ಕಾಲೇಜುಗಳ ವಿಷಯ ಹೇಳಬೇಕು ಎಂದರೆ ಅದು ಅತ್ಯವಶ್ಯವಾದುದು. ಒಬ್ಬ ಕಾಲೇಜಿನ ಪ್ರಿನ್ಸಿಪಾಲ್ ಆಗಿರುತ್ತಾನೆ. ಪ್ರಿನ್ಸಿಪಾಲರ ಸ್ಥಿತಿ ಖಾಸಗಿ ಕಾಲೇಜುಗಳಲ್ಲಿ ಬಹಳ ಶೋಚನೀಯವಾಗಿರುತ್ತದೆ. ಸರ್ಕಾರದಲ್ಲಿ ಸುಳ್ಳು ಹೇಳಬೇಕು, ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್ ಅವರಲ್ಲಿ ಸುಳ್ಳು ಹೇಳಬೇಕು, ವಿಶ್ವವಿದ್ಯಾನಿಲಯವನ್ನು ಮೋಸ ಮಾಡಬೇಕು. ಇಂಥ ಪರಿಸ್ಥಿತಿ ಬರುತ್ತದೆ, ಮ್ಯಾನೇಜ್‌ಮೆಂಟಿಗೆ ರೊಕ್ಕ ಬರುತ್ತದೆ. ಛೇರಮನ್ ಅವರು ಅದನ್ನು ಖರ್ಚು ಮಾಡತಕ್ಕ ಸಾಮರ್ಥ್ಯ ಪಡೆದವರು. ಆದರೆ ಸುಳ್ಳು ಹೇಳುವುದಕ್ಕೆ ಜವಾಬ್ದಾರರಾಗತಕ್ಕ ಶಕ್ತಿಯನ್ನು ಪಡೆದವರು ಎಂದರೆ ಪ್ರಿನ್ಸಿಪಾಲರು. ಮ್ಯಾನೇಜ್‌ಮೆಂಟಿನವರು ಹೇಳಿದ ಹಾಗೆ ಕೇಳಲಿಲ್ಲವೆಂದರೆ ಆತನಿಗೆ ನೆಲೆಯಿಲ್ಲದಂತಾಗುತ್ತದೆ. ಈ ಹೊತ್ತು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಾಗಲೀ, ಮೈಸೂರು ಅಥವಾ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಾಗಲೀ ಇರುವಂಥ ಅಫಿಲಿಯೇಟೆಡ್ ಕಾಲೇಜುಗಳಿಗೆ ಕೊಟ್ಟ ಲೈಬ್ರರಿ ಗ್ರಾಂಟ್, ಲ್ಯಾಬೋರೇಟರಿ ಗ್ರಾಂಟ್ ಯಾವ ರೀತಿ

(ಶ್ರೀ ಐ. ಜಿ. ಸನದಿ)

ಉಪಯೋಗವಾಗುತ್ತಿದೆ ಎಂದು ಮೊದಲಿನಿಂದ ಕೊನೆಯವರೆಗೂ ಇನ್‌ಸ್ಪೆಕ್ಟ್ ಮಾಡಿದರೆ ಸುಮಾರು 50 ಪರ್ಸೆಂಟ್ ಮ್ಯಾನೇಜ್‌ಮೆಂಟಿನವರು ಜೈಲಿಗೆ ಹೋಗುತ್ತಾರೆನ್ನುವ ಆತ್ಮವಿಶ್ವಾಸವನ್ನು ನಾನು ತಳೆದಿದ್ದೇನೆ. ಈ ರೀತಿಯಾಗಿ ಸರ್ಕಾರ ವಿದ್ಯಾ ಸಂಸ್ಥೆಗಳಿಗೆ ಕೊಡತಕ್ಕ ದುಡ್ಡು ಏನಿದೆ ಅದು ಸ್ವಾರ್ಥ ಸಾಧನೆ ಮಾಡತಕ್ಕ ಸಂಘ ಸಂಸ್ಥೆಗಳಿಗೆ ಹೋಗುವುದನ್ನು ಮಟ್ಟ ಹಾಕಬೇಕೆಂದು ನಾನು ಕಳಕಳಿಯ ಬಿನ್ನಹ ಮಾಡುತ್ತಿದ್ದೇನೆ.

ಶ್ರೀಮಾನ್ ಸಿದ್ದಪ್ಪನವರು ಮಾತನಾಡುತ್ತಾ ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಹೇಳಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಇತ್ತೀಚೆಗೆ ಇತ್ತಲಾಗಿ ಶುಭ ಚಿಹ್ನೆಗಳು ಕಂಡು ಬರುತ್ತಿವೆ. ಅಲ್ಲಿಯ ವೈಸ್‌ಚಾನ್ಸಲರು ಸುಸಂಸ್ಕೃತರು ಎನ್ನುವುದನ್ನು ನಾನು ಕೇಳಿದ್ದೇನೆ, ಓದಿದ್ದೇನೆ. ಒಮ್ಮೆ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಏರೋಡ್ರೋಂನಲ್ಲಿ ಇದ್ದಾಗ ಒಬ್ಬ ಮನುಷ್ಯ ಬಂದು ಅವರ ಕಿವಿಯ ಮೇಲೆ ಬಹಳ ದಕ್ಷರಾದ ಅತ್ಯುತ್ತಮರಾದಂಥವರನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಮಾಡಿದ್ದೀರಿ, ಅದೇ ರೀತಿ ಇನ್ನುಳಿದ ವಿಶ್ವವಿದ್ಯಾನಿಲಯಗಳಿಗೂ ಏಕೆ ಮಾಡಬಾರದು ಎನ್ನುವ ಮಾತನ್ನು ಹೇಳಿದರು. ನಾನು ದೂರದಲ್ಲಿ ನಿಂತುಕೊಂಡಿದ್ದೆ. ಹೀಗೆ ಇಲ್ಲಿ ಒಳ್ಳೆಯದಾಗಿದೆ. ಕರ್ನಾಟಕ ವಿಶ್ವವಿದ್ಯಾನಿಲಯದ ಬಗ್ಗೆ ಕೆಲವು ಟೀಕೆಗಳು ಕೇಳಿ ಬರುತ್ತಿವೆ. ಯಾವ ಒಂದು ವಿಶ್ವವಿದ್ಯಾನಿಲಯ ಕರ್ನಾಟಕದಲ್ಲಿ ಪ್ರಗತಿಯನ್ನು ಪಡೆದಿತ್ತು, ಏಷ್ಯ ಖಂಡದಲ್ಲಿಯ ಕೆಲವು ಉತ್ತಮ ವಿಶ್ವವಿದ್ಯಾನಿಲಯಗಳಲ್ಲಿ ಒಂದು ಎಂದು ಶಿಕ್ಷಣ ತಜ್ಞರಿಂದ ಪ್ರಖ್ಯಾತಿಯನ್ನು ಪಡೆದಿತ್ತು, ಆ ವಿಶ್ವವಿದ್ಯಾನಿಲಯಕ್ಕೆ ಈ ಹೊತ್ತು ಕಳಂಕ ಬಂದಿದೆ, ಅದರ ಬಗ್ಗೆ ನಾಲ್ಕು ಮಾತು ಕೇಳತಕ್ಕ ಸಂದರ್ಭ ಒದಗಿದೆ. ನಿಷ್ಠೆಯಿಂದ ಕೆಲಸ ಮಾಡತಕ್ಕ ವೈಸ್ ಛಾನ್ಸಲರ್ ಇಲ್ಲದೆ ಹೋದರೆ ಆ ಒಂದು ವಿಶ್ವವಿದ್ಯಾನಿಲಯಕ್ಕೆ ಭವಿಷ್ಯವಿಲ್ಲ ಎಂದೆನ್ನಿಸುತ್ತದೆ. ಆ ವಿಶ್ವವಿದ್ಯಾನಿಲಯದಲ್ಲಿರತಕ್ಕ ವೈಸ್ ಛಾನ್ಸಲರು ಪಾರಮಾರ್ಥಿಕ ಜೀವಿಗಳು, ಲೌಕಿಕಕ್ಕಿಂತ ಅಲೌಕಿಕ ಕಡೆ ಹೆಚ್ಚು ಗಮನ ಕೊಡುವವರು. ಸೇವಾ ಸಮಿತಿಗಳ ಸಭೆ, ಪ್ರವಾಸ ಇವುಗಳಲ್ಲಿ ಅವರಿಗೆ ಆಸಕ್ತಿ. ಪಾರಮಾರ್ಥಿಕ ಜೀವನಕ್ಕೆ ಸಂಬಂಧಿಸಿದಂತೆ ಕೆಲವು ವ್ಯಕ್ತಿಗಳನ್ನು ಕರೆದು ಭಜನೆ, ಪೂಜೆ ಹೀಗೆ ನಡೆಯುತ್ತದೆ. ಹೀಗಾದರೆ ಅಲ್ಲಿನ ಸಿಬ್ಬಂದಿಯನ್ನು ಕೇಳುವವರಾರು? ಮನೆಯ ಯಜಮಾನನಲ್ಲಿ ಸಡಿಲತೆಯುಂಟಾದರೆ ಸಣ್ಣಪುಟ್ಟ ಮಕ್ಕಳ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವುದು ಸಾಧ್ಯವಾಗುವುದಿಲ್ಲ. ''ಸಾಕು ಸಾಕೀ ಭಜನೆ, ಪೂಜನೆ, ಸಾಕು ಈ ಆರಾಧನೆ'' ಎಂದು ಹೇಳಬೇಕಾಗಿದೆ. ಆದ್ದರಿಂದ ಅಲ್ಲಿ ಏನಾದರೂ ಒಳ್ಳೆಯ ಕೆಲಸವಾಗಬೇಕಾದರೆ, ಶಿಕ್ಷಣದ ಮಟ್ಟ ಉತ್ತಮವಾಗಬೇಕಾದರೆ, ಬಹಳ ದಕ್ಷರಾದ ಒಳ್ಳೆಯ ವ್ಯಕ್ತಿಗಳಿಗೆ ಸ್ಥಾನ ಬರಿದು ಮಾಡಿ ಕೊಡುವುದು ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ಹೇಳುತ್ತೇನೆ.

ಶಿಕ್ಷಣ ಮಂತ್ರಿಗಳು ತುಂಬ ವಿನಯಶೀಲತೆ ಮತ್ತು ಸೌಜನ್ಯದಿಂದ ಕೂಡಿದವರು. ಅವರು ಕರ್ನಾಟಕದ ಮೂಲೆ ಮೂಲೆಯಲ್ಲಿರುವ ಎಲ್ಲ ಪ್ರಾಥಮಿಕ ಶಾಲೆಗಳಿಗೆ, ಮಾಧ್ಯಮಿಕ ಶಾಲೆಗಳಿಗೆ ಭೇಟಿ ಕೊಡುವ ಅಭ್ಯಾಸ ಮಾಡಿಕೊಂಡರೆ ನೆಟ್ಟಗೆ ಎಂದು ಹೇಳಬಯಸುತ್ತೇನೆ.

ಸಂಸ್ಕೃತ ವಿದ್ಯಾಭ್ಯಾಸದ ಬಗ್ಗೆ ಕೆಲವು ಸಲಹೆಗಳನ್ನು ಹೋದ ಸಾರಿ ಮಾಡಿದ್ದೆ. ಈ ವರ್ಷ ಸಂಸ್ಕೃತ ಕಾಲೇಜಿಗೆ 5 ಲಕ್ಷ 35 ಸಾವಿರ ರೂಪಾಯಿಗಳು, ವೇದ ಪಾಠಕ್ಕೆ 11 ಲಕ್ಷ ರೂಪಾಯಿ ಸಂಸ್ಕೃತ ಪ್ರಚಾರಕ್ಕೆ ಒಂದು ಲಕ್ಷ ರೂಪಾಯಿ ಹೀಗೆ ಲಕ್ಷಾಂತರ ರೂಪಾಯಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಮೀಸಲಾಗಿಟ್ಟಿದ್ದಾರೆ. ಇದಕ್ಕಾಗಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಕನ್ನಡ ಸಾಹಿತ್ಯ ಪರಿಷತ್ತು ಎಂದು ಹೇಗೆ ಮಾಡಿದ್ದಾರೆ ಅದೇ ರೀತಿ ಸಂಸ್ಕೃತದಲ್ಲಿರುವ ಒಳ್ಳೆಯ ಗ್ರಂಥಗಳನ್ನು ಒಂದು ಕಡೆ ಶೇಖರಿಸಿ, ರಕ್ಷಿಸುವುದಕ್ಕೆ ಸಂಸ್ಕೃತ ಸಾಹಿತ್ಯ ಪರಿಷತ್ತು ಮಾಡಿ ಸಂಸ್ಕೃತ ವಿದ್ವನ್ಮಣಿಗಳನ್ನು ಕೂಡಿಸಿ ಸಂಸ್ಕೃತ ಪ್ರಚಾರ ಮಾಡಬೇಕೆಂದು ಹೇಳುತ್ತೇನೆ.

ರಾಷ್ಟ್ರ ಕವಿಗಳಿಗೆ, ಪ್ರಸಿದ್ಧ ಲೇಖಕರಿಗೆ ಮತ್ತು ಕವಿಗಳಿಗೆ ಸಂಭಾವನೆ ಕೊಡಲು 45 ಸಾವಿರ ರೂಪಾಯಿ ಇಟ್ಟಿದ್ದಾರೆ. ಇದು ಬಹಳ ಕಡಮೆ; ಇದನ್ನು ಹೆಚ್ಚು ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಲಲಿತಕಲೆಗಳ ವಿಷಯಕ್ಕೆ 7 ಲಕ್ಷ ರೂಪಾಯಿ ಇಟ್ಟಿದ್ದಾರೆ. ನೃತ್ಯ, ನಾಟಕ, ಸಂಗೀತ ಅಕಾಡೆಮಿಗೆ ಏಳು ಲಕ್ಷ ರೂಪಾಯಿ ಪೋಲಾಗುವುದನ್ನು ವಿದ್ಯಾ ಮಂತ್ರಿಗಳು ತಮ್ಮ ಗಮನಕ್ಕೆ ತಂದುಕೊಂಡಿದ್ದಾರೆ. ಬೆಂಗಳೂರಿನಲ್ಲಿ ನಾಟಕ ಮಾಡಿ ಏಳು ಲಕ್ಷ ರೂಪಾಯಿ ಹೊಡೆಯತಕ್ಕ ವ್ಯಕ್ತಿಗಳ ಮೇಲೆ ಹತೋಟಿ ಇಡಬೇಕು. ಹಳ್ಳಿಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಚಿಕ್ಕಪುಟ್ಟ

ನಾಟಕ ಆಡುವ ಸಂಸ್ಥೆಗಳಿವೆ. ಒಂದು ಕಡೆ ಇಂಥ ಸಂಸ್ಥೆಯವರು 'ಗರೀಬಿ ಹಠಾವೋ' ಎನ್ನುವ ನಾಟಕವನ್ನು ಆಡಿದರು. ಅದರಲ್ಲಿ ಬಡತನ ಹೇಗೆ ತೊಲಗಿಸಬಹುದು ಎಂದು ಮನ ಮುಟ್ಟುವಂತೆ ಆಡಿ ತೋರಿಸಿದರು. ಇಂಥ ಕಲೆಗಾರರಿಗೆ, ನಾಟಕಕಾರರಿಗೆ ಸರ್ಕಾರ ಉತ್ತೇಜನ ವನ್ನು ಕೊಟ್ಟು ಘೋಷಣೆ ಮಾಡಬೇಕು. ಅವರು ಸತ್ತರೆ ಅವರನ್ನು ಕೇಳುವವರಿಲ್ಲದೆ ಯಾರೂ ದಿಕ್ಕಿಲ್ಲದೆ ಇರುವ ಪರಿಸ್ಥಿತಿ ಕನ್ನಡ ರಾಜ್ಯದ ಕಲೆಗಾರರಿಗೆ ಇದೆ. 'ಬೇಡುವವ ಭಕ್ತನಲ್ಲ, ಕೇಳು ವವ ಕಲೆಗಾರನಲ್ಲ ಎಂದು ಹೇಳುವಂತೆ ಕಲೆಯಲ್ಲಿ ಮತ್ತು ಬಣ್ಣದ ಬದುಕಿನಲ್ಲಿ ತೊಡಗಿರುವವರಿಗೆ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ.

"ಸಾಹಿತ್ಯ ಸಂಗೀತ ಕಲಾ ವಿಹೀನಃ ಸಾಕ್ಷಾತ್ ಪಶುಃ ಪೃಚ ವಿಷಕಾ ವಿಹೀನಃ" ಎಂದು ಹೇಳುತ್ತಾರೆ. ನಾವು ನಿಜವಾಗಿ ಮನುಷ್ಯರಾಗಿ ಬಾಳಿ ಬದುಕಿ ಕರ್ನಾಟಕದ ಕೀರ್ತಿಯಲ್ಲಿ ಭಾಗಿಗಳಾಗಬೇಕಾಗಿದ್ದರೆ ಸಾಹಿತ್ಯ, ಸಂಗೀತ ಕಲೆಗಳಲ್ಲಿ ಅಭಿರುಚಿ ಇರುವಂಥ ಜನರನ್ನು ಲಲಿತ ಕಲಾ ಅಕಾಡೆಮಿಗೆ ನೇಮಿಸಬೇಕೆಂಬ ಮಾತನ್ನು ಹೇಳಿ, ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri B. B. SAYANAK (Belgaum).—Madam Speaker I rise to oppose the demands tabled by the Hon. Minister for Education. He has asked for nearly 70 crores of rupees. Our Educational system is still an experimental one. Every five years the Education Minister changes and the education system also changes. There was Lord Macaulay system of education when we were under British regime; then we got independence and after that we were in Bombay State; where Dr. B.G. Kher introduced a system of education wherein English was removed from V Standard of Education: then he introduced the basic education and again introduced English from V Standard. There are so many changes.

Now there is the three-language formula, i. e., English, Hindi and State language. But according to me Government is again thinking deeply to introduce a French system of Education in India. Education is both a State and Central subject. I urge both the Education Minister of the State and the Centre to take a firm decision in respect of education policy and give a finality to it; otherwise, what will be the fate of our education and our boys and girls? Now our boys and girls undergo 15 years of education to get a Degree. But even after 15 years of education and getting a Degree are they able to get jobs? Are they in a position to get their livelihood? I am sorry to state that they are put to trouble. In Mysore State about 3,000 B. E., graduates are unemployed. If that is the fact of B E. graduates, what about B A., B. Sc., and Law graduates? The education system is faulty and white-colored one Our boys, after their education, do not want to go to the fields; they do not want to serve in any factory, and they want jobs only in Government service. This is the type of education we are giving. Our educational system is lacking in patriotism and in discipline. Our Government is spending Rs. 40 per student for pre-primary education, Rs. 60 per student for primary education, Rs. 200/- per student for secondary education, Rs. 1,000 per stupent for BE, and M.B B.S., courses, and Rs. 1,800 per student for B.E.d., training. But whether these degree holders know that the Government is spending every year Rs. 70 crores or their education and that they owe a reponsibility to the

(SRI B. B. SAYANAK)

public and the Nation? I think they never think of the Nation and never realise their responsibility. These boys and girls only know to consume liquer. Now liquer is available in every street. Is this the standard of our independence? Are we doing justice to the educated classes for whom we are spending Rs. 70 crores? I say, 'No'. Our education system should be a qualitative one, but not quantitative.

Coming to primary education, there are 22,810 primary schools, and out of these 14,308 are single-teacher schools. The Government have admitted that they cannot appoint more teachers on account of paucity of funds.

SRI A. R. BADARINARAYANA.—The ratio is 1:40; for every 40 students there will be a teacher. If the strength of students in any school is less than 40, it will be a single-teacher school.

SRI B. B. SAYANAK.—There are 2,943 single-teacher schools with over 30 students, 4,416 single-teacher schools with 50 or more students, and 203 single-teacher schools with more than 100 students. When there are so many graduates unemployed, I would like to ask why the Government is not appointing teachers? If funds are inadequate, the Government must create a fund for education My friend Sri V. N. Patil was saying that Bidar district is a cosmopolitan area. In Bidar district most of the schools are Marathi schools and many schools have no teachers. In the border areas of Belgaum, Khanapur and Nippani there are no Marathi teachers for many schools in spite of our representations to the Ministers and concerned authorities. The interview for selection of teachers was made on 15th February by the Deputy Director of Public Instruction, but teachers have not been appointed so far. Is this the way to do justice to the Marathi teachers and students? This is the fag-end of the year. When the Government is going to appoint the teachers?

The Government has taken over all the private primary schools, and only 5 private primary schools are left over. They have also passed a resolution. I do not know why the Government is not taking over these 5 schools also. They are collecting Rs. 20 to Rs. 30 from the teachers as rent. I have brought this fact to the notice of the Government as also the Deputy Director of Public Instruction.

I am of the opinion that the Convent schools are doing better in Belgaum district. I have visited almost all these schools. They are charging Rs. 6 to Rs. 10 from First to Fourth Standard as term fee. When the Government is paying the salaries of these teachers, I do not know why they are charging fees. Why should not the Government force them not to charge fees?

3-30 P.M.

In respect of the Secondary schools, according to me, there is a competition in these schools. For example in 'Yellur village' which has got a population of 5000, there was a co-education in the High School in that village. In the month of June 1972, one Modern Education Society had asked for permission to start a Girls High School under the name and style of Changleswari Girls High School. The Government gave them permission to start this Girls High School. After two months, the Government accorded permission to Visva Bharathi Sangha Sahakari Society to start another High School for Girls in that village. I want to ask the Government whether it is good on their part to permit starting of two Girls High Schools in that small village ? I am of the opinion that the permission granted to the latter High School should be withdrawn and the school be closed. I am of the view that at least in the field of education, there should not be any competition.

There was a High School at Siruguppa village called the V. V. Rural High School which was started about 10 years ago. There are 9 divisions in that School and 15 teachers are working there. Last year the Government gave permission to the new High School to start a High School in another village which is hardly one mile away from Siruguppa. I want to ask the Government whether it is correct on their part to allow competition in education fields ? If you give permission to another High School what will be the fate of the Siruguppa High School which is running there for the last 10 years and more.

There are so many private High Schools which are working in Belgaum District. Some of them are good, better and best, some are worst and more worst and some are being run for commercial purposes Some of the schools show records in one school and admit boys in another school. The department should examine their records to find out the truth or otherwise. The High School at Angole has no good building. When your inspecting staff go there, I do not know what they will do. They go to the schools to receive garland, good food and return to headquarters after offering good remarks. These officers are following the age-old tradition in respect of inspection work.

The Government has appointed Inspectors of subjects for all the subjects except Inspectors for Marathi. There are many Marathi Schools in Belgaum and in Khanapur and other border areas of Belgaum and Bidar and thousands of pupils are learning Marathi. I want to ask the Government why they have not appointed Subject Inspectors in Marathi ? While the examination was going on, there was shortage of 15 Marathi papers. Consequently 15 boys did not get the question paper. You can just imagine the plight of those boys who had appeared for the examination.

(SRI B. B. SAYANAK)

15 Girls Schools were started last year. I am told that according to the revised Grant-in-aid Code *vide* Rule 21, all the Girls schools are entitled to get maintenance grant; but three Girls Schools have been denied the maintenance grant, I do not know why this discrimination has been made in payment of maintenance grants to these three schools.

SRI A. R. BADARINARAYANA.—When there was application from the concerned authorities, they have told us that even if the grant is not paid we will start the schools. They had come up with an application when the budget provision was finalised. Hence they could not be paid that grant.

SRI B. B. SAYANAK.—I want to know whether they have given it in writing that they would start the schools without the grant? I know for certain that they have not given it in writing.

Regarding the text books. Some of the text books are not available in the market. There is one text book in Sanskrit which has been prescribed for second language. Only Kannada translation of this book is available but the condensed translation in Marathi and English are not available in the market. The Home Science book for standard VII is not available uptill now even though the examinations are over. I therefore request the Minister to see that these books are made available.

The Government is paying the salaries of teachers of those schools which have been taken over by the Government. The private schools should be taken over.

Regarding, buildings, when the schools were managed by the Municipal School Board, the Municipality was constructing the buildings for the Municipal Schools and there was no difficulty for the school buildings. Now the School Boards have been abolished and the schools taken over by the Government. There are 14 Marathi schools in Belgaum City which are not having buildings of their own. There is one big building at Khasbaugh wherein a Kannada school is located, It is having 25 rooms. We have been requesting the Divisional Commissioner and the Government to give a school building for the Marathi boys I have been informed by the Divisional Commissioner that there was a hitch between the Marathi and Kannada and hence he could not give the building There is no hitch whatsoever. When the Kannada boys are being given a building why the same facility has not been extended to the Marathi boys is ununderstandable.

In Basavanagalli there is a big school. Government wanted to construct a building three years ago: but so far the Government has not constructed the building. I do not know why the Government has not taken any initiative to construct the building. When the

Government is collecting taxes from the Marathi people, why the same facility as is given to the Kannada boys is not extended to our boys.

Sri C. M. ARUMUGHAM.—In order to satisfy our friends and also to make them continue to live in Mysore State, it is necessary that our Education Minister should extend all the facilities to the Marathi boys.

Sri A. R. BADARINARAYANA.—I am second to none in extending the facilities to the Marthi boys.

Sri B. B. SAYANAK.—The next thing is, you have appointed the School Betterment Committees. But in Belgaum these Committees have no functions at all. They are not doing anything. There is no mid-day meal in Belgaum and in the border areas.

Another thing is the Commerce education. There are some Typewriting Institutions in Belgaum City. English Typewriting and Shorthand are there. Marathi, Kannada Typewriting and Shorthand are there. I do not understand why your Director is troubling these Institutions by directing them that they must have only Kannada Typewriting and Shorthand fourse along with the English Typewriting and Shorthand. When the people of that area are found of Marathi Typewriting and Shorthand why the Director is insisting that they should have only Kannada and English Typewriting and Shorthand.

We are not respecting the teachers. The teachers are the pillars of our Nation. For Independence Day, Republic Day and for Teachers day celebrations only the teachers and students are attending. Citizens are reluctent to attend the celebrations. You must make it as a policy that these are very important functions and all people should attend. Even in the Teachers' Day we are not atteding. Therefore you must say that these are the important celebrations in which everybody should participate.

Sri A. R. BADARINARAYANA.—You must take that responsibility and do it.

Sri B. B. SAYANAK.—When I am telling this you must take it that I am doing it. I am not shirking my responsibility.

There is Marathi Training College in Vadagoan. Two widows of the Military personnel who have died in the Indo-Pakistan war were admittted in this College. The Divisional Commissioner and the Deputy Director of Public Instruction had requested the College Authorities to permit these two ladies. Finally the Management have permitted them. But now these two ladies are not getting chance. I request the Government to grant the permission to these two ladies for the T.C.L. Course. The deputed teachers are getting the chance to this Course. Whenever M. L. As. approach the Deputy Director for getting any work done, the papers move. If any body or a teacher approaches him, no paper will move.

Sri A. R. BADARINARAYANA.—They are automatically moving now.

Sri B. B. SAYANAK.—When M. L. As. approach the papers move, but not in the case of any individual who approach the D.D.P.I.

There is an Education Advisory Committee in Belgaum. One Sri Gottigoli is taken on that Committee. I am very sorry to say that he is not an educationist. He is only an Advocate. If you really want an educationist you could have taken Sri Rudrappa the Principal of Lingaraja College, or atleast you could have taken any one of the Principals of the Colleges situated there. Just because Sri Gottigoli happens to be a Congressman you have given him a chance. You should not do like that.

Education must be a technical one. There must be scope for science subjects because the science is advancing now. There must be work experience. We must give education about all religions because ours is a secular State. We must teach what is Mohammedenism, what is Christianism and what is Hinduism. Then only our children will be the true sons of soil. With these words I thank the Chair and conclude my speech.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಖಾತೆಯ ಮಂತ್ರಿಗಳು ನಮ್ಮ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಇದಕ್ಕೆ ನನ್ನ ಪೂರ್ಣವಾದ ಬೆಂಬಲವನ್ನು ಕೊಡುತ್ತಾ ಎರಡು ಸಲಹೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರೈಮರಿ ಎಜುಕೇಷನ್ನಿನಲ್ಲಿ ಸಾಕಷ್ಟು ಪ್ರಗತಿ ಈ ದೇಶದಲ್ಲಿ ಆಗಿದ್ದರೂ ಕೂಡ ಒಂದು ಸಲಹೆಯನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದೇನೆಂದರೆ ಹಳ್ಳಿಗಳಲ್ಲಿ ಒಬ್ಬರೇ ಉಪಾಧ್ಯಾಯರು ಇರತಕ್ಕ ಸ್ಕೂಲುಗಳು ಇರಬಾರದು ಎಂದು ನಾನು ಹೇಳುತ್ತೇನೆ. ಕಾರಣ ಇಷ್ಟೆ. 29 ಕೋಟಿ ಚಿಲ್ಲರೇ ರೂಪಾಯಿಗಳನ್ನು ಈ ಪ್ರೈಮರಿ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತಿದ್ದಾಗ್ಯೂ ಕೂಡ ಈ ಹಣದಲ್ಲಿ ಸ್ವಲ್ಪಮಟ್ಟಿಗೆ ಲೋಪ ಕಾಣುತ್ತದೆ. ಕೆಲವು ಕಡೆ ಸಾಕಷ್ಟು ಉತ್ತಮವಾದ ರೀತಿಯಲ್ಲಿ ಪಾಠಶಾಲೆಗಳು ನಡೆಯುತ್ತಾ ಇಲ್ಲ ಎಂದು ಹೇಳುವಂಥಾ ಸಂದರ್ಭ ಇದೆ. ಇರತಕ್ಕ ಒಬ್ಬರು ಉಪಾಧ್ಯಾಯರು ಸ್ಕೂಲನ್ನು ತೆಗೆದರೂ ತೆಗೆಯಬಹುದು, ಅಥವಾ ತಿಂಗಳುಗಟ್ಟಲೆ ಬಾಗಿಲನ್ನು ಮುಚ್ಚಿ ವ್ಯವಸಾಯಕ್ಕೋ, ವ್ಯಾಪಾರಕ್ಕೋ ಅಥವಾ ಸ್ವಂತ ಕೆಲಸಕ್ಕೋ ಹೋಗುವಂಥಾ ಸಂದರ್ಭಗಳು ಇರತಕ್ಕದ್ದನ್ನು ನಾನು ಕಂಡಿದ್ದೇನೆ. ನಮ್ಮ ತಾಲ್ಲೂಕಿನಲ್ಲಿಯೂ ಕೆಲವು ಕಡೆ ಇಂಥಾ ಸಂದರ್ಭಗಳು ಕಂಡುಬರುತ್ತವೆ. ಅನೇಕ ಕಡೆ ತಿಂಗಳು ಗಟ್ಟಲೆ ಉಪಾಧ್ಯಾಯರು ಪಾಠಶಾಲೆಗಳನ್ನು ತೆಗೆಯದೇ ಇರತಕ್ಕ ಸಂದರ್ಭಗಳೂ ಇವೆ ಎನ್ನುವುದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಕೆಲವು ಕಡೆ ಒಬ್ಬರು ಉಪಾಧ್ಯಾಯರು 50–60 ಜನ ಮಕ್ಕಳನ್ನು ಇಟ್ಟುಕೊಂಡು ಪಾಠವನ್ನು ಹೇಳುವುದು ಕಷ್ಟವಾಗಿದೆ. ಈ ಎರಡು ದೃಷ್ಟಿಯಿಂದ ಒಬ್ಬರು ಉಪಾಧ್ಯಾಯರು ಇರತಕ್ಕದ್ದನ್ನು ತಪ್ಪಿಸಿ ಇನ್ನೂ ಕೆಲವು ಕೋಟಿ ರೂಪಾಯಿಗಳು ಖರ್ಚಾದರೂ ಚಿಂತೆಯಿಲ್ಲ. ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಒದಗಿಸತಕ್ಕದು ಮುಖ್ಯ. ಈ ಒಂದು ದೃಷ್ಟಿಯಿಂದ ಒಬ್ಬರು ಉಪಾಧ್ಯಾಯರು ಇರತಕ್ಕ ಪಾಠಶಾಲೆಗಳನ್ನು ಇನ್ನು ಮುಂದೆ ತಪ್ಪಿಸಿ ಕನಿಷ್ಟ ಪಕ್ಷ ಇಬ್ಬರು ಉಪಾಧ್ಯಾಯರು ಇರತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ರೀತಿ ಮಾಡಿದರೆ ಎಲ್ಲ ದೃಷ್ಟಿಯಿಂದ ಕೂಡ ಉತ್ತಮವಾಗುತ್ತದೆ. ಪಾಠಶಾಲೆಗಳ ಬೆಳವಣಿಗೆ ಕೂಡ ಉತ್ತಮವಾಗುತ್ತದೆ. ಪಾಠಶಾಲೆಗಳಲ್ಲಿ ಮಕ್ಕಳ ತರಪೇತಿ ಉತ್ತಮವಾಗುತ್ತದೆ. ತಂದೆತಾಯಿಗಳು ಮಕ್ಕಳನ್ನು ಪಾಠಶಾಲೆಗೆ ಕಳುಹಿಸುವ ಸಂದರ್ಭದಲ್ಲಿ ಅವರ ಅಪೇಕ್ಷೆ ಏನಿದೆ ಅದರಂತೆ ಮಕ್ಕಳು ವಿದ್ಯಾವಂತರಾಗುತ್ತಾರೆ ಎನ್ನುವಂಥಾ ಆಶೆಯನ್ನು ಇಟ್ಟುಕೊಂಡು ಕಳುಹಿಸತಕ್ಕದ್ದು ಸಫಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದ್ದರಿಂದ

ಏನೇ ಕಷ್ಟವಾದರೂ ಚಿಂತೆಯಿಲ್ಲ, ಸರ್ಕಾರಕ್ಕೆ 2 ಕೋಟಿ ರೂಪಾಯಿ ಹೆಚ್ಚು ಖರ್ಚಾದರೂ ಚಿಂತೆಯಿಲ್ಲ. ಇನ್ನು ಮುಂದೆ ಏಕ ಉಪಾಧ್ಯಾಯರು ಇರತಕ್ಕಂಥ ಪಾಠಶಾಲೆಗಳನ್ನು ಪರಿವರ್ತನೆ ಮಾಡಿ ಕೊನೆಯ ಪಕ್ಷ ಇಬ್ಬರು ಉಪಾಧ್ಯಾಯರಿಗೆ ಕಡಿಮೆ ಇಲ್ಲದೇ ಇರತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಪಾಠಶಾಲೆಗಳಿಗೆ ಕಟ್ಟಡ ಸಾಕಷ್ಟು ಕೆಲವು ಕಡೆ ಆಗಿದೆ. ಇನ್ನೂ ಆಗುವಂತಹ ಸಂದರ್ಭ ಇದೆ. ಎರಡು ಸಾವಿರ ರೂಪಾಯಿ ಕೊಡುತ್ತಿದ್ದದನ್ನು ಈ ವರ್ಷದಿಂದ ಕೆಲವು ಪಾಠಶಾಲೆಗಳಿಗೆ ಮೂರು ಸಾವಿರ ರೂಪಾಯಿ ಕೊಟ್ಟಿದೆ. ಇದು ತಾಲ್ಲೂಕು ಬೋರ್ಡು ಮತ್ತು ಪಂಚಾಯತ್‌ಗಳ ವಂತಿಗೆಯಿಂದ ಕಟ್ಟಬೇಕಾಗಿದೆ. ಇವತ್ತು ಅನೇಕ ಕಡೆ ಪಂಚಾಯತುಗಳು ಕೊಡುವುದಕ್ಕೆ ಮುಂದೆ ಬರುತ್ತಾ ಇಲ್ಲ. ಅನೇಕ ಕಡೆ ಪಾಠಶಾಲೆಗಳ ಕೆಲಸ ಕಾರ್ಯಗಳು ಕಟ್ಟಡ ಇಲ್ಲದೆ ಕುಂಠಿತವಾಗಿದೆ. ಅಂಥ ಕಡೆಗಳಲ್ಲಿ ಸರ್ಕಾರದವರು ಪೂರ್ತಿಯಾದ ಹಣವನ್ನು ಕೊಟ್ಟು ಪಾಠಶಾಲೆಗಳನ್ನು ಕಟ್ಟಿಸತಕ್ಕದ್ದು ಸೂಕ್ತವೆಂದು ಹೇಳುತ್ತೇನೆ.

[*Mr. Deputy Speaker in the Chair*]

ಇನ್ನು ಹೈಸ್ಕೂಲುಗಳನ್ನು ಸಾಕಷ್ಟು ಕಳೆದ ಒಂದು ವರ್ಷದಲ್ಲಿ ಪ್ರಾರಂಭ ಮಾಡಿದ್ದಾರೆ. ಅವುಗಳು ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ ಗ್ರಾಂಟ್ ಕೊಡುವ ವಿಚಾರದಲ್ಲಿ 5 ವರ್ಷದವರೆಗೆ ಗ್ರಾಂಟ್ ಕೊಡುವುದಿಲ್ಲವೆಂದು ಏನು ಹೇಳುತ್ತಿದ್ದೀರಿ, ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿನ ಜನರಿಗೆ ಏನೊಂದು ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೇವೆ, ಅದಕ್ಕೆ ವಿರುದ್ಧವಾಗಿ ಹೋದ ಹಾಗೆ ಆಗುತ್ತದೆ. ಇದನ್ನು ಹಿಂದಿನ ಸರ್ಕಾರ ಮಾಡಿದರೂ ಕೂಡ 5 ವರ್ಷವೆಂದು ನಿಗದಿ ಮಾಡಿದ್ದೀರಿ, ಅದನ್ನು ಪುನರ್‌ವಿಮರ್ಶೆ ಮಾಡಿ ಕನಿಷ್ಟ ಪಕ್ಷ ಮೂರು ವರ್ಷಕ್ಕಾದರೂ ಇಳಿಸಿ, ಇದರಿಂದ ಗ್ರಾಮಾಂತರ ಪ್ರದೇಶದ ಜನರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರ ತನ್ನ ನೀತಿಯಲ್ಲಿ ಸ್ವಲ್ಪ ಬದಲಾವಣೆ ಮಾಡಿ ಮೂರು ವರ್ಷ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಹೈಸ್ಕೂಲಿನಲ್ಲಿ ಕೇವಲ ಗುಮಾಸ್ತ ಕೆಲಸಕ್ಕೆ ವಿದ್ಯಾಭ್ಯಾಸ ಕೊಡತಕ್ಕಂತಹ ರೀತಿಯಲ್ಲಿ ನಾವು ಮಾಡುತ್ತಿದ್ದೇವೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ಹೈಸ್ಕೂಲು ಮಟ್ಟದಲ್ಲಿ ಮತ್ತು ಮಾಧ್ಯಮಿಕ ಶಾಲಾಮಟ್ಟದಲ್ಲಿ ವ್ಯವಸಾಯವನ್ನು ಮತ್ತು ಇತರ ಕಸಬನ್ನು ಕಲಿಯತಕ್ಕಂತಹ ಒಂದು ಅವಕಾಶವನ್ನು ಸಹ ಅವರಿಗೆ ಮಾಡಿಕೊಡಬೇಕು. ಏಕೆಂದರೆ ಆ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಆದ ಮೇಲೆ ತಮ್ಮ ಕಾಲ ಮೇಲೆ ನಿಂತುಕೊಳ್ಳುವ ಹಾಗೆ ಇರಬೇಕು. ಇಲ್ಲದಿದ್ದರೆ ಇವತ್ತಿನ ಪದ್ಧತಿಯಂತೆ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಆದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಕೆಲಸಗಳನ್ನು ಕೊಡುವುದು ಸಾಧ್ಯವಾಗುವುದಿಲ್ಲ. ಅವರು ವಿದ್ಯಾಭ್ಯಾಸ ಮುಗಿದ ತಕ್ಷಣ ಸ್ವತಂತ್ರವಾಗಿ ಜೀವನ ಮಾಡುವ ರೀತಿಯಲ್ಲಿ ಇರಬೇಕು. ಆ ರೀತಿಯಲ್ಲಿ ವಿದ್ಯಾಭ್ಯಾಸದ ಮಾರ್ಪಾಡನ್ನು ಮಾಡಬೇಕು. ಇಲ್ಲದಿದ್ದರೆ ಮುಂದೆ ಕಠಿಣವಾದ ಸಮಸ್ಯೆಯನ್ನು ನಾವು ಎದುರಿಸಬೇಕಾಗುತ್ತದೆ. ಅಲ್ಲದೆ ಇದರಿಂದ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ಇದನ್ನು ಎದುರಿಸುವುದಕ್ಕಾಗುವುದಿಲ್ಲ.

ಇನ್ನು ಕಾಲೇಜುಗಳನ್ನು ಬಹಳ ಸಂಖ್ಯೆಯಲ್ಲಿ ಪ್ರಾರಂಭ ಮಾಡಿದ್ದಾರೆ. 240 ಜ್ಯೂನಿಯರ್ ಕಾಲೇಜುಗಳನ್ನು ಕಳೆದ ವರ್ಷ ಪ್ರಾರಂಭ ಮಾಡಿದ್ದಾರೆ. ಅದರ ಬಗ್ಗೆ ವಿದ್ಯಾ ಸಚಿವರು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಟ ಪಕ್ಷ ಒಂದು ಜೂನಿಯರ್ ಕಾಲೇಜಾದರೂ ಇರಬೇಕೆನ್ನುವ ಸದ್ಭಾವನೆಯಿಂದ ಈ ಕಾರ್ಯವನ್ನು ಕೈಗೊಂಡಿದ್ದಾರೆ. ಇದು ಎಲ್ಲರೂ ಮೆಚ್ಚತಕ್ಕ ವಿಚಾರ. ಹಿಂದಿನ ಯಾವ ಸರ್ಕಾರವೂ ಇಂಥ ಕೆಲಸವನ್ನು ಮಾಡುವುದಕ್ಕೆ ಕೈಹಾಕಿಲ್ಲ. ಎಷ್ಟು ತೊಂದರೆಯಾದರೂ ಈ ಕೆಲಸವನ್ನು ಮಾನ್ಯ ಮಂತ್ರಿಯವರು ಮಾಡಿದ್ದಾರೆ. ಇದನ್ನು ಮಾಡಿ ಅವರು ಹಳ್ಳಿಯ ಜನರ ಬಗ್ಗೆ ಪ್ರಾಮಾಣಿಕತನದಿಂದ ಒಂದು ರೀತಿಯ ಅನುಕಂಪವನ್ನು ತೋರಿಸಿದ್ದಾರೆ. ಈ ಕಾಲೇಜುಗಳನ್ನು ಉತ್ತಮವಾಗಿ ನಡೆಸಿಕೊಂಡು ಹೋಗಬೇಕಾಗಿದೆ. ಈ ಕರ್ತವ್ಯದಲ್ಲಿ ಸಾಕಷ್ಟು ಪ್ರಗತಿಯನ್ನು ನಾವು ಸಾಧಿಸಬೇಕಾಗಿದೆ. ಇಂಥ ಕಾಲೇಜುಗಳನ್ನು ಇನ್ನೂ ಕೆಲವು ಕಡೆ ಪ್ರಾರಂಭ ಮಾಡಬೇಕಾದ ಅವಶ್ಯಕತೆ ಇದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಇನ್ನು ಮುಂದೆ ಜೂನಿಯರ್ ಕಾಲೇಜುಗಳನ್ನು

(ಶ್ರೀ ಬಿ. ಬೈರಪ್ಪಾಜಿ)

ಪ್ರಾರಂಭ ಮಾಡುವುದನ್ನು ನಿಲ್ಲಿಸುತ್ತೇವೆ ಎಂದು ಹೇಳಿದರು. ನಾನಾದರೂ ಹೇಳುತ್ತೇನೆ— ಇನ್ನೂ ಕೆಲವು ಕಡೆ ಇಂಥ ಜ್ಯೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಬೇಕಾದ ಅವಶ್ಯಕತೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಬಹು ಮುಖ್ಯ ಸ್ಥಳಗಳಲ್ಲಿ, ಅಲ್ಲಿನ ಮಕ್ಕಳು ದೂರ ಹೋಗುವಂತಹ ತೊಂದರೆ ಇರತಕ್ಕ ಕಡೆಗಳಲ್ಲಿ ಈ ಕಾಲೇಜುಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಇದೇ ಅಂತಿಮ ತೀರ್ಮಾನವೆಂದು ಬರಬಾರದು. ಆದ್ದರಿಂದ ಎಲ್ಲಿ ಇದರ ಅವಶ್ಯಕತೆ ಇದೆ, ಎಲ್ಲಿ ಹಳ್ಳಿ ಮಕ್ಕಳು ಬಹಳ ದೂರ ಹೋಗಬೇಕಾಗಿದೆ, ಅಂಥ ಕಡೆಗಳಲ್ಲಿ ಜ್ಯೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಎಜುಕೇಶನ್ ಸೆಸ್ ಎಂದು ಕಲೆಕ್ಟು ಮಾಡಿ ಸುಮಾರು 25 ಲಕ್ಷ ರೂಪಾಯಿ ಸರ್ಕಾರಕ್ಕೆ ಬಂದರೂ ಅದರ ಫಲವನ್ನು ಗ್ರಾಮಾಂತರ ಪ್ರದೇಶದ ಜನರಿಗೆ ಕೊಡುತ್ತಾ ಇಲ್ಲ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಹೋಬಳಿಗಳಲ್ಲಿ ಮತ್ತು ಪಂಚಾಯಿತುಗಳ ಮಟ್ಟದಲ್ಲಿ ಒಂದೊಂದು ಪುಸ್ತಕ ಭಂಡಾರವನ್ನು ಪ್ರಾರಂಭ ಮಾಡಬೇಕು. ಇದನ್ನು ಬರೀ ಬೆಂಗಳೂರು ಮತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾಡಿದರೆ ಗ್ರಾಮಾಂತರ ಪ್ರದೇಶಗಳ ಜನರಿಗೆ ಅನುಕೂಲ ಒದಗುವುದಿಲ್ಲ. ಆದ್ದರಿಂದ ನೇರವಾಗಿ ರೈತನು ಕೊಡುವ ತೆರಿಗೆಗೆ, ಪ್ರತಿಫಲವಾಗಿ ಇಂಥ ಸೌಲಭ್ಯ ಒದಗಿಸುವುದಕ್ಕೋಸ್ಕರ ಗ್ರಾಮಾಂತರ ಪ್ರದೇಶಗಳಲ್ಲಿ ತಾಲ್ಲೂಕು, ಹೋಬಳಿ ಮತ್ತು ಪಂಚಾಯಿತುಗಳ ಮಟ್ಟದಲ್ಲಿ ಒಂದೊಂದು ಪುಸ್ತಕ ಭಂಡಾರವನ್ನು ಮಾಡಿ, ಅಲ್ಲಿ ದಿನಪತ್ರಿಕೆಗಳನ್ನು ಸಹ ಒದಗಿಸಿ, ಹಳ್ಳಿಯ ಜನರಿಗೆ ಬಿಡುವಿನ ಸಮಯದಲ್ಲಿ ಪ್ರಪಂಚದ ವಿಚಾರಗಳನ್ನು ಅರಿತುಕೊಳ್ಳುವಂತಹ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಆದ್ದರಿಂದ ಪಬ್ಲಿಕ್ ಲೈಬ್ರರಿಯಿಂದ ಇನ್ನೂ ಉತ್ತಮವಾದ ಕೆಲಸ ಮಾಡಿಸುವುದಕ್ಕೆ ಗಮನ ಹರಿಸಬೇಕು. ಇದು ಕೇವಲ ಮೈಸೂರು ಅಥವಾ ಬೆಂಗಳೂರು ನಗರಗಳಿಗೆ ಸೀಮಿತವಾಗಿರಬಾರದು. ಅಲ್ಲದೆ ಇಲ್ಲಿ ಸಾರ್ವಜನಿಕ ಟೀಕೆಗೆ ಗುರಿಯಾಗುವಂತಹ ರೀತಿಯಲ್ಲಿ ಕೆಲಸ ಮಾಡದ ಹಾಗೆ ನೋಡಿಕೊಳ್ಳಬೇಕು.

ಇನ್ನೊಂದು ವಿಷಯ. ಸುಮಾರು 350 ರಿಂದ 400 ಜನರು 3-4-5 ವರ್ಷಗಳಿಂದ ಡೈಲಿ ವೇಜಸ್ ಮೇಲೆ ಕೆಲಸ ಮಾಡುವವರು ಇದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿ ಆಗಬಾರದು. ಅವರನ್ನು ಖಾಯಂ ಮಾಡತಕ್ಕ ಒಂದು ವ್ಯವಸ್ಥೆಯಾಗಬೇಕು. ಪಬ್ಲಿಕ್ ಲೈಬ್ರರಿ ಇಲಾಖೆಯಲ್ಲಿ ತಕ್ಷಣ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಖಾಯಂ ಮಾಡತಕ್ಕ ಒಂದು ವ್ಯವಸ್ಥೆಯನ್ನು ಮಾಡುತ್ತಾರೆಂದು ನಾನು ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ.

4-00 P. M.

ಇನ್ನು ವಿದ್ಯಾ ಇಲಾಖೆಯಲ್ಲಿ ಅನೇಕ ಉಪಾಧ್ಯಾಯರು ಟೆಂಪೊರರಿಯಾಗಿ ಅಥವಾ ಹಂಗಾಮಿಯಾಗಿ ಕೆಲಸಮಾಡುವವರಿದ್ದಾರೆ. ಸಾವಿರಾರು ಜನರು ಅಂತಹವರು ಇದ್ದಾರೆ. ಅವರನ್ನು ಖಾಯಂ ಮಾಡತಕ್ಕ ಒಂದು ವ್ಯವಸ್ಥೆಮಾಡಬೇಕು. 3-4-5 ವರ್ಷಗಳಿಂದಲೂ ಆ ರೀತಿಯಾಗಿ ಕೆಲಸಮಾಡಿಕೊಂಡು ಬಂದಂಥ ಉಪಾಧ್ಯಾಯರು ಇದ್ದಾರೆ. ಅವರನ್ನು ಹಾಗೆ ಪರ್ಮನೆಂಟ್ ಮಾಡದೆ ಅವರನ್ನು ಕೆಲಸಮಾಡಿಕೊಂಡು ಹೋಗಿ ಎಂದು ಒಂದು ದಿವಸ ಇದ್ದಕ್ಕಿದ್ದ ಹಾಗೆ ನೀವು ಮನೆಗೆ ಹೋಗಿ ಎಂದು ಹೇಳಿದರೆ ಅವರ ಸ್ಥಿತಿಗತಿ ಏನಾಗುತ್ತದೆ, ಇವರ ಜೀವನದ ಬಾಳು ಏನಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳು ಸ್ವಲ್ಪಮಟ್ಟಿಗೆ ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ಇಲ್ಲಿಯತನಕ ಏನು ಟೆಂಪೊರರಿಯಾಗಿ ಕೆಲಸಮಾಡುತ್ತಿದ್ದಾರೋ ಅವರನ್ನು ಖಾಯಂ ಮಾಡುವ ವ್ಯವಸ್ಥೆಯನ್ನು ಆದಷ್ಟು ಜಾಗ್ರತೆಯಾಗಿ ಕೈಗೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಕಾರ್ಪೊರೇಷನ್ನಿನವರು ಒಂದು ನಿರ್ಧಾರವನ್ನು ಇದರ ಬಗ್ಗೆ ತೆಗೆದುಕೊಂಡಿದ್ದಾರೆ. ಕಾರ್ಪೊರೇಷನ್ನಿನವರು ನಡೆಸುವ ವಿದ್ಯಾಭ್ಯಾಸ ಸಂಸ್ಥೆಗಳು ಪ್ರೈಮರಿ, ಹೈಸ್ಕೂಲ್ ಶಾಲೆಗಳನ್ನು ತಾವು ತೆಗೆದುಕೊಳ್ಳುತ್ತೀರೆಂದು ಹೇಳುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಹೆಚ್ಚು ಹೊರೆಯಾಗುತ್ತದೆ. ಮತ್ತೆ ಸರ್ಕಾರ ಅಷ್ಟು ದಕ್ಷತೆಯಿಂದ ಅವುಗಳನ್ನು ನಡೆಸುವುದು ಬಹಳ ಕಷ್ಟವಾಗುತ್ತದೆಂದು ನಾನು ಭಾವಿಸುತ್ತೇನೆ. ಕೊನೆಯ ಪಕ್ಷ ಆಯಾ ವಾರ್ಡ್‌ನಲ್ಲಿರತಕ್ಕ ಕಾರ್ಪೊರೇಟರ್‌ಗಳು ಆಯಾ ಸ್ಕೂಲುಗಳು ಸರಿಯಾಗಿ ನಡೆಯುತ್ತಿವೆಯೋ ಇಲ್ಲವೋ ಎಂಬುದನ್ನು ನೋಡುವುದು ಅವರ ಪ್ರಥಮ ಕರ್ತವ್ಯ, ಈಗ ಅದೂ ಕೂಡ ತಪ್ಪಿ ಹೋಗಿದೆ. ಅವು ಹಳ್ಳಿಯಲ್ಲಿರತಕ್ಕ ಏಕ ಉಪಾಧ್ಯಾಯಶಾಲೆಗಳಂತೆ ಆಗುತ್ತಿವೆಯೆಂದು ನಾನು ಭಾವಿಸುತ್ತೇನೆ. ಆದ್ದರಿಂದ

ಕಾರ್ಪೊರೇಷನ್ನಿನವರು ಹಾಗೂ ಮುನಿಸಿಪಾಲಿಟಿಯವರು ಏನು ಪಾಠಶಾಲೆಗಳನ್ನು ನಡೆಸುತ್ತಿದ್ದಾರೋ, ಮತ್ತು ಏನು ವಿದ್ಯಾಭ್ಯಾಸ ಸಂಸ್ಥೆಗಳನ್ನು ನಡೆಸುತ್ತಿದ್ದಾರೋ ಅವುಗಳನ್ನು ಮುಂದೆಯೂ ನಡೆಸುವ ವ್ಯವಸ್ಥೆಯನ್ನು ಅವರಿಗೆ ಬಿಡಬೇಕೆಂದು ನಾನು ಹೇಳುತ್ತೇನೆ.

Sri C.M. ARUMUGHAM.—Our friends on the other side the Hon'ble Education Minister and the Minister of State for Youth Welfare are they isolated ?

Sri A. R. BADARINARAYANA.—I can assure the Hon'ble Member that we will take the fullest responsibility. Mr. Alva is also here.

Sri C. M. ARUMUGHAM.—What I wanted to submit to you was, the Department is completely isolated from the rest of the Government. They have been left in the battle front unassisted and unguided. There is not even a single Minister present. That is the fate of the Education Department.

Sri A. R. BADARINARAYANA.—We can take the entire b unt.

ಶ್ರೀ ಬಿ. ಭೈರಪ್ಪಾಜಿ.—ಆದ್ದರಿಂದ ನಾನು ಸರ್ಕಾರಕ್ಕೆ ಒಂದು ಮನವಿ ಮಾಡುತ್ತೇನೆ. ಕಾರ್ಪೊರೇಷನ್ನಿನವರು ಹಾಗೂ ದೊಡ್ಡ ದೊಡ್ಡ ಮುನಿಸಿಪಾಲಿಟಿಯವರು ಏನು ಸ್ಕೂಲುಗಳನ್ನು ನಡೆಸುತ್ತಿದ್ದಾರೆಯೋ ಅವುಗಳನ್ನು ಅವರೇ ನಡೆಸುವ ವ್ಯವಸ್ಥೆ ಇರಲಿ. ಜೊತೆಗೆ ಏನಾಗುತ್ತದೆಂದರೆ, ಕಟ್ಟಡ ಕಟ್ಟಿಸುವಾಗ ಅವರು ಶೇಕಡಾ 50 ಭಾಗ ಕೊಡುತ್ತಾರೆ. ಅದು ಅವರಿಗೆ ದೊಡ್ಡ ಪ್ರಾಪರ್ಟಿ ಆಗುತ್ತದೆ. ಸರ್ಕಾರಕ್ಕೆ ಇದರಿಂದ ಹೆಚ್ಚಿಗೆ ಖರ್ಚು ಬರುವುದಿಲ್ಲ. ಆದ್ದರಿಂದ ಅವರಿಗೆ ಆ ಬಗ್ಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿದರೆ, ಆಗ ಅವರು ಅವು ಸರಿಯಾದ ರೀತಿಯಲ್ಲಿ ನಡೆಯುತ್ತಿದೆಯೋ ಇಲ್ಲವೇ ಎಂಬುದನ್ನು ತಿಳಿದು ಅವರಿಗೆ ಸೂಕ್ತ ರೀತಿಯಲ್ಲಿ ತಿಳುವಳಿಕೆ ಕೊಟ್ಟು ನಡೆಸಬೇಕೇ ವಿನಹ ಎಲ್ಲವನ್ನೂ ಸರ್ಕಾರವೇ ನಡೆಸಿಕೊಂಡು ಹೋಗುತ್ತದೆಂದು ಹೇಳುವುದು ಸರಿಯಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮೂರು ವಿಶ್ವವಿದ್ಯಾನಿಲಯಗಳ ಬಗ್ಗೆ ಆಗಾಗ್ಗೆ ಅನೇಕ ಟೀಕೆಗಳು ಬಂದಿವೆ. ಮಾನ್ಯ ಮಂತ್ರಿಗಳು ಅವುಗಳನ್ನು ಸರಿಪಡಿಸಲು ಈಗಾಗಲೇ ಪ್ರಯತ್ನಪಟ್ಟಿದ್ದಾರೆ. ಈ ಮೂರು ಯೂನಿವರ್ಸಿಟಿಗಳನ್ನು ಸೇರಿಸಿ ಒಂದೇ ರೀತಿ ಕಾನೂನು ಮಾಡಿ ಅದನ್ನು ಸಮನ್ವಯಗೊಳಿಸಿ ಉತ್ತಮ ರೀತಿಯಲ್ಲಿ ಯೂನಿವರ್ಸಿಟಿಗಳು ಕೆಲಸಮಾಡುವಂತಹ ವ್ಯವಸ್ಥೆ ಕೂಡಲೇ ಆಗಬೇಕು. ಅದಕ್ಕಾಗಿ ಮಾನ್ಯ ಮಂತ್ರಿಗಳು ಈಗಾಗಲೇ ಪ್ರಯತ್ನಮಾಡುತ್ತಿದ್ದಾರೆ. ಅವರ ಪ್ರಯತ್ನ ಬೇಗನೆ ಯಶಸ್ವಿಯಾಗಲಿ, ಟೀಕೆ ಟಿಪ್ಪಣಿಗಳು ಹೆಚ್ಚಿಗೆ ಬರುವುದೂ ಸಹ ತಪ್ಪಲಿ. ಈ ಬಗ್ಗೆ ಆದಷ್ಟು ಜಾಗ್ರತೆಯಾಗಿ ಕಾರ್ಯಗಳನ್ನು ಮಾಡಿ ಯೂನಿವರ್ಸಿಟಿಗಳು ಒಂದಕ್ಕೊಂದು ಸಂಬಂಧವಿಟ್ಟುಕೊಂಡು ಕೆಲಸ ಮಾಡುವಂತಾಗಲಿ ಎಂದು ನಾನು ಸರ್ಕಾರಕ್ಕೆ ಹೇಳುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿ ಅನೇಕ ವಿದ್ಯಾಸಂಸ್ಥೆಗಳು ಈಗಾಗಲೇ ಕೆಲಸಮಾಡುತ್ತಿವೆ. ಅವುಗಳಲ್ಲಿ ಅನೇಕ ಸಂಸ್ಥೆಗಳು ವಿದ್ಯಾಭ್ಯಾಸವನ್ನು ಕೊಡುವುದಕ್ಕೋಸ್ಕರ ಕೆಲಸಮಾಡುತ್ತಿಲ್ಲ. ನಾನು ಈಗ ಹೆಚ್ಚು ಸಂಸ್ಥೆಗಳ ಹೆಸರುಗಳನ್ನು ಹೇಳುವುದಿಲ್ಲ. ಅವರಲ್ಲಿ ಅನೇಕವು ಸಮಾಜಘಾತುಕ ಕೆಲಸಗಳನ್ನು ಮಾಡುತ್ತಿವೆ. ಕಮಲಾ ನೆಹರೂ ಮಕ್ಕಳ ಮಂದಿರವೆಂಬ ಒಂದು ವಿದ್ಯಾ ಸಂಸ್ಥೆ ಇದೆ. ಅದು ಅನೇಕ ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿದೆ. ಅದು ಕೇವಲ ವ್ಯಾಪಾರಿ ದೃಷ್ಟಿಯಿಂದ ಕೆಲಸಮಾಡುತ್ತಿದೆ. ಆ ರೀತಿಯಾಗಿ ನಡೆಸಿಕೊಂಡು ಹೋದರೆ ಹೇಗೆ ? ಉಪಾಧ್ಯಾಯರಿಗೆ ಸಂಬಳವನ್ನೇ ಕೊಡುತ್ತಿಲ್ಲ. ಇದರಿಂದ ಅಲ್ಲಿ ಕೆಲಸಮಾಡತಕ್ಕವರು ಎಷ್ಟು ನೆಮ್ಮದಿಯಿಂದ ಹಾಗೂ ನಿಷ್ಠೆಯಿಂದ ಕೆಲಸಮಾಡಬಲ್ಲರು ? ಮಕ್ಕಳಿಗೆ ಯಾವ ರೀತಿಯಲ್ಲಿ ಅವರು ತರಬೇತಿ ಕೊಡಬಹುದೆಂಬುದನ್ನು ನಾವು ಯೋಚನೆ ಮಾಡಬೇಕು.

ಶ್ರೀ ಎ. ಆರ್. ಬದರೀನಾರಾಯಣ್.—ಈಗಾಗಲೇ ಆ ಸಂಸ್ಥೆಯನ್ನು ನಾವು ಹತೋಟಿಗೆ ತಂದಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ಇಂತಹವು ಹತ್ತಾರು ಮೈಸೂರು ಸಿಟಿಯಲ್ಲಿ, ಬೆಂಗಳೂರು ಸಿಟಿಯಲ್ಲಿ ನಡೆಯುತ್ತಿವೆ. ಇನ್ನೂ ಅನೇಕ ಕಡೆಗಳಲ್ಲಿ ಇವರ ಒಂದು ವ್ಯಾಪ್ತಿ ಹರಡುತ್ತಾ ಇದೆ. ವಿದ್ಯಾಭ್ಯಾಸ ಕ್ಷೇತ್ರ ವ್ಯಾಪಾರ ಕ್ಷೇತ್ರವಾಗಬಾರದೆಂದು ನಾನು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ಇಂತಹ ಇನ್‌ಸ್ಟಿಟ್ಯೂಷನ್‌ಗಳನ್ನು ಆದಷ್ಟು ಬೇಗ ರಾಷ್ಟ್ರೀಕರಣ ಮಾಡಬೇಕೆಂದು ಹೇಳುತ್ತೇನೆ. ಇಂತಹ ಸಂದರ್ಭಗಳಲ್ಲಿ ಒಬ್ಬ ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್‌ಮಾಡಿ ಸರ್ಕಾರ ಅಂತಹ ಸಂಸ್ಥೆ ಕಾನೂನು ಬದ್ಧವಾಗಿ ವಹಿಸಿಕೊಂಡು ಸರಿಯಾದ ರೀತಿಯಲ್ಲಿ ಕೆಲಸಮಾಡುವುದಕ್ಕೆ ವ್ಯವಸ್ಥೆ ಮಾಡುವುದು ಸರ್ಕಾರದ ಪ್ರಥಮ ಕರ್ತವ್ಯ. ಆ ಬಗ್ಗೆ ಮಾನ್ಯ ಮಂತ್ರಿಗಳು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾರೆಂದು ನಾನು ಭಾವಿಸುತ್ತೇನೆ. ಮಾನ್ಯ ಮಂತ್ರಿಗಳ ಬಗ್ಗೆ ಕೆಲವು ಟೀಕೆಗಳು ಬಂದಿವೆ. ಆದರೂ ಒಂದು ವರ್ಷದಲ್ಲಿಯೇ ಅತ್ಯಂತ ಉತ್ತಮವಾದಂಥ ಕೆಲಸಗಳನ್ನು ಬಹು ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಕೆಲಸಮಾಡುತ್ತಿವೆ. ಅದರ ಬಗ್ಗೆ ನಮ್ಮದು ಯಾವ ಸಂಶಯವೂ ಇಲ್ಲ. ಮಾನ್ಯ ಮಂತ್ರಿಗಳು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಉತ್ತಮವಾದಂಥ ಸೇವೆಯನ್ನು ಮಾಡಿ ಒಳ್ಳೆಯ ಹೆಸರನ್ನು ಗಳಿಸಲೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—As the list is long enough, the Members will have to restrict themselves to 10 minutes each. Yesterday very few Members indicated their desire to speak but names of many more members are included. That is the difficulty.

Sri A. R. BADARINARAYANA.—Two of us have to speak on this side. Myself and the Hon'ble Minister for Youth Services. I require one hour.

Sri V. S. KOUJALGI (Minister of State for Youth Services).—I require half an hour.

VOICE.—Extend the time.

Mr. DEPUTY SPEAKER.—If the Leader of the House and the Leader of the Opposition discuss it, it can be done. Unless it is decided upon or reviewed, I will restrict and stick to the decision of giving ten minutes time to each speaker. The debate on the demands must be over today and passed.

Sri C. M. ARUMUGHAM.—Sir, tomorrow is a non-official day. After all the Education Minister may not speak for one hour. It depends upon his mood, and how he will take it. The Minister of State for Youth Services may not also speak for half-an-hour. At the most, both of them may take not more than one hour. Therefore, may I submit to you Sir, let them reply tomorrow.

Mr. DEPUTY SPEAKER.—I have already told the hon. Member the exact position. I will restriet myself to the decision already arrived it.

Sri C. M. ARUMUGHAM.—Sir, the Leader of the Opposition is not here. But myself and some others in the Opposition can take a decision. The Leader of the House is also not there but the Education Minister should be in a position to take a decision. Let him take a decision that he will reply tomorrow.

Sri A. R. BADARINARAYANA.—I cannot appropriate to myself the powers of the Business Advisiory Committee.

Sri C. M. ARUMUGHAM.—The Leader and the Deputy Leader of the House are not there but the Government cannot shirk its responsibility in taking a decision. The Education Minister must take a decision here and now. Otherwise it will be very difficult. At all times Government must be in a position to take a decision. I cannot say that the Leader of the House must be there. When the Leader goes out, he must make proper arrangements in this behalf during his absence.

Mr. DEPUTY SPEAKER.—May I request the Hon. Minister for Co-operation to discuss this matter with the members of the Opposition on behalf of the Government because I do not see the Chief Minister or the Deputy Leader. So far as I am concerned, I have an open mind in this matter ; I am for confirming the original decision or for reviewing it. Some Minister on behalf of the Government should say, "We will think over it". I may, however, tell Sri Arumugham that I will reach some conclusion in my own way.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಯವರೇ, ಮಾನ್ಯ ವಿದ್ಯಾ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಯ ಬಗ್ಗೆ ಈಗಾಗಲೇ ನನ್ನ ಅನೇಕ ಸ್ನೇಹಿತರುಗಳು ಮಾತನಾಡಿದ್ದಾರೆ. ಆದುದರಿಂದ ನಾನೇನೂ ಇನ್ನು ಹೆಚ್ಚಿಗೆ ಇದರ ಬಗ್ಗೆ ಹೇಳಬಯಸುವುದಿಲ್ಲ. ಈ ದಿವಸ ದೇಶದಲ್ಲೆ ನಮ್ಮ ಮಕ್ಕಳ ವಿದ್ಯಾಪ್ರಗತಿಗಾಗಿ ಏನು ಮಾಡಬೇಕೆಂಬುದನ್ನು ಒತ್ತಿ ಹೇಳಿದ್ದಾರೆ. ಆದರೆ ಏನೋ ಜನರಿಂದ ನಾವೂ ಕೂಡ ಈ ಅಸೆಂಬ್ಲಿಗೆ ಚುನಾಯಿತರಾಗಿ ಬಂದಿದ್ದೇವೆ. ಅದಕ್ಕಾಗಿ ಇಲ್ಲಿ ಎಲ್ಲರಂತೆ ನಾವೂ ಮಾತನಾಡಬೇಕು ಎಂಬ ಒಂದು ದೃಷ್ಟಿಯಿಂದ ಮಾತನಾಡಬೇಕಾಗಿದೆಯೇ ವಿನಾ ನಾವು ಇಲ್ಲಿ ಹೇಳತಕ್ಕ ಯಾವ ಒಂದು ಸಲಹೆಯನ್ನು ಸರ್ಕಾರ ಕಾರ್ಯಗತ ಮಾಡುತ್ತಿಲ್ಲ ಎಂಬ ಒಂದು ಸಂಶಯ ನನಗೆ ಉಂಟಾಗಿದೆ. ಈ ವಿಚಾರದಲ್ಲಿ ನಾನು ಇದೇ ಸಭೆಯಲ್ಲಿ ಕಳೆದ ವರ್ಷ ಅನೇಕ ಸಲಹೆಗಳನ್ನು ಕೊಟ್ಟಿದ್ದೆ, ಆದರೆ ಅವುಗಳಲ್ಲಿ ಯಾವುದೊಂದೂ ಕಾರ್ಯಗತವಾಗಿಲ್ಲ. ಸರ್ಕಾರದವರು ರಾಜ್ಯದಲ್ಲಿ ಈ ದಿವಸ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದೇವೆಂದು ಹೇಳುತ್ತಿದ್ದಾರೆ. ಅದನ್ನು ಒಂದು ಕಾನೂನು ದೃಷ್ಟಿಯಿಂದ ಒಪ್ಪಿಕೊಳ್ಳಬಹುದೇ ವಿನಾ ಅದು ಕಾರ್ಯತಃ ಜಾರಿಯಲ್ಲಿರುವುದಿಲ್ಲ. ಅದನ್ನು ಜಾರಿಗೆ ತಂದಮೇಲೆ ಅದನ್ನು ಯಶಸ್ವಿಗೊಳಿಸುವುದಕ್ಕೆ ಅದಕ್ಕೇನೇನು ಅನುಕೂಲಗಳನ್ನು ಒದಗಿಸಬೇಕೋ ಆ ಭಾಗದಲ್ಲಿ ನಾವು ಇನ್ನೂ ಬಹಳ ಹಿಂದೆ ಇದ್ದೇವೆ. ಅನೇಕ ಹಳ್ಳಿಗಳಲ್ಲಿ ಈಗಲೂ ಪ್ರಾಥಮಿಕ ಶಾಲಾ ಮಕ್ಕಳಿಗೆ ಸ್ಕೂಲುಗಳನ್ನು ನಡೆಸುವುದಕ್ಕೆ ಅಗತ್ಯವಾಗಿರಬೇಕಾದ ಕಟ್ಟಡಗಳೇ ಇರುವುದಿಲ್ಲ. ಮಕ್ಕಳು ಮರದ ಕೆಳಗೆ ಅಥವಾ ಬೇರೆ ಯಾರೋ ಜಗಲಿ ಕಟ್ಟೆಯಮೇಲೆ ಕುಳಿತು ವಿದ್ಯಾಭ್ಯಾಸ ಮಾಡುತ್ತಿದ್ದಾರೆಂದಾಗ ಅದರ ಗುಣ ಎಷ್ಟರಮಟ್ಟಿಗಿರಬೇಕೆಂಬುದನ್ನು ಮಾನ್ಯ ಸಚಿವರೇ ಊಹಿಸಬೇಕು. ನಮಗೆ ಪ್ರಜಾಪ್ರಭುತ್ವ ಬಂದು 28 ವರ್ಷಗಳು ಕಳೆದಿದ್ದಾಗ್ಯೂ ನಮಗೆ ಈ ಸ್ಕೂಲ್ ಬಿಲ್ಡಿಂಗುಗಳನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲ. ಹಳ್ಳಿಗಳಲ್ಲಿ 5 ಸಾವಿರದಲ್ಲಿ ಒಂದು ಶಾಲಾ ಕಟ್ಟಡ ಕಟ್ಟಿಸಬೇಕಾಗಿದ್ದರೆ ಅದಕ್ಕೆ ಸರ್ಕಾರದವರು ಒಂದು ಸಾವಿರ ಕೊಟ್ಟರೆ ಇನ್ನುಳಿದ 4 ಸಾವಿರವನ್ನು ಪೀಪಲ್ ಕಾಂಟ್ರಿಬ್ಯೂಷನ್ ಎಂದು ಜನರಿಂದ ಎತ್ತಬೇಕೆಂದು ಹೇಳುತ್ತಿದ್ದಾರೆ. ಮೊದಲೇನೋ ಒಂದಾನೊಂದು ಕಾಲದಲ್ಲಿ ಜನರಲ್ಲಿ ಉತ್ಸಾಹ ಇತ್ತು, ಆಗ ಸ್ವಲ್ಪ ಕಾಲ ಅದು ನಡೆಯಿತು. ಈಗ ಜನರಲ್ಲಿ ಹಣವೂ ಇಲ್ಲ, ಉತ್ಸಾಹವೂ ಇಲ್ಲ. ಆದ್ದರಿಂದ ಈ ಕಾರ್ಯ ಈಗ ಮುಂದುವರಿಯುವುದು ಬಹಳ ಕಷ್ಟವಾಗಿದೆ. ಅಲ್ಲಿಯ ಮಕ್ಕಳ ಸ್ಥಿತಿ ಬಹಳ ಚಿಂತಾಜನಕವಾಗಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಮತ್ತು ಸಿಟಿಗಳಲ್ಲಿ ಶಾಲೆಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಇಂಥ ಯಾವ ನಿರ್ಬಂಧಗಳೂ ಇರುವುದಿಲ್ಲ. ಇಲ್ಲಿ ಎಲ್ಲ ಕಟ್ಟಡಗಳನ್ನು ಸರ್ಕಾರದವರೇ ಕಟ್ಟಿಸುತ್ತಾರೆ. ಆದರೆ ಹಿಂದೆ ಎನ್.ಇ.ಎಸ್. ಸ್ಕೀಮಿನಲ್ಲಿ ಈ ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡತಕ್ಕ ಕಾರ್ಯದಲ್ಲಿ ಸರ್ಕಾರದವರು ಶೇಕಡ 75ರಷ್ಟನ್ನು ಹಾಕಿದರೆ ಜನರು ಇನ್ನುಳಿದ ಶೇಕಡ 25ರಷ್ಟನ್ನು ಕೊಡಬೇಕೆಂದು ಒಂದು ವಿಧಾಯಕವಿತ್ತು. ಈ ಸ್ಕೀಮನ್ನು ಮುಂದುವರಿಸಿದರೆ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸ್ವಲ್ಪ ಅನುಕೂಲವಾಗಬಹುದು. ಇನ್ನು ಅಲ್ಲಿ ಸ್ಥಳೀಯ ಅಧಿಕಾರಿಗಳೇನಿದ್ದಾರೆ ಅವರನ್ನು ಶಾಲಾ ಸ್ಥಾಪನೆ ಮಾಡುವುದಕ್ಕೆ ಅನುಮತಿ

(ಶ್ರೀ ಎಚ್. ಜಿ. ಚನ್ನಪ್ಪ)

ಕೇಳಿದರೆ ಮೇಲಕ್ಕೆ ಬರೆದಿದ್ದೇವೆಂದು ಹೇಳುತ್ತಿರುತ್ತಾರೆ. ಈ ದಿವಸ ಚಿಕ್ಕ ಚಿಕ್ಕ ಮಕ್ಕಳು 5–6 ವರ್ಷ ವಯಸ್ಸಿನ ಮಕ್ಕಳು ಇನ್ನೊಂದೂರಿಗೆ ಹೋಗಿ 2–3 ಮೈಲಿ ದೂರ ನಡೆದು ವಿದ್ಯಾಭ್ಯಾಸ ಮಾಡಬೇಕೆಂದರೆ ಬಹಳ ಕಷ್ಟವಾಗುತ್ತ ಇದೆ. ಇಂಥ ಸಂದರ್ಭಗಳಲ್ಲಿ ಸ್ಥಳೀಯ ಅಧಿಕಾರಿಗಳ್ಕ ಯಾವ ಹಳ್ಳಿಯಿಂದ ಇಂಥ ಒಂದು ಡಿಮ್ಯಾಂಡ್ ಬರುತ್ತದೆಂಬುದನ್ನು ನೋಡಿ ಅವರು ಆ ಗ್ರಾಮಕೆ ಹೋಗಿ ಸ್ವತಃ ವಿಷಯಗಳನ್ನು ಪರಿಶೀಲನೆಮಾಡಿ ಯಾವ ಗ್ರಾಮದಲ್ಲಿ 30 ಬಾಲಕರಿದ್ದಾರೋ ಅಂಥಾ ಗ್ರಾಮಕ್ಕೆ ಒಂದು ಶಾಲೆಯನ್ನು ಮಂಜೂರು ಮಾಡತಕ್ಕ ಅಧಿಕಾರ ಆ ಸ್ಥಳೀಯ ಅಧಿಕಾರಿಗಳಿಗಿರುವಂತೆ ಒಂದು ಸರ್ಕಾರ ಆಜ್ಞೆಮಾಡಬೇಕೆಂಬ ವಿಷಯವನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಇನ್ನು ಇಂಟೀರಿಯರ್ ಪಾರ್ಟಿನಲ್ಲಿ ಇರತಕ್ಕ ಶಾಲೆಗಳಿಗೆ ಉಪಾಧ್ಯಾಯರ ವಸತಿ ಸೌಕರ್ಯಗಳು ಇರುವುದಿಲ್ಲ. ಆದುದರಿಂದ ಅಲ್ಲಿಗೆ ಯಾವ ಉಪಾಧ್ಯಾಯರನ್ನು ವರ್ಗಾಯಿಸಿದರೂ ಹೋಗುವುದಿಲ್ಲ. ಅಲ್ಲಿನ ಹುಡುಗರು ಬೇರೆ ಸ್ಕೂಲು ಇರತಕ್ಕ ಗ್ರಾಮಕ್ಕೆ ಹೋಗಲು ಅವರು ಒಪ್ಪುತ್ತಿಲ್ಲ. ಹೀಗಾಗಿ ಆ ಗ್ರಾಮಗಳ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಆದರೆ ಈ ದಿವಸ ಸರ್ಕಾರದ ಆಜ್ಞೆಯನ್ನು ಪರಿಪಾಲನೆ ಮಾಡದಿದ್ದರೆ ಅಂಥ ಉಪಾಧ್ಯಾಯರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಸಿ.ಸಿ.ಎ. ರೂಲ್ಸ್ ಇದೆ. ಅವರ ಪ್ರಕಾರ ಕ್ರಮ ಕೈಗೊಳ್ಳದಿದ್ದರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದೇ ಸಂದರ್ಭದಲ್ಲಿ ನಾನು ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ. ಅದು ಏನೆಂದರೆ ಕೆಲವು ಗ್ರಾಮಗಳಲ್ಲಿ ಬಹಳ ಚೆನ್ನಾಗಿ ಮಕ್ಕಳಿಗೆ ಪಾಠಮಾಡತಕ್ಕ ಉಪಾಧ್ಯಾಯರುಗಳನ್ನು ಅಲ್ಲಿನ ಕೆಲವು ಸ್ಥಳೀಯ ತರಲೇ ಜನರು ಸೇರಿಕೊಂಡು ಒಂದು ಅನಾನಿಮಸ್ ಅರ್ಜಿಯನ್ನು ಬರೆದು ಅವರನ್ನು ಬೇರೆ ಕಡೆಗೆ ವರ್ಗವಾಗುವಂತೆ ಮಾಡುತ್ತಿದ್ದಾರೆ. ಇದರಿಂದ ಉತ್ಸಾಹದಿಂದ ಒಳ್ಳೆಯ ಕೆಲಸ ಮಾಡತಕ್ಕ ಉಪಾಧ್ಯಾಯರುಗಳೇನಿದ್ದಾರೆ ಅವರು ಇಂಥ ಕಾರ್ಯಗಳನ್ನು ನೋಡಿ ಬಹಳ ಜಿಗುಪ್ಸೆಹೊಂದಿ ಎಲ್ಲಿದ್ದರೂ ಇಷ್ಟೇತಾನೆ ಎಂದು ಈಗ ತಮ್ಮ ಉತ್ಸಾಹವನ್ನೆಲ್ಲಾ ಕಳೆದುಕೊಂಡು ಕೆಲಸದಲ್ಲಿ ಅವರು ಯಾವ ಇಂಟ್ರೆಸ್ಟನ್ನೂ ತೋರಿಸುತ್ತಿಲ್ಲ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸರಕಾರಕ್ಕೆ ಸೂಚನೆ ಮಾಡಬಯಸುವುದೇನೆಂದರೆ ಅಂಥ ಒಂದು ಅರ್ಜಿಯನ್ನು ಯಾವ ಅಧ್ಯಾಪಕರ ಬಗ್ಗೆ ಬರುತ್ತದೋ ಅದನ್ನು ಅಲ್ಲಿನ ಸ್ಥಳೀಯ ಅಧಿಕಾರಿಗಳು ತಾವೇ ಸ್ವತಃ ಅದನ್ನು ತೆಗೆದುಕೊಂಡು ಅದೇ ಗ್ರಾಮಕ್ಕೆ ಹೋಗಿ ವಿಚಾರಣೆ ನಡೆಸಿ ಆ ಉಪಾಧ್ಯಾಯರು ತಪ್ಪು ಮಾಡಿದ್ದರೆ ಅದಕ್ಕೆ ತಕ್ಕ ಶಿಕ್ಷೆ ಕೊಡಲಿ, ಇಲ್ಲವೇ ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ಜನರಿಂದ ರುಜುವಾತು ಬಂದರೆ ಅವರಿಗೆ ಪ್ರೋತ್ಸಾಹ ನೀಡಬೇಕು. ಇಂಥಾ ಒಂದು ಪದ್ಧತಿಯನ್ನು ಸರ್ಕಾರದವರು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಈಗ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ, ಅವರಿಗೆ ಯಾವ ಕೆಲಸವೂ ದೊರೆಯುತ್ತಿಲ್ಲ. ಅವರು ಕೆಲಸವಿಲ್ಲದೆ ಇರುವುದರಿಂದ ಯಾವ ಕೃತ್ಯ ಮಾಡುವುದಕ್ಕೂ ಹಿಂಜರಿಯುವುದಿಲ್ಲ ಆದುದರಿಂದ ಪ್ರೈಮರಿ ಮತ್ತು ನರ್ಸರಿ ಹಂತದಿಂದಲೇ ವಿದ್ಯಾಭ್ಯಾಸ ಮುಗಿದ ಕೂಡಲೇ ತನ್ನ ಜೀವನವನ್ನು ಸ್ವತಂತ್ರವಾಗಿ ತಾನು ಮಾಡಿಕೊಳ್ಳುವ ಶಕ್ತಿ ಬರುವಂತೆ ಅದಕ್ಕೆ ತಕ್ಕ ವಿದ್ಯಾಭ್ಯಾಸ ಕೊಡಬೇಕು. ಪ್ರತಿ ಹಂತದಲ್ಲೂ ಇದಕ್ಕೆ ಗಮನ ಕೊಡಬೇಕು. ಯಾವ ಮಕ್ಕಳಿಗೆ ಯಾವುದರಲ್ಲಿ ಅಭಿರುಚಿಯಿದೆಯೋ ಅದರಲ್ಲಿ ಅವರಿಗೆ ತರಬೇತಿ ಕೊಡಬೇಕು. ಹಾಗೆ ಮಾಡಿ ಅವರು ವಿದ್ಯಾಭ್ಯಾಸ ಮುಗಿದ ಮೇಲೆ ಸರಕಾರಿ ನೌಕರಿ ಹುಡುಕದೆ ಅದಕ್ಕಾಗಿ ಅಲೆಯದೆ ತಮ್ಮ ಕಾಲಮೇಲೆ ತಾವು ನಿಂತು ಜೀವನ ಮಾಡುವುದಕ್ಕೆ ಅನುಕೂಲವಾಗುವಂತೆ ಮಾಡಬೇಕು. ಅಂಥಾ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತರಬೇಕು.

ಈಗ ಎಲ್ಲಿ ನೋಡಿದರೂ ವಿಶ್ವವಿದ್ಯಾನಿಲಯದ ಮಾತೇ ಇರುವುದು. ನಮ್ಮ ಊರಿಗೆ ಒಂದು ಕಾಲೇಜು ಬೇಕು ಎಂದು ಎಲ್ಲರೂ ಕೇಳುತ್ತಿದ್ದಾರೆ, ಯಾರೂ ತಾಂತ್ರಿಕ ಶಾಲೆ ಬೇಕೆಂದು ಕೇಳುತ್ತಿಲ್ಲ. ಕಾಲೇಜು ವಿದ್ಯಾಭ್ಯಾಸ ಕಡಮೆ ಮಾಡಿ ತಾಂತ್ರಿಕ ವಿದ್ಯಾಭ್ಯಾಸ ಹೆಚ್ಚಿಸುವವರೆಗೆ ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಿಲ್ಲ; ತಾಂತ್ರಿಕ ವಿದ್ಯಾಭ್ಯಾಸ ಹೆಚ್ಚಿದರೆ ಈ ಸಮಸ್ಯೆ ಪರಿಹಾರವಾಗಬಹುದು. ಆದುದರಿಂದ ಪ್ರತಿಯೊಂದು ತಾಲ್ಲೂಕು ಹೆಡ್ ಕ್ವಾರ್ಟರಿನಲ್ಲೂ ತಾಂತ್ರಿಕ ಶಾಲೆಯನ್ನು ತೆರೆಯಬೇಕು, ಸ್ಟೈಪೆಂಡರಿ ಸಿಸ್ಟಂ ಜಾರಿಗೆ ತರಬೇಕು, ವಿದ್ಯಾರ್ಥಿ ವೇತನ ಕೊಟ್ಟು ತರಬೇತಿ ಕೊಡಬೇಕಕ, ಪ್ರೈಮರಿ ವಿದ್ಯಾಭ್ಯಾಸದ ಜೊತೆಗೆ ನರ್ಸರಿ ವಿದ್ಯಾಭ್ಯಾಸಕ್ಕೂ ಅನುಕೂಲ ಮಾಡಿದರೆ ಒಳ್ಳೆಯದು. ಯಾವ ಹಳ್ಳಿಯಲ್ಲಿ ಪ್ರೈಮರಿ ಶಾಲೆಯಿದೆ ಅಲ್ಲಿ ನರ್ಸರಿ ಶಾಲೆಗೂ ಅವಕಾಶಮಾಡಿ ಅದನ್ನು ಪ್ರೈಮರಿ ಶಾಲೆಗೆ ಆಟ್ಯಾಚ್ ಮಾಡಿ ಒಬ್ಬ

ಉಪಾಧ್ಯಾಯಿನಿಯನ್ನು ಕೊಟ್ಟು ಸಣ್ಣ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯಲು ಅವಕಾಶ ಮಾಡಬೇಕು, ಇಂದು ಸಿಟಿಗಳಲ್ಲಿ ಮಾತ್ರ ನರ್ಸರಿ ವಿದ್ಯಾಭ್ಯಾಸಕ್ಕೆ ಅನುಕೂಲವಿದೆ, ಹಳ್ಳಿಗಳಲ್ಲಿ ನರ್ಸರಿ ಶಾಲೆ ಯಾರೂ ನಡೆಸುತ್ತಿಲ್ಲ. ಖಾಸಗಿ ಜನರು ಅದನ್ನು ನಡೆಸಲು ಮುಂದೆ ಬರದಿದ್ದರೆ ಸರಕಾರದವರೇ ಅವಕಾಶ ಕಲ್ಪಿಸಬೇಕು.

ಖಾಸಗಿ ಶಾಲೆ ವಿಚಾರ ಎಲ್ಲರೂ ಹೇಳುತ್ತಿದ್ದಾರೆ. ಪ್ರಾಥ ಶಾಲೆಗಳಿಗೆ ಮೊದಲು 3 ವರ್ಷವಾದಮೇಲೆ ಸರಕಾರ ಗ್ರಾಂಟು ಕೊಡುತ್ತಿತ್ತು. ಈಗ 5 ವರ್ಷವಾದ ಮೇಲೆ ಕೊಡುತ್ತಿದ್ದಾರೆ, ಇದು ಸರಿಯಲ್ಲ, ಹಳ್ಳಿ ಶಾಲೆಗಳಿಗೆ ಇದರಿಂದ ಕಷ್ಟವಾಗುವುದು. ಆದುದರಿಂದ 5 ವರ್ಷ ಎಂದಿರುವುದನ್ನು ತೆಗೆದು ಹಾಕಿ ಮೊದಲಿನಂತೆ 3 ವರ್ಷ ಮಾಡಬೇಕು. ಖಾಸಗಿ ಶಾಲೆಗಳ ಮೇಲೆ ಅನೇಕ ದೂರುಗಳಿವೆ. ಆದರೆ ಎಲ್ಲ ಶಾಲೆಗಳೂ ಆ ರೀತಿ ಇರುವುದಿಲ್ಲ. ಬಿಸಿನೆಸ್ ರೂಪದಲ್ಲಿ ಎಲ್ಲರೂ ನಡೆಸುವುದಿಲ್ಲ, ಅನೇಕ ಖಾಸಗಿ ಶಾಲೆಗಳಲ್ಲಿ ಉತ್ತಮವಾದ ಶಿಕ್ಷಣ ಕೊಟ್ಟು ಶಾಲೆಗಳನ್ನು ಉತ್ತಮ ರೀತಿಯಲ್ಲಿ ನಡೆಸುತ್ತಿದ್ದಾರೆ. ಅನೇಕರು ಶಿಸ್ತನ್ನು ಖಾಸಗಿ ಶಾಲೆಗಳಲ್ಲಿ ಕಾಪಾಡಿ ಉತ್ತಮ ಮಟ್ಟದಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಉದಾಹರಣೆಗೆ ಕನಕಪುರ ರೂರಲ್ ಎಜುಕೇಷನ್ ಸೊಸೈಟಿ ಮತ್ತು ಸಿದ್ಧಗಂಗಾ ರೂರಲ್ ಎಜುಕೇಷನ್ ಸೊಸೈಟಿ ನಡೆಸುವ ಶಾಲೆಗಳನ್ನು ನೋಡಬಹುದು, ಅಲ್ಲಿ ಉತ್ತಮವಾದ ವಿದ್ಯಾಭ್ಯಾಸ ನೀಡುತ್ತಿದ್ದಾರೆ. ಅಲ್ಲಿ ವಿದ್ಯಾವಂತರಾಗಿ ಬಂದವರು ಆದರ್ಶ ಜೀವನ ನಡೆಸುತ್ತಿದ್ದಾರೆ. ಕೆಲವರು ಕೊಡುವ ಸೌಲಭ್ಯ ದುರುಪಯೋಗಪಡಿಸಿಕೊಂಡ ಮಾತ್ರಕ್ಕೆ ಎಲ್ಲರೂ ಹಾಗೆ ಮಾಡುವರೆಂದು ಹೇಳುವುದು ಸರಿಯಲ್ಲ. ಗ್ರಾಂಟನ್ನು 3 ವರ್ಷದಿಂದಲೇ ಕೊಡಬೇಕು. ಹಳ್ಳಿಗಳಲ್ಲಿ ಪ್ರೌಢಶಾಲೆ ಇರುವ ಕಡೆ ವಿದ್ಯಾರ್ಥಿ ನಿಲಯ ಮಾಡಬೇಕು, ವಿದ್ಯಾರ್ಥಿವೇತನ ಕೊಡಬೇಕು, ಮ್ಯಾನೇಜೀರಿಯಲ್ ಕಾಸ್ಟ್ ಆದರೂ ಕೊಟ್ಟು ವಿದ್ಯಾ ಸಂಸ್ಥೆ ಮುಂದುವರೆಯಲು ಅವಕಾಶ ಮಾಡಬೇಕು. ಇಲ್ಲದಿದ್ದರೆ ಕಷ್ಟವಾಗುವುದು. ದೂರದಿಂದ ಬರುವ ಮಕ್ಕಳಿಗೆ ತಮ್ಮ ಸ್ಥಳಗಳಿಗೆ ವಾಪಸು ಹೋಗಲು ವೇಳೆಯಾಗುವುದು. ಇದರಿಂದ ತೊಂದರೆಯಾಗುವುದು. ಆದುದರಿಂದ ಪ್ರೌಢಶಾಲೆ ಇರುವ ಸ್ಥಳಗಳಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನು ತೆರೆದು ಗ್ರಾಂಟು ಕೊಡಬೇಕು.

ಈಗ ಸಿಟಿಯಲ್ಲಿ ಅನೇಕ ಶಾಲೆಗಳಿವೆ, ಆಬಲಾಶ್ರಮ ಮುಂತಾದ್ದಿವೆ. ಅಲ್ಲಿ ಉಪಾಧ್ಯಾಯರಿರುವುದಿಲ್ಲ, ವಿದ್ಯಾರ್ಥಿಗಳಿರುವುದಿಲ್ಲ, ಶಾಲಾ ಕಟ್ಟಡ ಕೂಡ ಇರುವುದಿಲ್ಲ, ಅಟೆಂಡೆನ್ಸ್ ರಿಜಿಸ್ಟರಿರುವುದಿಲ್ಲ, ಇಂಥವುಗಳನ್ನು ತನಿಖೆ ಮಾಡಿ ಬಲಿಹಾಕಿದರೆ ಖಾಸಗಿ ಕ್ಷೇತ್ರಕ್ಕೆ ಒಳ್ಳೆಯ ಹೆಸರು ಬರುವುದು. ಕಮಲಾ ನೆಹರು ಆರ್ಫನ್ ಸ್ಕೂಲಿನ ವಿಷಯದಲ್ಲಿ ಒಂದು ಕಾಲ ಅಟೆನ್ಷನ್ ಕಳಿಸಿದ್ದೇನೆ, ಅದು ಬಂದಾಗ ಅದರ ವಿಷಯ ಹೇಳುತ್ತೇನೆ, ಈ ಸಂದರ್ಭದಲ್ಲಿ ಸಲಹೆ ಏನು ಕೊಟ್ಟಿದ್ದೇವೆ ಅವನ್ನು ಕಾರ್ಯಗತ ಮಾಡಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ.

MR. DEPUTY SPEAKER.—Tomorrow we have non-official work. I have not heard about the agreement arrived at.

SRI M. MALLAPPA.—It is agreed that tomorrow reply will be made by the hon. Minister and there will be no question hour. The whole of today we can discuss this Demand.

†ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ಸಭೆಯ ಮುಂದಿಟ್ಟಿರುವ 67 ಕೋಟಿ ರೂಪಾಯಿಗಳ ಬೇಡಿಕೆಗೆ ಸಂಪೂರ್ಣ ಬೆಂಬಲ ಕೊಡುತ್ತಾ ಕೆಲವು ವಿಷಯಗಳನ್ನು ಹೇಳುತ್ತೇನೆ. ನಮ್ಮ ವಿದ್ಯಾ ಇಲಾಖೆ ಮಾಡಿರುವ ಸ್ತುತ್ಯ ಕಾರ್ಯವನ್ನು ಮೊದಲು ಪ್ರಸ್ತಾಪಿಕವಾಗಿ ತಿಳಿಸಿ ನಂತರ ಕೆಲವು ವಿಚಾರಗಳನ್ನು ಹೇಳಲು ಬಯಸುತ್ತೇನೆ. ಈ ಒಂದು ವರ್ಷದಲ್ಲಿ ಸ್ವಾತಂತ್ರ್ಯ ಬಂದೆ 25 ವರ್ಷಗಳಲ್ಲಿ ಆಗಿಲ್ಲದೆ ಇದ್ದ ಸ್ತುತ್ಯ ಕಾರ್ಯಗಳನ್ನು ಇಲಾಖೆ ಮಾಡಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಜೂನಿಯರ್ ಕಾಲೇಜುಗಳ ಸ್ಥಾಪನೆಯಾಗಿದೆ, ಹೈಸ್ಕೂಲು ಕಾಲೇಜುಗಳ ಸಂಖ್ಯೆ ಹೆಚ್ಚಾಗಿದೆ. ಇದು ಬೆನ್ನು ತಟ್ಟಿಕೊಳ್ಳುವ ಸ್ತುತ್ಯಕಾರ್ಯವಾಗಿದೆ. ಆದರೆ ವಿದ್ಯಾ ಪದ್ಧತಿಯ ಬಗ್ಗೆ ವಿಚಾರ ವಿನಿಮಯ ಮಾಡಬೇಕಾದ ಕಾಲ ಸನ್ನಿಹಿತವಾಗಿದೆ, ಇಂದು ಪದವೀಧರರು ಪ್ರತಿಯೊಬ್ಬ ಸದಸ್ಯರ ಹತ್ತಿರ, ಮಂತ್ರಿಗಳ ಬಳಿಗೆ ಬೆಳಗಿನಿಂದ ಸಂಜೆಯವರೆಗೆ ಬಂದು ಅವರ ಮನೆ ಬಾಗಿಲಿಗೆ ಹೋಗಿ ಇಂಥವರಿಗೆ ಫೋನ್ ಮಾಡಿ, ಇಂಥವರಿಗೆ ಕಾಗದ ಕೊಡಿ, ಪಿ ಎಸ್ ಸಿ. ಅಧ್ಯಕ್ಷರಿಗೆ ಹೇಳಿ ಎಂದು ಕೇಳುತ್ತಿರುವುದು ಕಂಡುಬರುವುದು. ಇದೇಕೆ ಹೀಗೆ ಎಂದು ನಾವು ಯೋಚನೆ ಮಾಡಬೇಕಾಗಿದೆ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ವರ್ಷೇ ವರ್ಷೇ ಹೆಚ್ಚುತ್ತಿದೆ, ಅನೇಕ ವಿದ್ಯಾವಂತರನ್ನು ನಾವು ಸೃಷ್ಟಿಮಾಡುತ್ತಿದ್ದೇವೆ. ಈ ನಿರುದ್ಯೋಗಿಗಳ ಸಮೂಹವೇನಿದೆ ಅದು ನಾಳೆ ಒಂದಲ್ಲ ಒಂದು ರೀತಿಯಲ್ಲಿ ಸಮಾಜಕ್ಕೆ ಕಂಟಕವಾಗಬಹುದು, ತಲೆಬೇನೆಯಾಗಬಹುದು.

ಇವತ್ತು ಒಬ್ಬ ವಿದ್ಯಾವಂತ, ಒಬ್ಬ ವಿಶ್ವವಿದ್ಯಾನಿಲಯದ ಗ್ರಾಜುಯೇಟ್ ಸ್ವತಂತ್ರವಾಗಿ ತನ್ನ ಕಾಲ ಮೇಲೆ ನಿಂತು ಕೆಲಸ ಮಾಡುತ್ತೇನೆ ಎಂದು ಹೇಳತಕ್ಕಂಥ ಕೆಚ್ಚು ಅವನಲಿಲ್ಲ ಎಂದು ಹೇಳಿದಾಗ ನಮ್ಮ ವಿದ್ಯಾಭ್ಯಾಸದಲ್ಲಿ ಏನೋ ದೋಷ ಇರಬೇಕು ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ಪರಿಣಿತರಾಗಿರತಕ್ಕವರು, ನಿಷ್ಣಾವಂತರು ಇದಕ್ಕೆ ತೀರ್ಮಾನ ತೆಗೆದುಕೊಳ್ಳತಕ್ಕ ವಿಚಾರವಾಗಿದೆ. ಇವತ್ತು ನಾವು ಏನನ್ನು ಸೃಷ್ಟಿ ಮಾಡುತ್ತಾ ಇದ್ದೇವೆ, ಎಂದರೆ ನಿರುದ್ಯೋಗ ವಿದ್ಯಾವಂತರ ಸಂಖ್ಯೆಯನ್ನು ಸೃಷ್ಟಿ ಮಾಡುತ್ತಿದ್ದೇವೆ. ಹಿಂದೆ ಫ್ರಾನ್ಸ್ ದೇಶದಲ್ಲಿ ಇದರಿಂದ ರಕ್ತ ಕ್ರಾಂತಿಗೆ ಬುನಾದಿಯಾಯಿತು ಎಂದು ನಾವು ಚರಿತ್ರೆಯಲ್ಲಿ ಓದಿದ್ದೇವೆ. ಇಂಥ ವಿದ್ಯಾವಂತರ ಸಂಖ್ಯೆಯನ್ನು ಸೃಷ್ಟಿ ಮಾಡದೆ ಅವರ ಹಕ್ಕು ಭಾದ್ಯತೆಗಳು ಏನು ಎನ್ನುವ ತಿಳುವಳಿಕೆ ಮಾಡಿಕೊಟ್ಟು, ತನ್ನ ಕರ್ತವ್ಯವನ್ನು ಮರೆಯದ ರೀತಿ ಮಾಡಬೇಕು.

4-30 P. M.

ಎಂತಹ ವಿದ್ಯಾವಂತರನ್ನು ಸೃಷ್ಟಿ ಮಾಡಬೇಕು ಎಂಬುದನ್ನು ಆರ್ಯ ಸಂಸ್ಕೃತಿಯಲ್ಲಿ ಹೇಳಿದ್ದಾರೆ. ಅದಕ್ಕೆ ತದ್ವಿರುದ್ಧವಾಗಿ ವಿದ್ಯಾವಂತರ ಸಂಖ್ಯೆಯನ್ನು ನಾವು ಸೃಷ್ಟಿ ಮಾಡುತ್ತಾ ಇದ್ದೇವೆ. ಇವತ್ತು ಯಾವ ತರಹ ವಿದ್ಯಾವಂತ ಸಮೂಹ ಇರುವುದು ಎಂದರೆ, ಇದಕ್ಕೆ ಒಂದು ಸಣ್ಣ ಉದಾಹರಣೆ ಹೇಳಬೇಕಾಗುತ್ತದೆ. ನಾಲ್ಕು ಜನ ಪ್ಯಾಂಟು ಧಾರಿಗಳು ರಸ್ತೆಯ ಮಧ್ಯದಲ್ಲಿ ನಿಂತು ಸಿಗರೇಟ್ ಸೇದುತ್ತಾ ಇರುತ್ತಾರೆ. ವಾಹನಗಳವರು ಬಂದು ನೀವು ಬೀದಿಯ ಪಕ್ಕಕ್ಕೆ ಹೋಗಿ ದಮ್ಮಯ್ಯ ಎಂದು ಹೇಳಬೇಕು, ಇಲ್ಲದಿದ್ದರೆ, ನಿಮಗೆ ಕಣ್ಣು ಕಾಣುವುದಿಲ್ಲವೇ ಎಂದು ಕೇಳಿದರೆ ವಾಹನ ಚಾಲಕರಿಗೆ ಚಪ್ಪಲಿ ಏಟು. ಇಂಥ ವಿದ್ಯಾವಂತ ಸಮೂಹವನ್ನು ನಾವು ಸೃಷ್ಟಿ ಮಾಡುತ್ತಾ ಇದ್ದೇವೆ, ಈ ರೀತಿ ಹಳ್ಳಿಗಾಡುಗಳಲ್ಲಿ ಯಾರೂ ಮಾಡಿದ್ದು ಗೊತ್ತಾಗಲಿಲ್ಲ. ಅವರು ಒಂದು ಪರಂಪರೆಯನ್ನು, ತತ್ವವನ್ನು ಇಟ್ಟುಕೊಂಡಿದ್ದಾರೆ. ಅದನ್ನು ಮರೆತು ಯಾರೂ ಮಾಡುವುದಿಲ್ಲ. ನಾವು ಯಾವುದನ್ನೂ ಒಳ್ಳೆಯದು ಎಂದು ಇಟ್ಟುಕೊಂಡಿದ್ದೇವೋ, ಅದನ್ನು ಮರೆತು, ಪಾಶ್ಚಿಮಾತ್ಯರಲ್ಲಿರುವ ಒಳ್ಳೆಯದನ್ನು ಕಲಿಯಬೇಕಾಗಿತ್ತೋ ಅದನ್ನು ಕಲಿಯದೆ, ಕೆಟ್ಟದ್ದನ್ನು ತೆಗೆದುಕೊಂಡು ಒಳ್ಳೆಯದನ್ನು ಬಿಟ್ಟು ಹೋಗಿದ್ದೇವೆ ಎನ್ನುವ ಭಾವನೆ ಯಾರಿಗಾದರೂ ಬಂದೆ ಇರಲಾರದು. ಸ್ವಾತಂತ್ರ್ಯ ಬಂದ ಮೇಲೆ, ಇಷ್ಟೊಂದು ಹಣ ವೆಚ್ಚ ಮಾಡಿ ರಾಜ್ಯದಲ್ಲಿ ಏನು ಕೆಲಸ ಮಾಡಿದಂತಾಯಿತು ಎಂದು ವಿಚಾರ ಮಾಡಬೇಕಾಗಿದೆ. ವಿದ್ಯಾರ್ಥಿಗೆ ಇಷ್ಟ ಇದೆಯೋ ಇಲ್ಲವೋ ಯಾವುದೋ ಒಂದು ರೀತಿಯ ವಿದ್ಯಾಭ್ಯಾಸವನ್ನು ನಾವು ಅವನಿಗೆ ಕೊಟ್ಟಂತಾಗುತ್ತದೆ. ನಾನು ವಕೀಲನಾಗಿದ್ದರೆ, ನನ್ನ ಮಗನೂ ವಕೀಲನಾಗಬೇಕು. ಏಕೆಂದರೆ, ನಾನು 5-10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ತೆಗೆದಿರುವ ಪುಸ್ತಕಗಳನ್ನು ಅವನೂ ಓದಬೇಕು, ವಕೀಲನಾಗಬೇಕು ಎಂದು ಹೇಳುತ್ತೇನೆ, ಅದು ಬಿಟ್ಟು ನನ್ನ ಮಗ ಸಂಗೀತ ಕಲಿಯುತ್ತೇನೆ ಎಂದರೆ ಮುಂದೇನಿದೆ, ನಾನು ಹೇಳಿದ್ದನ್ನು ಕಲಿ ಎನ್ನುವ ಪ್ರವೃತ್ತಿ ನಮ್ಮಲ್ಲಿದೆ. ವಿದ್ಯಾರ್ಥಿಗಳಲ್ಲಿ ಯಾವುದರಲ್ಲಿ ಅಭಿರುಚಿ ಇದೆಯೋ ಅದನ್ನು ಬಿಟ್ಟು ಬೇರೆ ರೀತಿಯ ವಿದ್ಯಾಭ್ಯಾಸವನ್ನು ಕೊಟ್ಟರೆ ಆ ವಿದ್ಯಾರ್ಥಿ ಹೇಗೆ ಮುಂದುವರೆಯುವುದಕ್ಕೆ ಸಾಧ್ಯ? ಅವನಲ್ಲಿ ಅಭಿರುಚಿ ಇರುವ ಶಿಕ್ಷಣವನ್ನು ನಾವು ಕೊಡಲಿಕ್ಕೆ ಸಾಧ್ಯವಾಗದೆ ಹೋಗುತ್ತಾ ಇದೆ. ನಾವು ಸೃಷ್ಟಿ ಮಾಡುತ್ತಾ ಇರುವುದು ಕೇವಲ ಕಾರಕೂನರನ್ನು ಮಾತ್ರ, ನಮ್ಮ ಪರೀಕ್ಷಾಪದ್ಧತಿಯೂ ಇದೇ ಆಗಿದೆ. ಪಾಶ್ಚಿಮಾತ್ಯ ದೇಶದಲ್ಲಿ 8 ದಿನಕ್ಕೊಂದು ಟೆಸ್ಟ್ ಮಾಡಿ ಅಂಕಗಳನ್ನು ಇಟ್ಟು ಪರಿಕ್ಷೇ ಮಾಡತಕ್ಕ ಪದ್ಧತಿ ಅಲ್ಲಿದೆ. ಆದರೆ ನಮ್ಮಲ್ಲಿ ವರ್ಷಕ್ಕೊಂದು ಸಾರಿ ಪರೀಕ್ಷೆ ಮಾಡಿ ಆ ಒಂದು ಪರೀಕ್ಷೆಯಲ್ಲಿ ಪರ್ಮ್ಯುಟೇಷನ್, ಕಾಂಬಿನೇಷನ್ ಪ್ರಶ್ನೆ ಕೇಳಿದರೆ ಯಾವ ವಿದ್ಯಾರ್ಥಿಯೂ ಚೆನ್ನಾಗಿ ಉತ್ತರ ಹೇಳಬಲ್ಲ, ಏಕೆಂದರೆ, 10 ವರ್ಷದ ಪ್ರಶ್ನೆ ಪತ್ರಿಕೆ ಇಟ್ಟುಕೊಂಡರೆ ಸಾಕು. ಇದಕ್ಕಾಗಿ ಇವರು ಈ ಇಡೀ ವರ್ಷವೆಲ್ಲಾ ಓದಬೇಕಾಗಿಲ್ಲ, 65ನೇ ವರ್ಷದಿಂದ ಹಿಡಿದು 73ನೇ ಇಸವಿಯವರೆಗೆ ಆದ ಪ್ರಶ್ನೆ ಪತ್ರಿಕೆಗಳನ್ನು ತೆಗೆದುಕೊಂಡು ಮುಖ್ಯವಾದ ಪ್ರಶ್ನೆಗಳನ್ನು ಆರಿಸಿ ಅವುಗಳಿಗೆ 15 ದಿವಸದಲ್ಲಿ ಓದಿ ಪಾಸ್ ಮಾಡುತ್ತಾನೆ. ಪಾಸ್ ಆದಮೇಲೆ ಬಿ.ಎ, ಎಂ.ಎ, ಪಿಎಚ್.ಡಿ, ಇಟ್ಟಿರತಕ್ಕ ಪುಸ್ತಕಗಳಲ್ಲಿ ಯಾವ ವಿಷಯ ಇದೆ ಎಂದು ಕೇಳಿದರೆ ಅವನಿಗೆ ಏನೂ ಗೊತ್ತಿರುವುದಿಲ್ಲ. ಇದು ಕೇವಲ ಉದರ ನಿರ್ವಹಣೆಗೆ ಕೇವಲ ಒಂದು

ಸಂಸಾರದ ಆಗುಹೋಗುಗಳನ್ನು ನೋಡಿಕೊಳ್ಳುವುದಕ್ಕೆ ಕೊಟ್ಟ ಒಂದು ವಿದ್ಯಾಭ್ಯಾಸದ ಕ್ರಮವು ನಮ್ಮಲ್ಲಿ ಬಂದಿದೆ. ಇದು ನಿಜವಾಗಿಯೂ ಶೋಚನೀಯ ಪರಿಸ್ಥಿತಿ. ಸುರಿಯುವ ಕಣ್ಣೀರು ಒರಸಲಿಕ್ಕೆ ಕರ್ಚೀಫ್ ಕೊಡಬೇಕೇ? ವಿದ್ಯಾರ್ಥಿಯ ಅಭಿರುಚಿಗೆ ತಕ್ಕ ವಿದ್ಯೆಯನ್ನು ಒದಗಿಸುವುದರಲ್ಲಿ ನಾವು ವಿಫಲರಾಗಿದ್ದೇವೆ. ಇದಕ್ಕಾಗಿ ನಾವು ಯೇನು ರಾಢಿಮೂಲವಾದ ತತ್ವವನ್ನು ಹಾಕಿ ಕೊಂಡಿದ್ದೇವೆಯೋ ಅವನ್ನು ನಮ್ಮ ವಿದ್ಯಾಭ್ಯಾಸದ ಪಠ್ಯ ಪುಸ್ತಕಗಳಲ್ಲಿ ಅಳವಡಿಸದೆ ಹೋದರೆ ನವ ಸಮಾಜವನ್ನು ಜಾತ್ಯಾತೀತ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ ಆಗದಂತಾಗಿ ಹೋಗಬಹುದು. ಯಾವುದೋ ಒಂದು ಕಾಲದಲ್ಲಿ ಸೃಷ್ಟಿಯಾಗಿದ್ದ ಗ್ರಂಥವನ್ನು ಇವತ್ತು ನಾವು ಮಕ್ಕಳಿಗೆ ಇಡಬೇಕು ಎಂದು ಹೇಳುವಂಥ ಉದಾಹರಣೆಗಳು ಇವೆ. ಹಳೆಯದು ಮಹತ್ವದ್ದಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಹೊಸ ಹೊಸ ದಾಗಿ ನೀರಿನೋಪಾದಿಯಲ್ಲಿ ಹರಿಯತಕ್ಕ ವಿಚಾರ ಧಾರೆಗೆ ಇಷ್ಟೊಂದು ದುಡ್ಡು ಕೊಡಬೇಕೇ ಹೊರತು, ಈಗಿನ ವಿದ್ಯಾಭ್ಯಾಸದ ಕ್ರಮಕ್ಕೆ ಇಷ್ಟೊಂದು ದುಡ್ಡನ್ನು ಖರ್ಚು ಮಾಡು ವುದು ಸರಿಯಲ್ಲ. ಸಮಾಜವಾದದ ಸಮಾಜವನ್ನು ನಿರ್ಮಾಣ ಮಾಡತಕ್ಕ ತತ್ವವನ್ನು ವಿದ್ಯಾರ್ಥಿ ಗಳಿಗೆ ಕೊಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಬಹುತೇಕ ಜನ ಈ ಒಂದು ಸಿದ್ಧಾಂತಗಳನ್ನು ಒಪ್ಪಿಕೊಂಡಾಗ ಆ ಸಿದ್ಧಾಂತಕ್ಕೆ ಸಹಾಯ ಮಾಡತಕ್ಕಂಥ ಒಂದು ಸನ್ನಿವೇಶವನ್ನು ನಾವು ಸೃಷ್ಟಿ ಮಾಡಿದಾಗ, ವಿದ್ಯಾಭ್ಯಾಸದಲ್ಲಿ ರೂಢಮೂಲವಾದ ಬದಲಾವಣೆಯಾಗಬೇಕಾಗುತ್ತದೆ. ಒಂದು ಒಳ್ಳೆಯ ಸಂಸ್ಕೃತಿಯನ್ನು ವಿದ್ಯಾರ್ಥಿಗಳ ತಲೆಯಲ್ಲಿ ತುಂಬಿದರೆ ಮಾತ್ರ ನವ ಸಮಾಜ ನಿರ್ಮಾಣದ ಮಾತು ನನಸಾಗಲಿಕ್ಕೆ ಸಾಧ್ಯ, ಇಲ್ಲವಾದರೆ ನಮ್ಮ ಕನಸು ನನಸಾಗಲಾರದು ಎಂದು ನಾನು ಹೇಳುತ್ತೇನೆ. ತತ್ವದಲ್ಲಿ ಒಳ್ಳೆಯದೂ ಇರುತ್ತದೆ, ಕೆಟ್ಟದ್ದೂ ಇರುತ್ತದೆ, ಕೆಟ್ಟ ಕೆಲಸವನ್ನು ಮಾಡತಕ್ಕದ್ದು ಒಳ್ಳೆಯದನ್ನು ಹೇಳುವುದಾದರೆ ಅದು ಮೂರ್ಖತನವಾಗುತ್ತದೆ. ಒಳ್ಳೆಯದನ್ನು ನಾವು ತೆಗೆದುಕೊಂಡು ಕೆಟ್ಟ ದ್ದನ್ನು ಬಿಡಬೇಕಾಗುತ್ತದೆ. ತತ್ವಗಳಲ್ಲಿ ಯಾವುದೂ ಒಳ್ಳೆಯದು ಇದೆ ಅದು ನಮ್ಮ ವಿದ್ಯಾಭ್ಯಾಸದ ಕ್ರಮದಲ್ಲಿ ಅಳವಡಿಸಿಕೊಂಡು ಒಂದು ಕ್ರಮವನ್ನು ಸೃಷ್ಟಿ ಮಾಡಬೇಕು ಎನ್ನುವ ಒಂದು ನನ್ನ ಅಭಿಪ್ರಾಯ ಇದೆ. ಇವತ್ತು ಹೆಚ್ಚು ವೃತ್ತಿ ಶಿಕ್ಷಣಕ್ಕೆ ಗಮನಕೊಡದೆ ಕೇವಲ ಬರೀ ಡಿಗ್ರಿ ಗಳನ್ನು ಕೊಡತಕ್ಕ ವಿದ್ಯಾಭ್ಯಾಸ ಕ್ರಮವನ್ನು ನಾವು ಕೊನೆಗಾಣಿಸಲೇಬೇಕು. ಯಾವುದರಲ್ಲಿ ವಿದ್ಯಾರ್ಥಿಗಳಿಗೆ ಅಭಿರುಚಿ ಇದೆ ಅಂಥ ವಿದ್ಯಾಭ್ಯಾಸವನ್ನು ಕೊಟ್ಟು ಅವರನ್ನು ತಮ್ಮ ಕಾಲ ಮೇಲೆ ನಿಂತು ಜೀವನ ನಡೆಸತಕ್ಕ ವ್ಯವಸ್ಥೆ ಮಾಡಬೇಕು.

ಇನ್ನು ಈ ಟ್ರಾನ್ಸ್‌ಫರ್ಸ್ ಬಗ್ಗೆ, ನನ್ನ ಸ್ವಂತ ಅನುಭವದ ಮಾತನ್ನು ಹೇಳುತ್ತೇನೆ. ಶಿವಮೊಗ್ಗ ತಾಲ್ಲೂಕಿನಲ್ಲಿ ಹಾರನಹಳ್ಳಿ ಒಂದು ಊರು. ಆ ಊರಲ್ಲಿ ಒಬ್ಬ ಹುಡುಗಿ ಕೆಲಸಕ್ಕೆ ಸೇರಿ ಕೊಂಡಿದ್ದಾಳೆ, ಅವಳು ಲಗ್ನವನ್ನು ಮಾಡಿಕೊಂಡಿದ್ದಾಳೆ; ಬೆಂಗಳೂರಿನಲ್ಲಿ ಗಂಡ ಇದ್ದಾನೆ. ಇಡೀ ಎಂಟು ವರ್ಷ ಗಂಡ ಬೇರೆ ಹೆಂಡತಿ ಬೇರೆ ಕಡೆ ಇದ್ದಾರೆ. ಇವನಿಗೆ ಬರುವ ಸಂಬಳದಲ್ಲಿ ಹೆಂಡತಿಯನ್ನು ತಿಂಗಳಿಗೆ ಒಂದು ಸಾರಿ ನೋಡುವುದಕ್ಕಾಗುವುದಿಲ್ಲ. ಇದಕ್ಕೆ ಸರಿಯಾದ ಒಂದು ಪಾಲಿಸಿಯನ್ನು ನಾವು ಹಾಕಿಕೊಳ್ಳಬೇಕಾಗಿದೆ. ಇಂಥ ದೋಷಗಳನ್ನು ನಾವು ಆದಷ್ಟು ಕಡಿಮೆ ಮಾಡಬೇಕಾಗಿದೆ. ಈ ದೃಷ್ಟಿಯಿಟ್ಟುಕೊಂಡು, ಇವತ್ತು ಉಪಾಧ್ಯಾಯರಿಗೆ ಪ್ರತಿಯೊಂದು ತಾಲ್ಲೂಕುಗಳಲ್ಲಿ, ಅವರಿಗೆ ಮನೆಯ ಸೌಕರ್ಯಗಳನ್ನು ಕಲ್ಪಿಸಬೇಕು. ಈಗ ಏನಾಗಿದೆ ಎಂದರೆ, ಮನೆಗಳಿಲ್ಲದಿರುವ ಊರುಗಳಲ್ಲಿ ಇವರು, ಆ ಊರಿನ ಶಾನುಭೋಗರ ಅಥವಾ ಶ್ರೀಮಂತರ ಮನೆ ಗಳಲ್ಲಿ ಎರಡು ಹೊತ್ತಿನ ಅಶನ ಮಾಡಿಕೊಂಡ ಅವರು ಮಕ್ಕಳಿಗೆ ಪಾಠ ಹೇಳಿಕೊಡಬೇಕು. ಅವರ ಮಗ ಶುದ್ಧ ಶುಂಠಿಯಾದರೂ ಚಿಂತೆಯಿಲ್ಲ ಅವನಿಗೆ ಅಂಕಗಳನ್ನು ಹಾಕಿ ಅವನನ್ನು ಪಾಸ್ ಮಾಡ ಬೇಕು, ಇಲ್ಲದಿದ್ದರೆ, ಈ ಉಪಾಧ್ಯಾಯರಿಗೆ ಅಶನ ಇಲ್ಲ, ವಸನ ಇಲ್ಲ. ಇಂಥ ಉಪಾಧ್ಯಾಯರಿಂದ ನಾವು ಸರಿಯಾದ ರೀತಿ ವಿದ್ಯಾಭ್ಯಾಸವನ್ನು ಹುಡುಗರಿಗೆ ಕೊಡಲಿಕ್ಕೆ ಸಾಧ್ಯವೇ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ.

ಇನ್ನೊಂದು ವಿಷಯ ಆಯಾಯ ತಾಲ್ಲೋಕಿನಲ್ಲಿ ಆಯಾಯ ತಾಲ್ಲೋಕಿನ ಉಪಾಧ್ಯಾಯರು ಇಟ್ಟಿರುತ್ತಾರೆ. ಇದು ಎಷ್ಟೋ ಕಡೆ ನಡೆದಿದೆ. ಉಪಾಧ್ಯಾಯರಿಗೆ ಮಕ್ಕಳಿಗೆ ವಿದ್ಯಾಭ್ಯಾಸ ಹೇಳಿಕೊಡುವ ಕೆಲಸ ಎಂದರೆ ಅಡ್ಡಿಯಿಲ್ಲ; ಅದು ಬಿಟ್ಟು ಯಾವಾಗಲೂ ಅವರು ಊರಿನಲ್ಲಿರುವ ಎಲ್ಲಾ ರಾಜಕೀಯಕ್ಕೂ ಪ್ರವೇಶ ಮಾಡುವುದು ಮತ್ತು ಗಂಡಹೆಂಡಿರ ಜಗಳದಲ್ಲೂ ಪ್ರವೇಶ ಮಾಡುವುದೂ ಈ ತರಹ ಪ್ರವೃತ್ತಿ ಇಟ್ಟುಕೊಂಡು ಎಷ್ಟೋ ದಿವಸ ಸ್ಕೂಲು ಬಾಗಿಲು ಹಾಕಿರು ತ್ತಾರೆ, ಈ ರೀತಿಯಾಗಿ ಉಪಾಧ್ಯಾಯರು ಹಳ್ಳಿಯ ರಾಜಕೀಯದಲ್ಲಿ ತೊಡಗಿರುವುದರಿಂದ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ, ನಿನ್ನೆ ದಿವಸ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು

(ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್)

ಸಿರಿಗೆರೆ ವಿದ್ಯಾ ಸಂಸ್ಥೆಯ ಮೇಲೆ ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಅವರು ಹಾಗೆ ಹೇಳುವುದು ಸಹಜ. ಏತಕ್ಕೆಂದರೆ ಸಿರಿಗೆರೆ ಸ್ವಾಮಿಗಳು ಇವೊತ್ತು ಇಂದಿರಾಗಾಂಧಿ ಪಕ್ಷದ ಬಗ್ಗೆ ಅಭಿಮಾನ ಇಟ್ಟುಕೊಂಡಿರತಕ್ಕ ಸ್ವಾಮಿಗಳು ಆಗಿದ್ದಾರೆ. ಅದಕ್ಕಾಗಿ ಕೊಣಂದೂರು ಲಿಂಗಪ್ಪ ನವರಿಗೆ ಈ ಅಭಿಪ್ರಾಯ ಬರುವುದು ಸಹಜವಾಗಿದೆ. ಆದರೆ ಒಬ್ಬರು ಸ್ವಾಮಿಗಳ ಮೇಲೆ ಅವರು ಈ ಸದನದಲ್ಲಿ ಏನು ಟೀಕೆ ಮಾಡಿದ್ದಾರೆ ಅದು ಸಲ್ಲದ ಮಾತು, ಅವರು ಸಿರಿಗೆರೆಗೆ ಹೋಗಿ ನೋಡ ಬೇಕು ಮೊಟ್ಟಮೊದಲನೆಯದಾಗಿ.........

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರು ಈ ರೀತಿ ಮಾತನಾಡುವುದು ಸೂಕ್ತವಾದುದು ಅಲ್ಲ.

ಉಪಾಧ್ಯಕ್ಷರು.—ತಾವು ಮಧ್ಯೆ ಮಾತನಾಡಬೇಕಾದರೆ ಅವರು ಒಪ್ಪಿಕೊಳ್ಳಬೇಕು. ಅವರು ಒಪ್ಪದಿದ್ದರೆ ತಾವು ಈ ತರಹ ಮಧ್ಯೆ ಮಾತನಾಡುವುದು ಸರಿಯಲ್ಲ, ಪಾಯಿಂಟ್ ಆಫ್ ಆರ್ಡರ್ ಇದ್ದರೆ ಅದು ಬೇರೆ ಪ್ರಶ್ನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಒಬ್ಬ ಸ್ವಾಮಿಗಳು ಸರ್ವ ಪಕ್ಷಕ್ಕೂ ಸೇರಿದಂತಹ ವ್ಯಕ್ತಿ. ಇಂದಿರಾಗಾಂಧಿಯವರ ಕಾಂಗ್ರೆಸ್ ಪಕ್ಷದ ಕಡೆಗೆ ಸೇರಿದ್ದಾರೆ ಎಂದು ಈ ಸಭೆಯಲ್ಲಿ ಹೇಳುವುದು ಅಪ್ರಕೃತ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ಇಂದಿರಾಗಾಂಧಿಯವರ ಪಕ್ಷಕ್ಕೆ ಸೇರಿಕೊಂಡಿದ್ದಾರೆ ಎಂದು ಹೇಳಲಿಲ್ಲ. ಅವರಿಗೆ ವಯಸ್ಸಾಯಿತು ನಾನು ಏನು ಮಾಡಲಿ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸಭಾಧ್ಯಕ್ಷರೆ, ತಾವು ಒಂದು ಪಕ್ಷಕ್ಕೆ ಸೇರಿದ ವ್ಯಕ್ತಿ ಎಂದು ತಮಗೆ ಹೇಳಿದರೆ ತಮಗೆ ಎಷ್ಟು ನೋವಾಗುತ್ತದೆ ? ಸ್ವಾಮಿಗಳು ಒಂದು ಪಕ್ಷಕ್ಕೆ ಸೇರಿದವರು ಎಂದು ಹೇಳಿದಾಗ ಎಷ್ಟು ನೋವಾಗುತ್ತದೆ. ಅವರು ಎಲ್ಲಾ ಪಕ್ಷಕ್ಕೆ ಸೇರಿದಂತಹ ಸ್ವತ್ತು ಎಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ಯಾವ ಕಾಲದಲ್ಲಿ ಕೂಡ ಇಂದಿರಾ ಗಾಂಧಿ ಪಕ್ಷಕ್ಕೆ ಸೇರಿದ್ದಾರೆ ಎಂದು ಹೇಳಲಿಲ್ಲ. ಇಂದಿರಾಗಾಂಧಿಯವರ ಮೇಲೆ ಗೌರವ ಇರುವ ವರು ಎಂದು ಹೇಳಿದರೆ ಅದಕ್ಕೆ ಅವರು ಕುಪಿತರಾಗಿದ್ದಾರೆ, ಕೋಣಂದೂರು ಲಿಂಗಪ್ಪನವರು ತಿಳಿದುಕೊಳ್ಳಬೇಕು, ಸಿರಿಗೆರೆ ಸಂಸ್ಥೆ ಮಾಡಿರುವ ಸೇವೆ ಕರ್ನಾಟಕದಲ್ಲಿ ಎಲ್ಲಿಯೂ ಮಾಡಿರುವ ಹಾಗಿಲ್ಲ. ಮೊಟ್ಟಮೊದಲನೆಯದಾಗಿ ಅಸ್ಪೃಶ್ಯರನ್ನು ಶಾಲೆಗೆ ಸೇರಿಸಿಕೊಂಡು ವಿದ್ಯಾದಾನ ಮಾಡಿದ ಸಂಸ್ಥೆ ಅದು. ಈ ಸಂಸ್ಥೆ ಬಗ್ಗೆ ಅಷ್ಟು ಮಾತು ಆಡಬಾರದು ಎಂದು ಹೇಳಿದೆ ಅಷ್ಟೆ. ಇಷ್ಟು ಹೇಳಿ ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾಸಚಿವರು ಮಂಡಿಸಿರತಕ್ಕ 67 ಕೋಟಿ ರೂಪಾಯಿಗಳ ಬೇಡಿಕೆಯನ್ನು ನಾನು ಅನಿವಾರ್ಯವಾಗಿ ವಿರೋಧಿಸ ಬೇಕಾಗಿದೆ. ಕಾರಣವಾದರೂ ಇಷ್ಟೆ. ಈ ಬೇಡಿಕೆ ಬೇರೆ ಬೇಡಿಕೆಗಳಿಗಿಂತ ಹೆಚ್ಚಿನದು ಅದರೂ ಕೂಡ ವಿದ್ಯಾಭ್ಯಾಸದ ಬಗ್ಗೆ ಸಾಕಷ್ಟು ಹೆಚ್ಚಿನ ಪ್ರಗತಿಯನ್ನು ತೋರಿಸದೆ ಇದ್ದ ಕಾರಣ ವಿರೋಧಿಸ ಬೇಕಾಗಿದೆ. ನಾನು ಮೊದಲನೇ ಬಾರಿಗೆ 1967ರಲ್ಲಿ ಈ ಮಾನ್ಯ ಸಭೆಗೆ ಸದಸ್ಯನಾಗಿ ಬಂದಾಗ ಇದ್ದ 33 ಕೋಟಿ ರೂಪಾಯಿನ ಈ ಬೇಡಿಕೆ 6 ವರ್ಷಗಳಲ್ಲಿ 67 ಕೋಟಿ ರೂಪಾಯಿಗಳಿಗೆ ಏರಿದೆ. ಎಂದರೆ ಸುಮಾರು 2ರಷ್ಟು ಈ 6 ವರ್ಷಗಳಲ್ಲಿ ಏರಿದೆ. ಆದರೂ ಕೂಡ ಅನೇಕ ಸಮಸ್ಯೆಗಳು ಇನ್ನು ಬಗೆಹರಿಯದೆ ಇರತಕ್ಕದ್ದು ಶೋಚನೀಯವಾದ ವಿಚಾರ. ವಿದ್ಯಾ ಸಂಸ್ಥೆಗಳು ಹೆಚ್ಚಿಗೆ ಬೆಳೆಯುತ್ತಾ ಇವೆ. ಆದರೆ ವಿದ್ಯಾಭ್ಯಾಸದ ಗುಣಮಟ್ಟ ಕುಸಿಯುತ್ತಾ ಇದೆ, ಹೆಚ್ಚು ಪ್ರಗತಿ ಯಾಗುತ್ತಿಲ್ಲ ಎನ್ನುವುದು ಶೋಚನೀಯವಾದ ವಿಚಾರ. ಒಳ್ಳೆಯ ವಿದ್ಯಾವಂತರನ್ನಾಗಿ ಮಾಡತಕ್ಕ ವಿದ್ಯಾಭ್ಯಾಸ ಆಗಬೇಕೇ ಹೊರತು ಅದು ಕೇವಲ ಸಂಪಾದನೆಯ ಮಾರ್ಗ ಆಗಕೂಡದು ಎನ್ನುವುದು ನನ್ನ ಮುಖ್ಯವಾದ. ವಿದ್ಯಾಭ್ಯಾಸದ ಖಾತೆಗೆ ಸಂಬಂಧಪಟ್ಟಹಾಗೆ ಮುಖ್ಯವಾಗಿ ನಮ್ಮ ಮುಂದೆ ಇರುವ ಸಮಸ್ಯೆಗಳು ಕೆಲವು ಇವೆ. ಮೊದಲನೆಯದು ವಿದ್ಯಾಭ್ಯಾಸದ ಮಟ್ಟ ದಿನೇ ದಿನೇ ಕಡಿಮೆಯಾಗುತ್ತಿದೆ, ಅದರ ಬಗ್ಗೆ ನಾವು ಏನು ಮಾಡಬೇಕು ಎನ್ನುವುದು. ಅದರ ಬಗ್ಗೆ ನಾಳೆ ನನ್ನದು ಒಂದು ಖಾಸಗಿ ನಿರ್ಣಯವಿರುವುದರಿಂದ ಏನು ಹೇಳಬೇಕಾಗಿ ದೆಯೋ ಅದನ್ನು ಆಗ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ ಖಾಸಗಿ

ಶಾಲೆಗಳು ಪೋಷಕರನ್ನು ಶೋಷಣೆ ಮಾಡುತ್ತಾ ಇವೆ. ಅನೇಕ ಖಾಸಗಿ ಶಾಲೆಗಳು ಸರಿಯಾದಂಥ ರೀತಿಯಲ್ಲಿ ಕೆಲಸಮಾಡದೆ ಇರತಕ್ಕದ್ದು ಸಮಾಜಕ್ಕೆ ಗೊತ್ತಾಗುತ್ತದೆ. ಕೆಲವು ಶಾಲೆಗಳಲ್ಲಿ ಏನು ಕೆಟ್ಟ ಪ್ರವೃತ್ತಿಗಳು ಇವೆ ಅವನ್ನು ತಡೆಗಟ್ಟಬೇಕು. ಮೂರನೆಯದಾಗಿ ವಿದ್ಯಾರ್ಥಿಗಳಲ್ಲಿ ಸಾಕಾದಷ್ಟು ಶಿಸ್ತು ಇಲ್ಲದೆ ಒಂದು ಅಶಾಂತಿ ಎಲ್ಲಿ ನೋಡಿದರೂ ಕಾಣುತ್ತದೆ. ಅಶಾಂತಿಯನ್ನು ತಡೆಗಟ್ಟುವುದಕ್ಕೆ ಏನು ಮಾಡಬೇಕು ಎಂದು ಯೋಚನೆಮಾಡಬೇಕು. ನಾಲ್ಕನೇಯದಾಗಿ ಯಾವ ಶಾಲೆಗಳಿಗೆ ಸಾಕಾದಷ್ಟು ಜಾಗಗಳಿಲ್ಲ, ಆ ಶಾಲೆಗಳಿಗೆ ಜಾಗವನ್ನು ಒದಗಿಸಬೇಕು. ಅದಕ್ಕೆ ನಾವು ಏನು ಮಾಡಬೇಕು ಎನ್ನುವ ಬಗ್ಗೆ ಒಂದು ಯೋಜನೆ ಹಾಕಬೇಕು. ವಿದ್ಯಾಭ್ಯಾಸಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾ ಇದ್ದೇವೆ, ಲಕ್ಷಾಂತರ ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಾ ಇದ್ದಾರೆ. ಅವರ ಸಂಖ್ಯೆ ಹೆಚ್ಚುತ್ತಿದ್ದ ಹಾಗೆ ಅನೆಂಪ್ಲಾಯ್‌ಮೆಂಟ್ ಅಂದರೆ ನಿರುದ್ಯೋಗ ಸಮಸ್ಯೆಯೂ ಕೂಡ ಬೆಳೆಯುತ್ತಾ ಇದೆ, ಇದರ ಬಗ್ಗೆ ಏನು ಮಾಡಬೇಕು ಎನ್ನುವ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಹೀಗೆ ಒಂದೊಂದಾಗಿ ಅಂಶಗಳನ್ನು ತಗೆದುಕೊಂಡರೆ ಮೊದಲನೆಯದಾಗಿ ಈಗಾಗಲೇ ಹೇಳಿದಹಾಗೆ ವಿದ್ಯಾಭ್ಯಾಸದ ಮಟ್ಟ ಕಡಿಮೆಯಾಗುತ್ತಾ ಇರುವುದರ ಬಗ್ಗೆ ಅವಕಾಶ ಸಿಕ್ಕಿದರೆ ನಾಳೆ ಮಾತನಾಡುತ್ತೇನೆ. ಎರಡನೆಯದಾಗಿ ಖಾಸಗಿ ವಿದ್ಯಾಶಾಲೆಗಳ ಬಗ್ಗೆ ನಾನು ಒಂದು ಸಲಹೆ ಕೊಡುತ್ತೇನೆ. ಖಾಸಗಿ ವಿದ್ಯಾಶಾಲೆಗಳು ರಾಜ್ಯದ ಒಳ್ಳೆಯ ವಿದ್ಯಾರ್ಥಿಗಳನ್ನು ತಯಾರು ಮಾಡುವ ಕಾರ್ಯದಲ್ಲಿ ಹೆಚ್ಚಿನ ಪಾತ್ರವನ್ನು ವಹಿಸುತ್ತಿದ್ದಾರೆ. ಶೇಕಡ 50ಕ್ಕೂ ಮಿಗಿಲಾಗಿ ವಿದ್ಯಾಭ್ಯಾಸ ನಡೆಸತಕ್ಕ ವಿದ್ಯಾರ್ಥಿಗಳಿಗೆ ವಿದ್ಯೆ ಕೊಡತಕ್ಕದ್ದು ಖಾಸಗಿ ಸಂಸ್ಥೆಗಳು. ಈ ಖಾಸಗಿ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದನ್ನು ಯಾರು ತನಿಖೆ ಮಾಡುತ್ತಾ ಇದ್ದೀರಿ ? ಆ ಶಾಲೆಗಳಲ್ಲಿ ಉಪಾಧ್ಯಾಯರಿಗೆ ಕೊಡತಕ್ಕ ಸಂಬಳ ಒಂದು, ಅವರಕೈಯಲ್ಲಿ ಬರೆಸಿಕೊಳ್ಳತಕ್ಕ ಸಂಬಳ ಒಂದು. ಎರಡನೆಯದು ಲೆಕ್ಕಪತ್ರಗಳನ್ನು ಸರಿಯಾಗಿ ಇಡದೆ ಅನೇಕ ಶಾಲೆಗಳು ವ್ಯಾಪಾರ ಸಂಸ್ಥೆಗಳಾಗಿ, ಅದರ ಪ್ರಯೋಜನವನ್ನು ವ್ಯಾಪಾರ ದೃಷ್ಟಿಯಿಂದ ಪಡೆಯುತ್ತಿದ್ದಾರೆ. ಮಕ್ಕಳಿಗೆ ಅದರಿಂದ ಅನುಕೂಲವಾಗುತ್ತಾ ಇಲ್ಲ. ಅನೇಕರು ಪೋಷಕ ವರ್ಗದವರನ್ನು ಶೋಷಣೆ ಮಾಡುತ್ತಾ ಇದ್ದಾರೆ. ಅವರು ಆರ್ಥಿಕವಾಗಿ ಲಾಭಗಳಿಸಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುಕೊಳ್ಳುತ್ತಾ ಇದ್ದಾರೆ. ಈ ಶೋಷಣೆಯನ್ನು ಯಾವರೀತಿ ತಪ್ಪಿಸಬೇಕು ಎಂದು ಯೋಚನೆ ಮಾಡಬೇಕು. ಅನೇಕ ಶಾಲೆಗಳಲ್ಲಿ ತಪ್ಪು ಲೆಕ್ಕ ಇಟ್ಟು ಸರಿಯಾದ ಅಟೆಂಡೆನ್ಸ್ ಇಡದೆ ಒಂದು ಕಡೆ ತಂದೆತಾಯಿಗಳಿಗೆ ಮತ್ತೊಂದುಕಡೆ ಸರ್ಕಾರಕ್ಕೆ ದ್ರೋಹ ಮಾಡುತ್ತಾ ಇದ್ದಾರೆ ಎಂದು ಹೇಳುತ್ತಿದ್ದೇನೆ. ಹಾಗೆ ಆಗುತ್ತಿಲ್ಲ ಎಂದು ನಾನು ಹೇಳುವುದಿಲ್ಲ. ಕೆಲವು ಖಾಸಗೀ ಶಾಲೆಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ. ಈಗ ಏನಾಗಿದೆ ಎಂದರೆ ಸರಿಯಾದ ರೀತಿಯಲ್ಲಿ ಕೆಲಸ ಮಾಡದೇ ಇರತಕ್ಕಂಥ ಶಾಲೆಗಳೂ ಕೂಡ ಸರಿಯಾಗಿ ಕೆಲಸ ಮಾಡತಕ್ಕಂಥ ಶಾಲೆಗಳ ಜೊತೆಗೆ ಸೇರಿಕೊಂಡಿದೆ. ಆದುದರಿಂದ ಇದಕ್ಕೆ ಒಂದು ಕ್ರಮ ಅನುಸರಿಸಬೇಕಾಗಿದೆ ಎಂದು ಹೇಳುತ್ತೇನೆ. ಅದಕ್ಕೆ ನನ್ನ ಸಲಹೆಯಾದರೂ ಇಷ್ಟೆ. ಖಾಸಗೀ ಶಾಲೆಗಳನ್ನು ಸರಿಪಡಿಸ ಬೇಕಾಗಿದ್ದ ಪಕ್ಷದಲ್ಲಿ ಸರ್ಕಾರ ನಡೆಸತಕ್ಕಂಥ ಶಾಲೆಗಳಲ್ಲಿ ಶೈಕ್ಷಣಿಕ ಮಟ್ಟ ಮತ್ತು ತರಬೇತಿ ಕೊಡತಕ್ಕಂಥ ಪದ್ಧತಿ ಬದಲಾವಣೆಯಾಗಬೇಕು. ಅದು ಯಾವ ರೀತಿ ಎಂದರೆ ಸರ್ಕಾರಿ ಶಾಲೆಗಳಲ್ಲಿ ಕೊಡುತ್ತಿರುವ ಶಿಕ್ಷಣ ಯಾವ ಶಾಲೆಗಳಿಗೂ ಕಡಿಮೆ ಇಲ್ಲ ಎನ್ನುವ ಮಟ್ಟಕ್ಕೆ ಬಂದರೆ ಆವಾಗ ಖಾಸಗಿಯವರು ನಡೆಸತಕ್ಕಂಥ ಶಾಲೆಗಳನ್ನು ಹತೋಟಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಅನೇಕ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಮಟ್ಟ ಕಡಿಮೆ ಇರುವುದರಿಂದ ಅನೇಕರು ಖಾಸಗೀ ಶಾಲೆಗಳಿಗೆ ಕಳುಹಿಸಲು ಪ್ರಯತ್ನ ಮಾಡುತ್ತಾರೆ. ಇದರಿಂದ ಸರ್ಕಾರಿ ಶಾಲೆಗಳನ್ನು ಹತೋಟಿಗೆ ತರಲು ಕಷ್ಟವಾಗುತ್ತದೆ. ಇದನ್ನು ಉಳಿಸಿಕೊಳ್ಳಬೇಕಾದರೆ ಈಗ ಈ ವಿದ್ಯಾಕ್ಷೇತ್ರಕ್ಕೆ ಸರ್ಕಾರದವರು 67 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡುತ್ತಾರೋ ಅದರ ಜೊತೆಗೆ ಇನ್ನೂ 7–8 ಕೋಟಿ ರೂಪಾಯಿಗಳು ಹೆಚ್ಚು ಖರ್ಚಾದರೂ ಸರಿ ಎಲ್ಲಾ ಶಾಲೆಗಳನ್ನೂ ಸರ್ಕಾರವೇ ತೆಗೆದುಕೊಂಡು ನಡೆಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಮತ್ತು ಖಾಸಗೀ ಶಾಲೆಗಳಲ್ಲಿರುವ ಉಪಾಧ್ಯಾಯರನ್ನೂ ಕೂಡ ಒಂದು ಹತೋಟಿಗೆ ತರುವಂತೆ ಮಾಡಬೇಕು. ಈ ವಿಚಾರದಲ್ಲಿ ನಾನು ಕೊಡುವ ಸಲಹೆಯಾದರೂ ಇಷ್ಟೆ. ಇದನ್ನು ಎರಡು ವಿಂಗಡಣೆಯಾಗಿ ಮಾಡಬಹುದು. ಒಂದನೆಯದು ಯಾವ ಖಾಸಗೀ ಶಾಲೆಯವರು ಲಾಭದ ದೃಷ್ಟಿಯಿಂದ ಈ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ಇದನ್ನು ನಡೆಸುತ್ತಿದ್ದಾರೋ ಅಂಥಾ ಸ್ಕೂಲುಗಳನ್ನು ಒಂದು ಭಾಗ ಮಾಡಿ. ಇದರಲ್ಲಿ ಯಾವ ಸ್ಕೂಲುಗಳು ಲೆಕ್ಕಪತ್ರಗಳನ್ನು ಸರಿಯಾಗಿ ಇಟ್ಟು, ವಸೂಲುಮಾಡತಕ್ಕಂಥ ಫೀಸ್‌ಗೆ ಪ್ರತಿಯೊಂದು ಕಾಸಿಗೂ ಲೆಕ್ಕ ಇಟ್ಟು ಆ ದುಡ್ಡು ಆ ಶಾಲೆಯ

(ಶ್ರೀ ಟಿ. ಆರ್. ಶಾಮಣ್ಣ)

ಅಭಿವೃದ್ಧಿಗೆ ಆಗಲಿ ಅಥವಾ ಮಕ್ಕಳಿಗೆ ಖರ್ಚು ಮಾಡುವುದಾಗಲಿ ಇದ್ದರೆ ಅಂಥಾ ಶಾಲೆಗಳಿಗೆ ವಿನಾಯಿತಿ ಕೊಡಿ. ಅವರು ಅಲ್ಲಿರುವ ಬಡಮಕ್ಕಳಿಗೆ ಪುಸ್ತಕ ಸ್ಲೇಟು ವಗೈರೆಗಳನ್ನು ಹಂಚಬೇಕು. ಈ ರೀತಿ ಮಾಡಿದರೆ ಖರ್ಚು ಮಾಡಿದಂಥ ಹಣಕ್ಕೆ ಸರಿಯಾದಂಥ ಫಲ ಕೊಡಬಹುದು. ಎರಡನೇದು ಖಾಸಗಿ ಶಾಲೆಗಳನ್ನು ನಡೆಸತಕ್ಕಂಥಾವರು ಮತ್ತು ವಿದ್ಯಾಭ್ಯಾಸದಲ್ಲಿ ಪರಿಣತರಾಗಿರತಕ್ಕಂಥಾವರೊಂದಿಗೆ ಇದರ ಬಗ್ಗೆ ಚರ್ಚೆ ಮಾಡಿ ಈ ಸಮಸ್ಯೆಗೆ ಯಾವರೀತಿ ಪರಿಹಾರವನ್ನು ಕಂಡುಹಿಡಿಯಬೇಕು ಎನ್ನುವುದನ್ನು ಯೋಚನೆ ಮಾಡಿ.

ಇನ್ನು ಶಾಲೆಗಳಲ್ಲಿ ಶಿಸ್ತು ಹೆಚ್ಚಾಗಿದೆ. ಈ ಬಗ್ಗೆ ಅದನ್ನು ಹೋಗಲಾಡಿಸಲು ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಇನ್ನು ಶಾಲೆಗಳ ಸ್ಥಳಾವಕಾಶದ ಬಗ್ಗೆ ಹೇಳುವುದಾದರೆ ಅನೇಕ ಶಾಲೆಗಳಲ್ಲಿ ಸರಿಯಾದ ಸ್ಥಳಾವಕಾಶ ಇಲ್ಲ. ಆದುದರಿಂದ ಈ ಬಗ್ಗೆ ನಾನು ಸಲಹೆ ಕೊಡುವುದಾದರೆ ಯಾರು ಖಾಸಗೀ ಶಾಲೆಗಳನ್ನು ತೆರೆಯುತ್ತಾರೋ ಯಾವ ಕ್ಷೇತ್ರದಲ್ಲಿ ಶಾಲೆ ಆಗುತ್ತದೋ ಅಲ್ಲಿ ಅವರು ಹುಡುಗರಿಗೆ ಸರಿಯಾದ ಸ್ಥಳಾವಕಾಶ ಒದಗಿಸುವ ಜವಾಬ್ದಾರಿಯನ್ನು ಅವರೇ ವಹಿಸಿಕೊಳ್ಳಬೇಕು ಎಂದು ಮಾಡಿ ಮತ್ತು ಕಾರ್ಪೊರೇಷನ್ ಮತ್ತು ಲೋಕಲ್ ಬಾಡೀಸ್ ಇವುಗಳು ಆದರೆ ಅವರು ಕೂಡ ಅದಕ್ಕೆ ಸಹಕಾರ ಕೊಟ್ಟು ಆ ಕ್ಷೇತ್ರದಲ್ಲಿರುವ ಶಾಲೆಗಳಿಗೆ ಸರಿಯಾದ ಸ್ಥಳ ಒದಗಿಸಲು ಅದನ್ನು ಅವರ ಜವಾಬ್ದಾರಿಯನ್ನಾಗಿ ಮಾಡಿದರೆ ಆಗ ಸ್ಕೂಲುಗಳಿಗೆ ಬಿಲ್ಡಿಂಗ್ ಇಲ್ಲ, ರಿಪೇರಿ ಇಲ್ಲ ವಗೈರೆ ಏನೇನು ಹೇಳುತ್ತೀವೋ ಆ ಭಾರದ ಹೊರೆ ಸರ್ಕಾರಕ್ಕೆ ಕಡಿಮೆಯಾಗುತ್ತದೆ ಮತ್ತು ಸ್ಥಳದ ಕೊರತೆಯನ್ನೂ ಸಹ ತಪ್ಪಿಸುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ಬಗ್ಗೆ ಸರ್ಕಾರದವರು ಯೋಚನೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು Local assistance is very necessary for improving the accommodation in all parts of the State ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ವಿದ್ಯಾಭ್ಯಾಸದಲ್ಲಿರತಕ್ಕಂಥ ನ್ಯೂನತೆಗಳನ್ನು ತಡೆಗಟ್ಟುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ Education budget must be based on targeted system also. ಆದುದರಿಂದ ಮಾನ್ಯ ಮಂತ್ರಿಗಳು ಸಾಧ್ಯವಾದಷ್ಟು ಈ ವಿದ್ಯಾಭ್ಯಾಸದ ವಿಚಾರದಲ್ಲಿ ರಾಜಕೀಯ ಬೆಳೆಯದೇ ಇರುವಹಾಗೆ, ಅವರ ಪ್ರೆಷರ್ ಇಲ್ಲದೇ ಇರುವಹಾಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಇನ್ನು ಅತಿ ಮುಖ್ಯವಾದ ವಿಚಾರ ಯಾವುದು ಎಂದರೆ ಬೆಂಗಳೂರು ಯೂನಿವರ್ಸಿಟಿ ವಿಷಯ. ಈಗ ಅದು ಹೊಸ ಕ್ಯಾಂಪಸ್‌ಗೆ ಹೋಗಿದೆ. ಮತ್ತು ಅಲ್ಲಿಯ ಅಡ್ಮಿನಿಸ್ಟ್ರೇಷನ್ ಕೂಡ ಹೊಸದಾಗಿದೆ. ಆದುದರಿಂದ ಅದು ಚೆನ್ನಾಗಿ ಚೇತರಿಸಿಕೊಳ್ಳುವ ತನಕ ಸಾಕಾದಷ್ಟು ಹಣ ಸಹಾಯ ಮಾಡಬೇಕು. ಅವರಲ್ಲೂ ಕೂಡ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ನಡೆಸತಕ್ಕಂಥ ವೈಸ್ ಛಾನ್ಸಲರ್ ಬಹಳ ಶ್ರದ್ಧೆಯಿಂದ ಕೆಲಸ ಮಾಡತಕ್ಕಂಥಾವರಾಗಿರುವುದರಿಂದ ಈ ಸಂದರ್ಭದಲ್ಲಿ ಆ ಯೂನಿವರ್ಸಿಟಿಗೆ ಸಾಕಾದಷ್ಟು ಹಣ ಒದಗಿಸಿಕೊಡದೇ ಹೋದರೆ ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೆ ಸಹಾನುಭೂತಿ ಇದೆ ಎಂದು ತಿಳಿದುಕೊಂಡಿದ್ದೇನೆ. ಆದುದರಿಂದ ಮಾನ್ಯ ಮಂತ್ರಿಗಳು ಅದಕ್ಕೆ ಹೆಚ್ಚಿನ ಒಂದು ಸಹಾಯ ಮತ್ತು ಸಹಕಾರ ಕೊಟ್ಟು ಒಳ್ಳೆಯ ಯೂನಿವರ್ಸಿಟಿ ಆಗುವುದಕ್ಕೆ ಏನು ಬೇಕೋ ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎನ್ನುವ ಭರವಸೆ ನನಗೆ ಇದೆ.

ಇನ್ನು ಪ್ರಮೋಷನಲ್ ವೇಕೆನ್ಸೀಸ್ ಬಗ್ಗೆ ಹೇಳುತ್ತೇನೆ. Regarding filling up of vacancies. Promotional vacancies have not been filled up. They must be filled up soon.

ಇನ್ನು ಟೆಕ್ಸ್ಟ್ ಬುಕ್‌ಗಳ ವಿಚಾರ. ಈಗ ಇದರ ಬೆಲೆ ಜಾಸ್ತಿಯಾಗಿದೆ. ಇದನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ನಾರಾಯಣದಾಸ್ (ಹರಪನಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ, ಈ ದಿನ ವಿದ್ಯಾಮಂತ್ರಿಗಳು ಮಂಡಿಸಿರತಕ್ಕಂಥ ವಿದ್ಯಾ ಖಾತೆಯ 67 ಕೋಟಿ ಚಿಲ್ಲರೆ ರೂಪಾಯಿಗಳ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಹೇಳ

ಬಯಸುತ್ತೇನೆ. ನಮ್ಮ ದೇಶದಲ್ಲಿ ವಿದ್ಯೆಯು ನಿಜವಾಗಿಯೂ ಎಲ್ಲರಿಗೂ ಅವಶ್ಯಕವಾದುದ್ದಾಗಿದೆ. ಆದರೆ ವಿದ್ಯೆ ಇಲ್ಲದವನು ಹದ್ದಿಗಿಂತಲೂ ಕಡೆ ಎನ್ನುವ ನಾನ್ನುಡಿಯಂತೆ ಯಾವುದೇ ಒಂದು ದೇಶವು ಪ್ರಗತಿ ದಾರಿಯಲ್ಲಿ ಹೋಗಬೇಕಾದರೆ ವಿದ್ಯೆಯು ಅತ್ಯಾವಶ್ಯಕವಾಗಿದೆ. ಆದರೆ ಈ ಒಂದು ವಿಷಯದಲ್ಲಿ ವಿಶೇಷವಾಗಿ ಹೇಳಬೇಕಾದರೆ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಅನೇಕ ಅಡಚಣೆಗಳು ಇವೆ. ಅದು ಏನೆಂದರೆ ಪ್ರಾಥಮಿಕ ಉಪಾಧ್ಯಾಯರು ಅವರು ಹಳ್ಳಿಗಾಡಿನಲ್ಲಿ ಕೆಲಸವನ್ನು ಸರಿಯಾಗಿ ನಿರ್ವಹಿಸುವುದಿಲ್ಲ. ಕೆಲವು ಕಡೆ ಸಿಂಗಲ್ ಟೀಚರ್ಸ್ ಇದ್ದಂಥ ಕಡೆಗಳಲ್ಲಿ ತಿಂಗಳುಗಟ್ಟಲೆ ಆ ಶಾಲೆಯನ್ನು ಮುಚ್ಚಿಸಿ ಆ ಒಂದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲೇ ಇರುತ್ತಾರೆ. ಮತ್ತು ರಾಜಕೀಯದಲ್ಲಿ ಅನೇಕ ಉಪಾಧ್ಯಾಯರು ಭಾಗವಹಿಸುತ್ತಾರೆ. ಮತ್ತು ಒಬ್ಬರಿಗಿಂತ ಇಬ್ಬರು ಇರುವ ಕಡೆ ಅಂದರೆ ಡಬ್ಬಲ್ ಟೀಚರ್ಸ್ ಇರುವ ಕಡೆ ಕೆಲವು ಶಾಲೆಗಳಲ್ಲಿ ಅವರಲ್ಲೇ ಒಬ್ಬರಿಗೊಬ್ಬರು ಒಂದು ಅಂಡರ್‌ಸ್ಟ್ಯಾಂಡಿಂಗ್ ಮಾಡಿಕೊಂಡು ಹೆಸರಿಗೆ ಮಾತ್ರ ಒಂದು ಲೀವ್ ಲೆಟರ್ ಇನ್ನೊಬ್ಬ ಉಪಾಧ್ಯಾಯರ ಕೈಗೆ ಕೊಟ್ಟು ಹೋಗಿರುತ್ತಾರೆ. ಏತಕ್ಕೆಂದರೆ ಯಾರಾದರೂ ಇನ್‌ಸ್ಪೆಕ್ಷರ್‌ಗೆ ಬಂದರೆ ಲೀವ್ ಇದ್ದಾಳೆ ಎಂದು ಹೇಳುವುದಕ್ಕೆ ಈ ರೀತಿ ಮಾಡುತ್ತಾರೆ, ಯಾರೂ ಇನ್‌ಸ್ಪೆಕ್ಷನ್ನಿಗೆ ಬಂದಿಲ್ಲವೆಂದರೆ ಅದನ್ನು ಹರಿದು ಹಾಕುತ್ತಾರೆ. ಈ ರೀತಿ ಅವರಲ್ಲಿ ಇಬ್ಬರು ಕಳ್ಳರು. ಒಂದು ರೀತಿ ಹೇಳುವುದಾದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸಂಭಂಧಪಟ್ಟ ಉಪಾಧ್ಯಾಯರು ಬಹಳ ಮಂದಿ ಸರಿಯಾಗಿ ಕೆಲಸ ಮಾಡುವುದಿಲ್ಲ. ಇನ್ನು ಕೆಲವು ಕಡೆ ವಿಧ್ಯಾರ್ಥಿಗಳ ಸಂಖ್ಯೆ ಜಾಸ್ತಿ ಇರುತ್ತದೆ, ಅಲ್ಲಿ ಸರಿಯಾಗಿ ಉಪಾಧ್ಯಾಯರು ಇರುವುದಿಲ್ಲ. ಕೆಲವು ಕಡೆ ಉಪಾಧ್ಯಾಯರು ಜಾಸ್ತಿ ಇದ್ದರೆ ಹುಡುಗರ ಸಂಖ್ಯೆ ಕಡಮೆ ಇರುತ್ತದೆ. ಉದಾಹರಣೆಗೆ ಮೋಕ ಹೈಸ್ಕೂಲಿನಲ್ಲಿ ಹುಡುಗರು ಬೇಕಾದಷ್ಟು ಮಂದಿ ಶಾಲೆಗೆ ಬರುವುದಕ್ಕೆ ತಯಾರಾಗಿದ್ದಾರೆ. ಆದರೆ ಅಲ್ಲಿ ಇರತಕ್ಕ ಮುಖ್ಯೋಪಾಧ್ಯಾಯರು ಮತ್ತು ಇತರೆ ಉಪಾಧ್ಯಾಯರು ಆ ಗ್ರಾಮದಲ್ಲಿ ಇಲ್ಲದೆ ಸುಮಾರು 13-14 ಮೈಲಿ ದೂರದ ಪ್ರದೇಶದಲ್ಲಿರುತ್ತಾರೆ. ಅವರು ಯಾವತ್ತಿಗೂ ಲೇಟಾಗಿ ಹೋಗುವುದು ವಾಡಿಕೆ. ಮಧ್ಯಾಹ್ನ ಹನ್ನೆರಡೂವರೆ ಅಥವಾ ಬಂದು ಗಂಟೆಗೆ, ಅವರ ಮನಸ್ಸಿಗೆ ಬಂದ ಹಾಗೆ ಬರುತ್ತಾರೆ, ಆ ಗ್ರಾಮದ ಹುಡುಗರು ಸುಮ್ಮನೆ ಹೋಗಿ ಶಾಲೆಯನ್ನು ನೋಡಿಕೊಂಡು ಬರುವುದು ಹೊರತು ಮುಖ್ಯೋಪಾಧ್ಯಾಯರು ಮತ್ತು ಇತರ ಉಪಾಧ್ಯಾಯರು ಯಾರೂ ಇರುವುದಿಲ್ಲ. ನಾನು ಮಾನ್ಯ ಸಚಿವರಿಗೆ ತಿಳಿಯಪಡಿಸುವುದೇನೆಂದರೆ ಅಲ್ಲಿರತಕ್ಕ ಮುಖ್ಯೋಪಾಧ್ಯಾಯರು ಮತ್ತು ಇತರೆ ಉಪಾಧ್ಯಾಯರನ್ನು ಆದಷ್ಟು ಬೇಗನೆ ಅಲ್ಲಿಂದ ವರ್ಗ ಮಾಡಿ ಒಳ್ಳೆಯ ಉಪಾಧ್ಯಾಯರನ್ನು ಹಾಕಿದರೆ ನಿಜವಾಗಿಯೂ ಆ ಶಾಲೆ ಉತ್ತಮವಾಗುತ್ತದೆ ; ಮತ್ತು ಆ ಊರಿನ ಅನೇಕ ಮುಖಂಡರು ಅವರಿಗೆ ಬೇಕಾಗತಕ್ಕ ವಸತಿ ಏರ್ಪಾಡು ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ, ಆದರೂ ಕೂಡ ಈಗಿರುವ ಉಪಾಧ್ಯಾಯರು ಆ ಗ್ರಾಮದಲ್ಲಿ ಇರಲು ಆಗುವುದಿಲ್ಲ, ಬಳ್ಳಾರಿಯಿಂದ ಬಸ್ಸಿನಲ್ಲಿ ಬರುತ್ತೇವೆ ಎಂದು ಹೇಳುತ್ತಾರೆ. ಆ ಗ್ರಾಮದಲ್ಲಿ ಒಬ್ಬ ಜವಾನ ಮಾತ್ರ ಇದ್ದು ನೈಟ್ ವಾಚ್‌ಮನ್ ಕೆಲಸ ಮಾಡಿಕೊಂಡು ಶಾಲೆಯನ್ನು ಕಾಯ್ದುಕೊಂಡಿರುತ್ತಾನೆ. ಉಪಾಧ್ಯಾಯರು ಬಂದ್ರೇ ಬಂದರು, ಇಲ್ಲವಾದರೆ ಇಲ್ಲ. ಆದ್ದರಿಂದ ಅಲ್ಲಿರುವ ಉಪಾಧ್ಯಾಯರನ್ನೆಲ್ಲ ಕೂಡಲೇ ವರ್ಗ ಮಾಡಬೇಕು ಎಂದು ಹೇಳುತ್ತೇನೆ.

5-00 P. M.

ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಹುಡುಗರ ಸಂಖ್ಯೆ ಜಾಸ್ತಿ ಇದ್ದರೂ ಕೂಡ ಒಂದು ಶಾಲಾ ಕಟ್ಟಡವಿರುತ್ತದೆ. ಒಂದೇ ಕಡೆ ಎರಡು ಮೂರು ತರಗತಿಗಳು ನಡೆಯುವುದನ್ನು ನಾನು ನೋಡಿದ್ದೇನೆ. ಆದ್ದಕಾರಣ ಅಂಥ ಪ್ರದೇಶಗಳಲ್ಲಿ ಹೆಚ್ಚಿನ ಶಾಲಾ ಕಟ್ಟಡಗಳನ್ನು ಕಟ್ಟಿಸಿ ಕೊಡುವ ವ್ಯವಸ್ಥೆ ಮಾಡಬೇಕು. ಅದೇ ರೀತಿ ಕೆಲವು ಶಾಲೆಗಳಲ್ಲಿ ಸ್ವಾತಂತ್ರ್ಯ ಬಂದು 25 ವರ್ಷದಾದರೂ ಎಲ್ಲರೂ ಸಮಾನತೆಯಿಂದ ಇರಬೇಕು ಎಂದು ಹೇಳುತ್ತಿದ್ದರೂ ಕೂಡ ಹಳ್ಳಿಗಳಲ್ಲಿ ಅನೇಕ ಕಡೆ ಈಗಲೂ ಕೂಡ ಅಸ್ಪೃಶ್ಯತೆಯನ್ನು ಆಚರಿಸುತ್ತಿರುವ ಸಂದರ್ಭಗಳಿವೆ. ಹರಿಜನ ಗಿರಿಜನ ಮಕ್ಕಳನ್ನು ಪ್ರತ್ಯೇಕವಾಗಿ ಕೂಡಿಸುತ್ತಾರೆ. ಉದಾಹರಣೆಗೆ ಹೇಳುವುದಾದರೆ ಸಿರಗುಪ್ಪದಲ್ಲಿ ಒಬ್ಬ ಹೈಸ್ಕೂಲು ಟೀಚರಾದವರು ಹರಿಜನ ಹುಡುಗರನ್ನು ಕುರಿತು, ಈ ಜಾತಿಯನ್ನು ಎಲ್ಲಿ ಇಡಬೇಕೋ ಅಲ್ಲಿ ಇಡಬೇಕು ಎಂದು ಹೇಳುತ್ತಾ ಹೀನಾಯವಾಗಿ ಬೈದು ಶಾಲೆ ಪ್ರಾರಂಭವದಾಗಿನಿಂದ ಶಾಲೆ ಮುಗಿಯುವವರೆಗೂ ಹರಿಜನ ಹುಡುಗರನ್ನು ಬೆಂಚಿನ ಮೇಲೆ ನಿಲ್ಲಿಸತಕ್ಕಂಥ ಅನೇಕ ಉದಾಹರಣೆಗಳನ್ನು ನಾವು ಕೊಡಬಹುದು. ಜಿಲ್ಲಾ ಮಟ್ಟದಲ್ಲಿ ಡೆಪ್ಯೂಟಿ ಡೈರೆಕ್ಟರ್, ತಾಲ್ಲೂಕು ಮಟ್ಟದಲ್ಲಿ ಎ.ಇ.ಒ. ಇವರುಗಳು ಯಾರೂ ಉಪಾಧ್ಯಾಯರ ಮೇಲೆ ಸರಿಯಾದ ಚೆಕಿಂಗ್ ಅಥವಾ ಇನ್‌ಸ್ಪೆಕ್ಷನ್ ಮಾಡುತ್ತಿಲ್ಲ. ಕೆಲವೊಂದು ಉಪಾಧ್ಯಾಯರುಗಳು ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿ

(ಡಿ. ನಾರಾಯಣ್‌ದಾಸ್)

ದ್ದಾರೆ. ನನ್ನ ತಾಲೂಕ್ಕಿನಲ್ಲಿ ಸುಮಾರು 700 ಮಂದಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರು ರಾಜಕೀಯದಲ್ಲಿ ತೊಡಗಿ ಈಚಿಗೆ ನಡೆದ ಚುನಾವಣೆಗಳಲ್ಲಿ ಭಾಗವಹಿಸಿ ವಿರೋಧ ಮಾಡಿದರು.

ಶ್ರೀ ಎ. ಆರ್. ಬದರೀನಾರಾಯಣ್.—ಉಪಾಧ್ಯಾಯರನ್ನು ವರ್ಗಾವಣೆ ಮಾಡಬೇಕೋ ಬಿಡಬೇಕೋ ?

ಶ್ರೀ ಡಿ. ನಾರಾಯಣ ದಾಸ್.—ಸುಮಾರು ಒಂದೊಂದು ತಾಲ್ಲೂಕಿನಲ್ಲಿ ಹತ್ತಿಪ್ಪತ್ತು ವರ್ಷಗಳಿಂದ ಕೆಲವರು ಬೇರೂರಿಕೊಂಡು ನಿಂತಿದ್ದಾರೆ. ಆ ವಿಷಯವಾಗಿ ಹೇಳುವುದ್ದಾದರೆ ಈ ವರ್ಷದಲ್ಲಿ ಅವರನ್ನೆಲ್ಲ ಎನ್ ಮಾಸ್ ಒಂದು ತಾಲ್ಲೂಕಿಂದ ಇನ್ನೊಂದು ತಾಲ್ಲೂಕಿಗೆ, ಅಥವಾ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗಾದರೂ ಕೂಡ ವರ್ಗ ಮಾಡಬೇಕು. ಅವರ ಮೇಲೆ ಯಾವರೀತಿಯ ಕರುಣೆಯನ್ನು ತೋರಬಾರದೆಂದು ಹೇಳುತ್ತೇನೆ,

ಕಾಲೇಜು ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ಯಾವ ಯಾವ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಕಾಲೇಜುಗಳಿಲ್ಲವೋ ಅಲ್ಲಿ ಜೂನಿಯರ್ ಕಾಲೇಜುಗಳನ್ನು ತೆಗೆಯಬೇಕು. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಸಿರುಗುಪ್ಪ ತಾಲ್ಲೂಕುಗಳಲ್ಲಿ ಒಂದು ಜೂನಿಯರ್ ಕಾಲೇಜೂ ಇಲ್ಲ. ಕಳೆದ ವರ್ಷ ಕೂಡ ಕಾಲೇಜು ಕೊಡಬೇಕೆಂದು ಕೇಳಿದ್ದೆ, ಸರ್ಕಾರ ಕಾಲೇಜನ್ನು 'ತೆಗೆಯುವುದಾದರೆ ಒಂಬತ್ತು ಎಕರೆ ಭೂಮಿಯನ್ನು ಮುಫತ್ತಾಗಿ ಕೊಡುತ್ತೇವೆ ಮತ್ತು 25 ಸಾವಿರ ರೂಪಾಯಿ ದಾನವಾಗಿ ಕೊಡುತ್ತೇವೆಂದೂ ಅದಾಗದೆ ಇದ್ದರೆ ದಾನಿಗಳ ಹೆಸರನ್ನು ಇಡುವುದಾದರೆ ಪೂರ್ತಿ ದಾನವಾಗಿ ಒಂದು ಲಕ್ಷ ಹತ್ತು ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದಾಗ ಮಾನ್ಯ ಮಂತ್ರಿಗಳು ಕಾಲೇಜಿಗೆ ಸ್ಯಾಂಕ್ಷನ್ ಕೊಡುವುದಾಗಿ ಹೇಳಿದ್ದರು. ಇನ್ನೂ ಆಗಿಲ್ಲ. ಈ ವರ್ಷವಾದರೂ ಕೂಡ ಸಿರಗುಪ್ಪದಲ್ಲಿ ಒಂದು ಜೂನಿಯರ್ ಕಾಲೇಜನ್ನು ತೆರೆಯಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ಅಲ್ಲದೆ ಪ್ರತಿಯೊಂದು ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಜೂನಿಯರ್ ಕಾಲೇಜುಗಳಿಲ್ಲವೋ ಅಲ್ಲೆಲ್ಲ ಒಂದೊಂದು ಜೂನಿಯರ್ ಕಾಲೇಜ್ ತೆರೆಯತಕ್ಕ ವ್ಯವಸ್ಥೆ ಮಾಡಬೇಕು.

ಹೊಸಪೇಟೆಯಲ್ಲಿ ಈ ಹಿಂದೆ ಟೀಚರ್ಸ್‌ಗೆ ಬೆನಿಫಿಟ್ ಕೊಡಲಿಕ್ಕೆ ಒಂದು ಫಂಡ್ ಕಲೆಕ್ಟ್ ಮಾಡಿದ್ದರು. ಅದು ಏನಾಯಿತೋ ಗೊತ್ತಿಲ್ಲ. ಅದನ್ನು ತಿಳಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ನಾನು ಸುಮಾರು 12 ವರ್ಷದ ಕೆಳಗೆ ಕಾಲೇಜಿನಲ್ಲಿ ಓದುತ್ತಿದ್ದಾಗ ನಾನು ಷೆಡ್ಯೂಲ್ ಕ್ಯಾಸ್ಟ್‌ಗೆ ಸೇರಿದ್ದರೂ ಕೂಡ ಅರ್ಧ ಫೀ ಕೊಟ್ಟು ಓದಿದ್ದೇನೆ. ಈಗ ಏನು ಮಾಡುತ್ತಿದ್ದಾರೆಂದರೆ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ಗೆ ಸೇರಿದ ಹುಡುಗರಿಗೆ ಸ್ಕಾಲರ್‌ಷಿಪ್ ಕೊಡುತ್ತಾರೆ. ಅದನ್ನು ಕೊಡುವಾಗ ಅರ್ಧ ಫೀ ವಸೂಲು ಮಾಡಿಕೊಳ್ಳುವುದಕ್ಕೆ ಬದಲಾಗಿ ಪೂರ್ತಿ ಫೀ ಮುರಿದುಕೊಂಡು ಉಳಿದುದನ್ನು ಕೊಡುತ್ತಾರೆ. ಈ ವಿಷಯದಲ್ಲಿ ಮಾನ್ಯ ಸಚಿವರು ಹೆಚ್ಚು ಆಸಕ್ತಿ ವಹಿಸಿ ಪ್ರೋಬ್ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಯಪಡಿಸುತ್ತೇನೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಸನ್ಮಾನ್ಯ ಉಪಾಧ್ಯಕ್ಷರೇ, ವಿದ್ಯಾ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಯ ವಿಷಯವಾಗಿ ನಾನು ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ. ವಿದ್ಯಾ ಮಂತ್ರಿಗಳು ಬಹಳ ಪ್ರಾಮಾಣಿಕರು, ಸತ್ಯಸಂಧರು ಮತ್ತು ದಕ್ಷರು, ಯಾವ ವಿಷಯವನ್ನೇ ಆಗಲೀ ಒಳ್ಳೆಯ ದೃಷ್ಟಿಯಿಂದ ನೋಡತಕ್ಕವರು. ಅವರಿಗೆ ಸಮಾಜ ಘಾತುಕತನ ಮತ್ತು ಅವ್ಯವಹಾರಗಳು ಅಷ್ಟಾಗಿ ಗೋಚರವಾಗುತ್ತಿಲ್ಲ. ಇಂಥ ವಿಷಯಗಳನ್ನು ಅವರ ಗಮನಕ್ಕೆ ತಂದರೆ ನಿಜವಾಗಿಯೂ ಕೂಡ ಅದನ್ನು ಬಗೆಹರಿಸಿ ಅನೇಕ ಸುಧಾರಣೆಗಳನ್ನು ತರುತ್ತಾರೆನ್ನುವ ನಂಬಿಕೆ ನನಗಿದೆ. ಅವರು ವಿದ್ಯಾ ಮಂತ್ರಿಗಳಾದ ಮೇಲೆ ಅನೇಕ ಸುಧಾರಣೆಗಳನ್ನು ತಂದಿದ್ದಾರೆ ಮತ್ತು ದಕ್ಷತೆಯಿಂದ ಅನೇಕ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ನಿಜವಾಗಿಯೂ ಇವರು ಬಹಳ ಒಳ್ಳೆಯ ಮಂತ್ರಿಗಳು ಎಂದು ಹೇಳಿದರೆ ಅದು ತಪ್ಪಾಗಲಾರದು. ಇಂದು ವಿದ್ಯಾರ್ಥಿಗಳ ಸ್ಟಾಂಡರ್ಡ್ ಬಹಳ ಕಡಿಮೆಯಾಗುತ್ತಿದೆ. ಇಂದು ಪಾಸಾಗಿ ಬರುವ ಹುಡುಗರನ್ನು 'ಮೈಸೂರು ಡಿಸ್ಟ್ರಿಕ್ಟ್ ಎಲ್ಲಿದೆ' ಎಂದು ಕೇಳಿದರೆ ಉತ್ತರ ಕೊಡುವುದಕ್ಕೆ ಬರುವು

ದಿಲ್ಲ. ಕಾವೇರಿ ನದಿ ಎಲ್ಲಿ ಹುಟ್ಟುತ್ತದೆ ಎಂದು ಪ್ರಶ್ನೆ ಕೇಳಿದರೆ ಹೇಳುವುದಕ್ಕೆ ಬರುವುದಿಲ್ಲ. ಈ ರೀತಿ ವಿದ್ಯಾಭ್ಯಾಸದ ಮಟ್ಟ ಬರಬರುತ್ತ ಬಹು ಕೆಳಮಟ್ಟಕ್ಕೆ ಹೋಗುತ್ತಿದೆ. ಇದಕ್ಕೆ ಕಾರಣ ಮುಖ್ಯವಾಗಿ ಟೀಚರುಗಳನ್ನು ಆಯ್ಕೆ ಮಾಡುವಾಗ ಸರಿಯಾಗಿ ಪರೀಕ್ಷೆ ಮಾಡಿ ಆರಿಸುವುದಿಲ್ಲ, ಕೆಲವು ಕಡೆ ಇರುವ ಟೀಚರುಗಳಿಗೆ ಪಾಠ ಹೇಳಿಕೊಡುವುದೇ ಬರುವುದಿಲ್ಲ. ಹಳ್ಳಿಗಾಡಿನಲ್ಲಿ ಇರುವ ಶಿಕ್ಷಕರುಗಳು ಶಾಲೆಗಳಲ್ಲಿ ಹುಡುಗರಿಗೆ ಪಾಠ ಕಲಿಸುತ್ತಿದ್ದಾರೆಯೋ ಇಲ್ಲವೇ ಎನ್ನುವುದನ್ನು ಇಲ್ಲಿರುವ ಇನ್ಸ್‌ಪೆಕ್ಟರುಗಳು ಪರೀಕ್ಷೆ ಮಾಡುತ್ತಿಲ್ಲ, ಇದಕ್ಕಾಗಿ ಇನ್ಸ್‌ಪೆಕ್ಟರುಗಳು ತನಿಖೆ ಮಾಡಲು ಹೋಗುವಾಗ ಹುಡುಗರನ್ನು ಪರೀಕ್ಷೆ ಮಾಡುವುದರ ಜೊತೆಗೆ ಅಲ್ಲಿರುವ ಶಿಕ್ಷಕರುಗಳನ್ನೂ ಪರೀಕ್ಷೆ ಮಾಡಿದರೆ ಅವರು ಸರಿಯಾಗಿ ವಿಚಾರಗಳನ್ನು ತಿಳಿದು ಪಾಠ ಹೇಳುತ್ತಾರೆಯೋ ಇಲ್ಲವೇ ಎನ್ನುವುದು ಗೊತ್ತಾಗುತ್ತದೆ. ಇಂದು ವಿದ್ಯಾರ್ಥಿಗಳಲ್ಲಿ ಒಂದು ರೀತಿಯ ಅಶಿಸ್ತಿನ ಮನೋಭಾವನೆ ಬೆಳೆದು ಬರುತ್ತಿದೆ. ಎಲ್ಲೆಲ್ಲೂ ಅಶಾಂತಿ ಹಾಗೂ ಅಶಿಸ್ತುಗಳೇ ವಿದ್ಯಾರ್ಥಿಗಳಲ್ಲಿ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣ ರಾಷ್ಟ್ರೀಯ ಭಾವನೆಯಿಂದ ಸೇವೆ ಮಾಡುತ್ತಿಲ್ಲ. ಇದು ನಮ್ಮ ದೇಶ, ನಮ್ಮ ರಾಷ್ಟ್ರದ ಸೇವೆಯನ್ನು ಧೈರ್ಯದಿಂದ ಮಾಡಿದರೆ ಇಂತಹ ಅಶಾಂತಿಗಳು ಬರುವುದಿಲ್ಲ. ಇಂದು ದೇಶದಲ್ಲಿ ಅಶಾಂತಿ ಮೊದಲು ಆರಂಭವಾಗುವುದು ಶಾಲೆಗಳಲ್ಲಿನ ವಿದ್ಯಾರ್ಥಿಗಳ ಮೂಲಕ. ಅನಂತರ ಶಾಲಾ ಕಟ್ಟಡಗಳನ್ನು ಧ್ವಂಸ ಮಾಡುವುದು, ಈ ರೀತಿ ಹುಡುಗರ ಚಳುವಳಿಯಾಗುತ್ತಿದ್ದರೆ ದೇಶದಲ್ಲಿ ರಾಷ್ಟ್ರೀಯತಾ ಮನೋಭಾವ ಬೆಳೆಯುವುದಾದರೂ ಹೇಗೆ ? ಇದಕ್ಕೆ ಕಾರಣ ಇಂದಿನ ವಿದ್ಯಾಭ್ಯಾಸದ ಕಾರ್ಯಕ್ರಮ ಬಹಳ ಕೆಟ್ಟು ಹೋಗಿದೆ, ವಿದ್ಯಾಭ್ಯಾಸ ಒಂದು ರೀತಿಯ ಗುಲಾಮಗಿರಿಯಂತೆ ಆಗುತ್ತಿದೆ, ಹುಡುಗರು ಪಾಸಾದ ಕೂಡಲೇ ಕೆಲಸಕ್ಕಾಗಿ ಹುಡುಕಿಕೊಂಡು ಹೋಗುವ ಒಂದು ಪರಿಪಾಠ ಬೆಳೆದುಕೊಂಡು ಬರುತ್ತಿದೆ, ವ್ಯವಸಾಯ ಕ್ಷೇತ್ರದಲ್ಲಿ ತರಬೇತಿ ಪಡೆದವರು ವ್ಯವಸಾಯಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಹಳ್ಳಿಗೆ ಹೋಗಿ ಉಳುಮೆ ಮಾಡಲು ಬರುವುದಿಲ್ಲ. ಎಸ್. ಎಸ್ ಎಲ್. ಸಿ. ಪಾಸಾಯಿತು ಎಂದು ಕೂಡಲೇ ನೌಕರಿಗಳನ್ನು ಕೊಡಿ ಎಂದು ಬರುತ್ತಾರೆ. ಇಂದಿನ ಹುಡುಗರಲ್ಲಿ ಸ್ವತಂತ್ರವಾಗಿ ಜೀವನ ನಡೆಸುವ ಶಕ್ತಿ ಇಲ್ಲ. ನೌಕರಿಗಾಗಿಯೇ ವಿದ್ಯಾಭ್ಯಾಸ ಮಾಡಬೇಕು ಎನ್ನುವ ಮನೋಭಾವನೆ ಬದಲಾಗಬೇಕು. ಉಪಾಧ್ಯಾಯರುಗಳಿಗೆ ಅನೇಕ ಕಡೆಗಳಲ್ಲಿ ವಸತಿ ಸೌಕರ್ಯಗಳೇ ಇಲ್ಲ. ಇದೊಂದು ದೊಡ್ಡ ಸಮಸ್ಯೆಯಾಗಿದೆ, ಟೀಚರುಗಳಿಗೆ ಅವರು ಹೋದ ಕಡೆಗಳಲ್ಲಿ ಮನೆಗಳೇ ಸಿಗುವುದಿಲ್ಲ, ನೀರಿನ ಸೌಕರ್ಯ ಸಿಗುವುದಿಲ್ಲ. ಇದರ ಕಡೆಗೆ ಹೆಚ್ಚು ಗಮನ ಕೊಟ್ಟು ಉಪಾಧ್ಯಾಯರುಗಳಿಗೆ ವಸತಿ ಸೌಕರ್ಯದ ಏರ್ಪಾಡುಗಳನ್ನು ಮಾಡಬೇಕು. ಉಪಾಧ್ಯಾಯರುಗಳು ಶಾಲೆಗಳು ಇರುವ ಕಡೆಗಳಲ್ಲಿ ವಾಸಿಸುವ ಏರ್ಪಾಡು ಮಾಡಬೇಕು. ಹಾಗಿಲ್ಲದೇ ಬೇರೆ ಊರಿನಿಂದ ಬರುವ ಉಪಾಧ್ಯಾಯರುಗಳಾದರೆ ಕಾಲಕ್ಕೆ ಸರಿಯಾಗಿ ಬರುವುದಿಲ್ಲ. ಮತ್ತು ಶಾಲೆಗಳು ಯಾವ ಊರಿನಲ್ಲಿ ಇದೆಯೋ ಅದೇ ಊರಿನವರನ್ನೇ ಅಲ್ಲಿ ಉಪಾಧ್ಯಾಯರುಗಳಾಗಿ ನೇಮಕ ಮಾಡಬಾರದು. ಇವರನ್ನು ಅವರ ಊರಿನ ಪಕ್ಕದಲ್ಲಿ ಎರಡು ಮೂರು ಮೈಲಿಗಳ ಅಂತರದಲ್ಲಿರುವಂತೆ ಮಾಡುವುದು ಒಳ್ಳೆಯದು. ಇಲ್ಲದೇ ಇದ್ದರೆ ಅದೇ ಊರಿನವರಾದರೆ ಅವರು ಅವರ ಹೊಲದ ಕಡೆಗೇ ಗಮನ ಹೆಚ್ಚು ಇರುತ್ತದೆ. ಶಾಲೆಗಳ ಕಡೆ ಗಮನವೇ ಇರುವುದಿಲ್ಲ, ಶಾಲೆ 11 ಗಂಟೆಗೆ ಆರಂಭವಾಗಬೇಕಾದರೆ 12-1 ಗಂಟೆವೇಳೆಗೆ ಶಾಲೆಗೆ ಬಂದು ಹುಡುಗರಿಗೂ ಸರಿಯಾಗಿ ಪಾಠ ಕಲಿಸುವುದಿಲ್ಲ. ಸ್ವಲ್ಪ ಕಾಲ ಶಾಲೆಯಲ್ಲಿದ್ದು ಮಧ್ಯಾಹ್ನದ ಮೇಲೆ ತಮ್ಮ ಹೊಲದ ಕೆಲಸ ಇನ್ನಿತರ ಕೆಲಸಗಳನ್ನು ಮಾಡಲು ಹೊರಟು ಹೋಗುತ್ತಾರೆ, ಇದರಿಂದ ಶಾಲಾ ಉಪಾಧ್ಯಾಯರುಗಳನ್ನು ನೇಮಿಸುವಾಗ ಆಯಾ ಊರಿನವರನ್ನೇ ಅಲ್ಲಿರುವ ಶಾಲೆಗಳಲ್ಲಿ ನೇಮಿಸಬಾರದು. ನಮ್ಮ ಸಿಟಿ ಏರಿಯಾದಲ್ಲಿ ನಾವು ನೋಡಿದರೆ ಈ ಸಿಟಿಯಲ್ಲಿರುವ ಶಾಲೆಗಳಲ್ಲಿ 18-20 ವರ್ಷಗಳಿಂದ ಒಂದೇ ಕಡೆ ಇರುವಂತೆ ಮಾಡಿಕೊಂಡಿದ್ದಾರೆ. ಇವರು ಸಿಟಿ ಬಿಟ್ಟು ಬೇರೆ ಯಾವ ಊರಿಗೂ ಹೋಗಲು ತಯಾರಿರುವುದಿಲ್ಲ. ಇದೊಂದು ದೊಡ್ಡ ಸಮಸ್ಯೆಯೇ ಆಗಿದೆ.

ಇನ್ನು ಸಿಂಗಲ್ ಟೀಚರು ಇರುವ ಶಾಲೆಗಳಲ್ಲಿ ನಾಲ್ಕು ಕ್ಲಾಸುಗಳಿರುತ್ತವೆ. ಒಬ್ಬರೇ ಟೀಚರು ನಾಲ್ಕು ಕ್ಲಾಸುಗಳನ್ನೂ ಹ್ಯಾಂಡಲ್ ಮಾಡಬೇಕು ಎಂದರೆ ಕಷ್ಟ. ಸಿಂಗಲ್ ಟೀಚರು ಇರುವ ಕಡೆ ಹೆಚ್ಚು ಟೀಚರುಗಳನ್ನು ಹಾಕುವ ವ್ಯವಸ್ಥೆ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ, ಇನ್ನು ಕೆಲವು ಖಾಸಗಿ ಶಾಲೆಗಳ ವಿಚಾರ ಹೇಳಬೇಕೆಂದರೆ ಕೆಲವು ಕಡೆ ಇರುವ ಖಾಸಗಿ ಶಾಲೆಗಳು ಒಂದು ರೀತಿಯಾಗಿ ಬಿಸಿನೆಸ್ ಮಾಡುತ್ತಿವೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಈಗೇನೋ ಚೆಕ್ ಸಿಸ್ಟಂ ಎಂದು ಸರ್ಕಾರ ತಂದಿದ್ದಾರೆ. ಟೀಚರು ಚೆಕ್‌ನ್ನು ಕ್ಯಾಷ್ ಮಾಡಿದ ಮೇಲೆ ಇದರಲ್ಲಿ ಇದರಲ್ಲಿ ಅರ್ಧ ಭಾಗವನ್ನು ಶಾಲೆಗಳನ್ನು ನಡೆಸುವವರಿಗೆ ಕೊಡುತ್ತಿದ್ದಾರೆ. ಇಂದು ನಮ್ಮ ವಿದ್ಯಾ

(ಶ್ರೀ ಎನ್. ಎಸ್. ಗುರುಸಿದ್ಧಪ್ಪ)

ಇಲಾಖೆಯಲ್ಲಿ ಸ್ವಜನ ಪಕ್ಷಪಾತ ಜಾತೀಯತೆ ಹೆಚ್ಚಾಗುತ್ತಿದೆ. ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಈಚೆಗೆ ಇಂತಹ ಜಾತೀಯತೆಯ ಪ್ರಸಂಗ ಒಂದು ನಡೆಯಿತು. ಮಾರ್ಚ್ 16ನೇ ತಾರೀಖು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಟ್ಯಾಟಿಸ್‌ಟಿಕ್ಸ್ ಇಲಾಖೆಯ ಅಧ್ಯಾಪಕಿಯವರು ಎಂದರೆ ಶ್ರೀಮತಿ ಪದ್ಮಾವತಿಯವರಿಗೂ ಇದೇ ವಿಶ್ವವಿದ್ಯಾನಿಲಯದಲ್ಲಿ ಆಧುನಿಕರಾಮಕೃಷ್ಣ ಪರಮಹಂಸ ಎಂದು ಹೆಸರು ಪಡೆದಿರುವ ಶ್ರೀ ಸುಬ್ಬರಾಯಾಚಾರ್ ಇವರ ಅನೈತಿಕ ವ್ಯವಹಾರಗಳು ಗಮನಕ್ಕೆ ಬಂದು ಅಲ್ಲಿದ್ದ ವಿದ್ಯಾರ್ಥಿಗಳು ಗಲಭೆ ಮಾಡಿದಾಗ ಅಲ್ಲಿಗೆ ಪೋಲಿಸರು ಬಂದು ಇದನ್ನು ಬಗೆಹರಿಸಬೇಕಾಗಿ ಬಂತು. ಇಂತಹ ಅನೈತಿಕ ಉಪಾಧ್ಯಾಯರುಗಳು ವಿದ್ಯಾ ಕ್ಷೇತ್ರದಲ್ಲಿರಬಾರದು, ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ನಿಜವಾಗಿಯೂ ನಮ್ಮ ವಿದ್ಯಾ ಮಂತ್ರಿಗಳು ಬಹಳ ಒಳ್ಳೆಯವರು. ಅವರು ಇಲ್ಲಿಯವರೆಗೂ ಬಹಳ ಶಾಂತ ಚಿತ್ತದಿಂದ ನಮ್ಮ ವಿದ್ಯಾಕ್ಷೇತ್ರದಲ್ಲಿರುವ ಸಮಸ್ಯೆಗಳೇನು ಎನ್ನುವುದನ್ನು ತಿಳಿದುಕೊಂಡಿರುವುದರಿಂದ ಇದನ್ನು ಬಗೆಹರಿಸಲು ಪ್ರಯತ್ನ ಮಾಡುತ್ತಿರುವುದು ಅಲ್ಲಲ್ಲಿ ಕಂಡುಬರುತ್ತಿದೆ. ಅದರಂತೆ ಮುಂದೆ ಕೂಡ ನಮ್ಮ ಸಲಹೆಗಳನ್ನು ಪರಿಶೀಲಿಸಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ ಗಾಡಿ (ಹಳಿಯಾಳ).—ಮಾನ್ಯ ಅಧ್ಯಕ್ಷರೇ, ವಿದ್ಯಾ ಸಚಿವರು ಮಂಡಿಸಿರ ತಕ್ಕ ಬೇಡಿಕೆಗಳನ್ನು ಪೂರ್ತಿ ಸ್ವಾಗತಿಸುತ್ತಾ ಕೆಲವು ಸೂಚನೆಗಳನ್ನು ಇಡಬಯಸುತ್ತೇನೆ. ಇಂದು ಎಲ್ಲಿ ನೋಡಿದರೂ ವಿದ್ಯಾರ್ಥಿಗಳಲ್ಲಿ ಒಂದು ರೀತಿಯಾದ ಅಸಂತೋಷ, ಅಶಿಸ್ತು, ಹಾಗೂ ಅಸಮಾಧಾನಗಳಿರುವುದು ಕಂಡುಬರುತ್ತದೆ. ಇದೂ ಅಲ್ಲದೆ ಇಂದು ಶಿಕ್ಷಣ ಮಟ್ಟ ಕೆಳಕ್ಕೆ ಹೋಗುತ್ತಿರುವುದು ಕಂಡುಬರುತ್ತಿದೆ. ಶಿಕ್ಷಣ ಎಷ್ಟು ಗೌರಯುತವಾದುದು ಎನ್ನುವುದಕ್ಕೆ ಒಂದು ಕಡೆ ಸಂಸ್ಕೃತದ ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ :—

'ವಿದ್ವಾನ್ ಸರ್ವತ್ರ ಪೂಜ್ಯತೆ' ಎಂದು ಹೇಳಿದ್ದಾರೆ. ಇದರಿಂದ ಸಂಸ್ಕೃತಿ ಹಾಗೂ ಶಿಕ್ಷಣಕ್ಕೆ ಎಷ್ಟು ಗೌರವವಿದೆ ಎನ್ನುವುದು ಇದರಲ್ಲಿ ಕಂಡು ಬರುತ್ತದೆ, ಶಿಕ್ಷಣದ ಬಗ್ಗೆ ಮಹಾತ್ಮಾ ಗಾಂಧಿಯವರು ಒಂದು ಕಡೆ ಹೀಗೆ ಹೇಳಿದ್ದಾರೆ :—"that the destiny of India is being shaped in her class rooms." ಎಂದು. ಇಂಡಿಯಾ ದೇಶದ ಭವಿಷ್ಯ ಎಂದರೆ ಎಲ್ಲ ಶಾಲಾ ಕಾಲೇಜು ವಿದ್ಯಾರ್ಥಿಗಳೂ ಅವರವರ ಕ್ಲಾಸು ರೂಮಿನಲ್ಲಿ ಇದ್ದು ಸರಿಯಾಗಿ ವಿದ್ಯಾಭ್ಯಾಸ ಮಾಡುವುದು ಎಂದು. ಇನ್ನೊಬ್ಬ ತಜ್ಞರು ಈ ರೀತಿ ಹೇಳುತ್ತಾರೆ :— Katherin has said "Give me men, give me educated men, give me creative men, I will give you better tomorrow" ಇಂತಹ ಒಂದು ಉತ್ತಮವಾದ ಮಟ್ಟದಲ್ಲಿ ನಮ್ಮ ವಿದ್ಯಾಭ್ಯಾಸ ಇರಬೇಕೆಂದು ಸಲಹೆ ಮಾಡಿದ್ದಾರೆ. ಇಂದು ವಿದ್ಯಾ ಕ್ಷೇತ್ರದಲ್ಲಿ ಪಾಲುಗೊಳ್ಳುವವರು ಎಂದರೆ, ಸಾರ್ವಜನಿಕರು, ವಿದ್ಯಾರ್ಥಿಗಳು, ಶಿಕ್ಷಕರು, ಮ್ಯಾನೇಜುಮೆಂಟಿನವರು ಮತ್ತು ಸರಕಾರದವರು, ಇವರೆಲ್ಲರೂ ಒಂದೊಂದು ವಿಚಾರವನ್ನು ವಿದ್ಯಾ ಕ್ಷೇತ್ರದಲ್ಲಿ ವಿಚಾರ ಮಾಡುತ್ತಿದ್ದಾರೆ, ಆದರೆ ಎಲ್ಲರಿಗೂ ಅವರಿಗೆ ತೋರಿದಂತೆ ಸರಕಾರಕ್ಕೆ ಬಂದು ಸಲಹೆ ಕೊಡುತ್ತಾರೆಯೇ ವಿನಾ, ನಮ್ಮ ಶಾಲೆಗಳಲ್ಲಿರುವ ಹುಡುಗರು ಯಾವ ರೀತಿ ಅಭ್ಯಾಸ ಮಾಡುತ್ತಿದ್ದಾರೆ ಮತ್ತು ಯಾವ ರೀತಿ ಪಾಠ ಕಲಿಯುತ್ತಿದ್ದಾರೆ ಎಂಬುದನ್ನು ಸರಿಯಾಗಿ ಪಾಲಕರು ವಿಚಾರ ಮಾಡುತ್ತಿಲ್ಲ. ಶಾಲೆಗೆ ಪಾಲಕರು ಹುಡುಗರುಗಳನ್ನು ಸೇರಿಸಿದರೆ ಅಲ್ಲಿಗೆ ತೀರಿತು ಶಾಲೆಯಿಂದ ಬಂದ ಹುಡುಗರನ್ನು ಇಂದು ಅವರ ಉಪಾಧ್ಯಾಯರು ಯಾವ ರೀತಿ ಪಾಠ ಹೇಳಿ ಕೊಟ್ಟರು ಅದರ ಬಗ್ಗೆ ಯಾವ ತಂದೆ ತಾಯಿಗಳು ವಿಚಾರ ಮಾಡುತ್ತಿಲ್ಲ. ಮಹಾತ್ಮ ಗಾಂಧಿಯವರು ಏಳು ಅವಗುಣಗಳ ವಿಚಾರವನ್ನು ತಿಳಿಸಿದ್ದಾರೆ, ಅವು ಯಾವುವೆಂದರೆ :—

According to Mahatma Gandhi, the Seven Evils are: Politics without principle, Wealth without work, Science without Humanity, Commerce without morality, Education without Character, Pleasure without Conscience, and Worship without sacrifice. ಇಂದು ವಿದ್ಯಾಭ್ಯಾಸದಲ್ಲಿ ಶೀಲ, ನಡತೆ ಇವುಗಳ ಮಟ್ಟ ಕಡಿಮೆಯಾಗುತ್ತ ಬರುತ್ತಿದೆ. ಮತ್ತು ಎಲ್ಲಿ ನೋಡಿದರೂ ಒಂದು ರೀತಿಯಾದ ಅಶಾಂತ ಪರಿಸ್ಥಿತಿ ಕಂಡುಬರುತ್ತದೆ, ಶಿಕ್ಷಣದಲ್ಲಿ ಗುಣಮಟ್ಟ ಕಡಿಮೆಯಾಗ್

ತ್ತಿದೆ, ಎಲ್ಲೆಲ್ಲೂ ರಾಜಕೀಯ ಆಗುತ್ತಿದೆ, ಪ್ರೈಮರಿ ಶಾಲೆಗಳಲ್ಲಿರುವ ಮೇಷ್ಟ್ರುಗಳು ಇಂತಹ ಒಂದು ರಾಜಕೀಯ ಮಾಡುತ್ತಿದ್ದಾರೆನ್ನುವುದು ಸರ್ವೆ ಸಾಮಾನ್ಯವಾಗಿ ಇಂದು ವಿದ್ಯಾ ಕ್ಷೇತ್ರದಲ್ಲಿನ ವಾತಾವರಣ ಕೆಟ್ಟು ಹೋಗುತ್ತಿರುವುದು ಕಂಡು ಬರುತ್ತಿದೆ.

ಇವೊತ್ತು ಕಾಲೇಜಿನ ವಿದ್ಯಾರ್ಥಿಗಳು ಶಿಕ್ಷಕರನ್ನು ಹೋಟೇಲ್‌ಗಳಿಗೆ ಕರೆದುಕೊಂಡು ಹೋಗಿ ಚಾ ಮತ್ತು ಸಿಗರೇಟ್ ಕೊಡಿಸುವುದು ಮತ್ತು ಅವರ ಜೊತೆಯಲ್ಲಿ ಸಿಗರೇಟ್ ಸೇದುವುದು ನಮಗೆ ಕಂಡುಬರುತ್ತಿದೆ. ಮಾನ್ಯ ಸಯನಕ್ ಅವರು ಹೇಳಿದ ಹಾಗೆ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳು ಕೂಡಿಕೊಂಡು ಬೀರ್ ಕುಡಿಯುವುದು ಸಹ ಸತ್ಯವಾದ ಸಂಗತಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಶಿಕ್ಷಕರಲ್ಲಿ ತಮ್ಮ ಮೂಲಕ ನನ್ನ ಒಂದು ವಿನಂತಿ ಏನೆಂದರೆ, ಮಕ್ಕಳಿಗೆ ಸದ್ಗುಣಗಳನ್ನು ಕಲಿಸುವ ಪವಿತ್ರವಾದ ಕೆಲಸ ಅವರ ಮೇಲಿದೆ ಎಂಬುದನ್ನು ತಿಳಿದುಕೊಂಡು ಕೆಲಸ ಮಾಡಬೇಕು. ಮಕ್ಕಳ ದೇಹದಲ್ಲಿ ಒಳ್ಳೆಯ ರಕ್ತ ಹರಿಯುವಂತೆ ಮಾಡಬೇಕು. ಮಕ್ಕಳ ಗುಣಮಟ್ಟವನ್ನು ಕಾಪಾಡಬೇಕು. ಆದರೆ ಇಂದು ಶಿಕ್ಷಕರು ವಿದ್ಯೆಯನ್ನು ಸೈಡ್ ಬಿಸಿನೆಸ್ ಆಗಿ ಮಾಡಿಕೊಂಡು ಹಣ ಗಳಿಸುವ ಕೆಲಸ ಮಾಡುತ್ತಿದ್ದಾರೆ. ನನ್ನ ಕ್ಷೇತ್ರದ ಬಗ್ಗೆ ಒಂದು ಉದಾಹರಣೆ ಹೇಳಬೇಕೆಂದರೆ, ಒಬ್ಬರು ಶಿಕ್ಷಕರು ತಿಂಗಳಿಗೆ ಒಂದು ಸಲ ಸಂಬಳವನ್ನು ಮಾತ್ರ ಸರಿಯಾಗಿ ತೆಗೆದುಕೊಳ್ಳುತ್ತಿದ್ದಾರೆಯೇ ಹೊರತು ಮಕ್ಕಳಿಗೆ ಸರಿಯಾಗಿ ಪಾಠ ಮಾಡುತ್ತಿಲ್ಲ. ಯಾವಾಗಲೂ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿ ತನ್ನ ಅಣ್ಣತಮ್ಮಂದಿರುಗಳಿಗೆ ಸಹಾಯ ಮಾಡುತ್ತಿರುತ್ತಾರೆ. ಮೇಲಿನ ಅಧಿಕಾರಿಗಳು ಇಂತಹವರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳದೆ ದುರ್ಲಕ್ಷ್ಯದಿಂದ ಇದ್ದಾರೆ. ಕೆಲವು ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿರಬಹುದು. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಅನೇಕ ಜನ ಅಧಿಕಾರಿಗಳು ಅದರಲ್ಲಿಯೂ ಇನ್ಸ್‌ಪೆಕ್ಷನ್ ಮಾಡುವ ಅಧಿಕಾರಿಗಳು ಸರಿಯಾಗಿ ಇನ್ಸ್‌ಪೆಕ್ಷನ್ ಮಾಡದೆ, ಹೋದ ಕಡೆಗಳಲ್ಲಿ ಹಂದಿ ಬೇಕು, ಕೋಳಿ ಬೇಕು, ಮೊಟ್ಟೆ ಬೇಕು ಎಂದು ಕೇಳಿ ಪಡೆದುಕೊಂಡು ಗುಡ್ ರಿಮಾರ್ಕ್ಸ್ ಬರೆದು ಬಿಡುತ್ತಾರೆ. ಇನ್‌ಸ್ಪೆಕ್ಷನ್ ಆದ ಮೇಲೆ ಯಾವ ಶಿಕ್ಷಕರು ಸಹ ತಮ್ಮಲ್ಲಿರುವ ತಪ್ಪೇನು ಎಂದು ಇನ್ಸ್‌ಪೆಕ್ಟರನ್ನು ಕೇಳುವ ಗೋಜಿಗೆ ಹೋಗುವುದಿಲ್ಲ. ತಮ್ಮಲ್ಲಿರುವ ತಪ್ಪನ್ನು ಮುಚ್ಚಿಕೊಳ್ಳಲು ಇನ್ಸ್‌ಪೆಕ್ಟರನ್ನು ಒಳ್ಳೆಯ ರೀತಿಯಲ್ಲಿ ಸತ್ಕಾರ ಮಾಡಿ ಕಳಿಸಿಬಿಡುತ್ತಾರೆ. ನಾನು ಸಹ ಇದೇ ವೃತ್ತಿಯನ್ನೇ ಮತ್ತು ಇದೇ ಜನಾಂಗದಿಂದ ಬಂದವನಾಗಿದ್ದೇನೆ. 1971ನೇ ಇಸವಿಯಲ್ಲಿ ನನ್ನ ಶಾಲೆಗೆ ವಾರ್ಷಿಕ ಪರೀಕ್ಷೆಯ ಕೊನೆಯ ದಿವಸ ಇನ್ಸ್‌ಪೆಕ್ಷನ್ ಮಾಡುವುದಕ್ಕೆ ಅಧಿಕಾರಿಗಳ್ ಬಂದರು. ಅವರು ಇನ್ಸ್‌ಪೆಕ್ಷನ್ ಮಾಡಿದ ಮೇಲೆ ನಾನು ಅವರಿಗೆ ಹೇಳಿದೆ, ನೀವು ಇನ್ಸ್‌ಪೆಕ್ಷನ್ ಮಾಡಿದ್ದು ನನಗೆ ಸಮಾಧಾನವಾಗಲಿಲ್ಲ ಎಂದು. ಆದಕ್ಕೆ ಅವರು ಯಾರು ಆ ರೀತಿ ಕೇಳಿಲ್ಲ, ತಾವೇಕೆ ಆ ರೀತಿ ಕೇಳುತ್ತೀರಿ ಎಂದು ಹೇಳಿದರು. ಇನ್ಸ್‌ಪೆಕ್ಷನ್‌ಗೆ ಬಂದವರು ಹುಡುಗರ ಮಟ್ಟ ಮತ್ತು ಶಿಕ್ಷಕರ ಮಟ್ಟ ಯಾವ ರೀತಿ ಇದೆ ಎಂಬುದನ್ನು ಪರೀಕ್ಷೆ ಮಾಡುವುದಿಲ್ಲ. ಈ ಕಾರಣದಿಂದ ಇನ್ಸ್‌ಪೆಕ್ಟರ್ ಆದವರು ಯಾವ ರೀತಿ ಇನ್ಸ್‌ಪೆಕ್ಷನ್ ಮಾಡಬೇಕೆಂಬ ಬಗ್ಗೆ ಗೈಡ್‌ಲೈನ್ ಹಾಕಿಕೊಡಬೇಕು. ಇದು ಇಲ್ಲದಿರುವುದರಿಂದ ಒಬ್ಬೊಬ್ಬರು ಒಂದೊಂದು ರೀತಿಯಿಂದ ಇನ್ಸ್‌ಪೆಕ್ಷನ್ ಮಾಡುತ್ತಿದ್ದಾರೆ. ಕೆಲವರು 3 ಪಾಯಿಂಟ್ಸ್ ಇರಬೇಕು ಎಂದು ಹೇಳಿದರೆ, ಮತ್ತೆ ಕೆಲವರು 5 ಪಾಯಿಂಟ್ಸ್ ಇರಬೇಕೆಂದು ಹೇಳುತ್ತಾರೆ. ಇನ್ನು ಕೆಲವರು 11 ಪಾಯಿಂಟ್ಸ್ ಇರಬೇಕೆಂದು ಹೇಳುತ್ತಾರೆ. ಇನ್ಸ್‌ಪೆಕ್ಷನ್‌ಗೆ ಬಂದವರು ರಿಜಿಸ್ಟರ್‌ಗಳನ್ನು ಸರಿಯಾಗಿ ನೋಡುವುದಿಲ್ಲ, ಅಕೌಂಟ್ಸ್ ಸರಿಯಾಗಿದೆಯೇ ಎಂಬುದನ್ನು ನೋಡುವುದಿಲ್ಲ, ಲೈಬ್ರರಿ ಪುಸ್ತಕಗಳು ಸರಿಯಾಗಿವೆಯೇ ಎಂಬುದನ್ನು ನೋಡುವುದಿಲ್ಲ. ಷರಾ ಮಾತ್ರ ಸರಿಯಾಗಿದೆ ಎಂದು ಬರೆದುಬಿಡುತ್ತಾರೆ. ಧಾರವಾಡ ಜಿಲ್ಲೆಯಲ್ಲಿ 5ನೇ ವರ್ಗದ ವಿದ್ಯಾರ್ಥಿಯೊಬ್ಬ ಮಾತೃಭಾಷೆಯಲ್ಲಿ ಜಿರೋ ನಂಬರನ್ನು ಪರೀಕ್ಷೆಯಲ್ಲಿ ತೆಗೆದುಕೊಂಡಿದ್ದರೂ ಸಹ ಪೇಪರ್ ಕರೆಕ್ಷನ್ ಮಾಡಿದವರು 45 ನಂಬರ್‌ಗಳನ್ನು ಕೊಟ್ಟು ಪಾಸ್ ಮಾಡಿಸಿದ್ದಾರೆ. ಇಂಥಾದ್ದನ್ನೆಲ್ಲಾ ತನಿಖೆ ಮಾಡದೆ ಇನ್ಸ್‌ಪೆಕ್ಷನ್ ಆಫೀಸರ್‌ಗಳು ಕಣ್ಮುಚ್ಚಿ ಕುಳಿತಿರುತ್ತಾರೆಯೇ ಹೇಗೆ? ಇದನ್ನೆಲ್ಲಾ ಸರ್ಕಾರದವರು ಸುಧಾರಣೆ ಮಾಡಬೇಕಾಗಿದೆ. ಈ ವಿದ್ಯಾ ಇಲಾಖೆ ಮಹಾ ಸಾಗರ ಇದ್ದಂತೆ. ಈ ಇಲಾಖೆಯಲ್ಲಿ ಅತಿ ಹೆಚ್ಚಿನ ನೌಕರವರ್ಗ ಇದೆ. ಇಷ್ಟೊಂದು ಜನ ಶಿಕ್ಷಕರನ್ನು ತಿದ್ದಬೇಕಾದರೆ ಬಹಳ ಕಷ್ಟವಿದೆ. ಶಿಕ್ಷಕರಾಗುವವರು ಮೊದಲು ತಮ್ಮ ಆತ್ಮ ಪರೀಕ್ಷೆ ಮಾಡಿಕೊಳ್ಳಬೇಕು. ಶಿಕ್ಷಕ ವೃತ್ತಿ ಮಾಡುವುದಕ್ಕೆ ಸಾಧ್ಯವಿದೆಯೇ ಅಥವಾ ಇಲ್ಲವೇ ಎಂಬುದನ್ನು ಕೆಲಸಕ್ಕೆ ಸೇರುವ ಮುನ್ನ ಯೋಚನೆ ಮಾಡಿ ನೋಡಬೇಕು. ಇಂದು ಶಿಕ್ಷಕರಾದವರು ದಿನಕ್ಕೆ ಎರಡು ತಾಸಾದರೂ ಮಕ್ಕಳಿಗೆ ಪಾಠ ಹೇಳಿಕೊಟ್ಟರೆ ಎಷ್ಟೋ ಒಳ್ಳೆಯದಾಗುತ್ತದೆ. ಆದರೆ ಇಂದು ಶಿಕ್ಷಕರಾದವರೇ ಮಟ್ಕಾ ಆಡುವುದು, ಇಸ್ಪೀಟ್ ಆಡುವುದು, ಹೆಂಡಕುಡಿಯುವುದು ಕಂಡುಬರುತ್ತಿದೆ. ಶಾಲೆಗೆ ಹೋಗುವುದಕ್ಕೆ ಮೊದಲು ಮಕ್ಕಳಿಗೆ

(ಶ್ರೀ ವಿ. ಎಂ. ಘಾಡಿ)

ಹೇಳಿಕೊಡುವ ಪಾಠವನ್ನು ತಯಾರು ಮಾಡಿ ಇಟ್ಟುಕೊಳ್ಳದಿದ್ದರೆ ಮಕ್ಕಳಿಗೆ ಯಾವ ರೀತಿ ಪಾಠ ಹೇಳಿಕೊಡಲು ಸಾಧ್ಯ? ಇದನ್ನು ಶಿಕ್ಷಕರು ಅರಿತುಕೊಳ್ಳಬೇಕು. ಧಾರವಾಡದಲ್ಲಿ ಒಂದು ಶಾಲೆಯಲ್ಲಿ ಮಕ್ಕಳಿಗೆ ಇಡೀ ವರ್ಷದಲ್ಲಿ ಯಾವ ಪಾಠವನ್ನೂ ಕಲಿಸಿಲ್ಲ. ಈ ರೀತಿಯಾದರೆ ಮಕ್ಕಳು ಪರೀಕ್ಷೆಯಲ್ಲಿ ಏನು ಬರೆಯುತ್ತಾರೆ ? ಇನ್ಸ್‌ಪೆಕ್ಷನ್ ಆಫೀಸರ್‌ಗಳು ಕಣ್ಮುಚ್ಚಿ ಕುಳಿತುಕೊಂಡಿರುತ್ತಾರೋ ಹೇಗೆ ಎಂದು ನಾನು ಸವಾಲು ಹಾಕುತ್ತೇನೆ.

ಮುಖ್ಯವಾಗಿ ಈಗಿರುವ ಮಿಡ್‌ಡೇಮೀಲ್ಸ್‌ನ್ನು ಸರ್ಕಾರದವರು ವಾಪಸ್ ತೆಗೆದುಕೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳಿಗೆ ದೇಶ ಪ್ರೇಮ ಎಂಬುದು ಬರುತ್ತಿಲ್ಲ. ಈ ಯೋಜನೆಯಿಂದ ಶಿಕ್ಷಕರು ಮತ್ತು ಅಧಿಕಾರಿಗಳು ದುರ್ವ್ಯವಹಾರಕ್ಕೆ ಇಳಿಯುವುದಕ್ಕೆ ಅವಕಾಶವಾಗಿದೆ. ಕೆಲವು ಶಿಕ್ಷಕರು ಇದರಿಂದಲೇ ಹಣ ಮಾಡಿಕೊಂಡು ಆರ್. ಸಿ. ಸಿ. ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಶಿಕ್ಷಕರಾದವರೇ ಈ ರೀತಿ ದುರ್ವ್ಯವಹಾರಕ್ಕೆ ಇಳಿದಿರುವುದರಿಂದ ನಮ್ಮ ಮಕ್ಕಳಲ್ಲಿ ದೇಶಪ್ರೇಮ ಕಡಿಮೆಯಾಗುತ್ತಿದೆ. ಶಾಲೆಯ ಬಗ್ಗೆ, ಊರಿನ ಬಗ್ಗೆ ರಾಜ್ಯದ ಬಗ್ಗೆ ದೇಶದ ಬಗ್ಗೆ ಪ್ರೇಮ ಇಲ್ಲವಾಗಿದೆ. ಸ್ವಾಮಿ ವಿವೇಕಾನಂದರು ಜಪಾನ್‌ದೇಶದಲ್ಲಿ ತಿರುಗಾಡುತ್ತಿರವಾಗ ಅವರಿಗೆ ಹಸಿವಾಯಿತು. ಹಸಿವಿನಿಂದ ಕಂಗಾಲಾಗಿ ಈ ಊರಿನಲ್ಲಿ ಊಟ ಕೂಡ ಸಿಗುವುದಿಲ್ಲ ಎಂದು ಅವರು ಹೇಳಿಕೊಂಡಾಗ, ಆ ಮಾತನ್ನು ಕೇಳಿಸಿಕೊಂಡು 11 ವರ್ಷದ ಒಂದು ಮಗು ಅವರಿಗೆ ಹೇಳಿತಂತೆ ನನಗೆ 5 ನಿಮಿಷ ಸಮಯ ಕೊಟ್ಟರೆ ಹಣ್ಣುಹಂಪಲು ತಂದುಕೊಡುತ್ತೇನೆಂದು. ಅದೇ ರೀತಿ ಮನೆಗೆ ಹೋಗಿ ಹದಿನೈದು ನಿಮಿಷಗಳಲ್ಲಿಯೇ ಊಟವನ್ನು ತಂದು ಕೊಟ್ಟಿತಂತೆ. ಇದರಿಂದ ಏನು ಕಂಡುಬರುತ್ತದೆಂದರೆ, ಆ ಮಗುವಿಗೆ ತನ್ನ ದೇಶದ ಬಗ್ಗೆ ಎಷ್ಟು ಪ್ರೇಮ ಇಟ್ಟುಕೊಂಡಿದೆ ಎಂಬುದು ಕಂಡುಬರುತ್ತದೆ. ಈ ತರಹದ ಭಕ್ತಿ, ಪ್ರೇಮ ನಮ್ಮ ಮಕ್ಕಳಲ್ಲಿ ಎಳ್ಳಷ್ಟೂ ಇಲ್ಲ. ಮಾರಲ್ ಅಂಡ್ ಸ್ಪಿರಿಚ್ಯುಯಲ್ ಎಜುಕೇಷನ್ ಇಂದು ಇಲ್ಲವಾಗಿದೆ. ಇನ್ನು ಮುಂದಾದರೂ ಸಹ ಉತ್ತಮವಾದ ಮಾರಲ್ ಎಜುಕೇಷನ್ ಕೊಡುವುದಕ್ಕೆ ಮತ್ತು ಕ್ರಾಫ್ಟ್ ಎಜುಕೇಷನ್ ಕಲಿಸುವುದಕ್ಕೆ ಒಂದು ಕಮಿಟಿಯನ್ನಾದರೂ ಮಾಡಿಕೊಂಡು ಆ ಮೂಲಕ ಸುವ್ಯವಸ್ಥಿತವಾಗಿ ಕಲಿಸುವುದಕ್ಕೆ ಏರ್ಪಾಡು ಮಾಡಬೇಕು. ಈಗಿನ ಪರಿಕ್ಷಾ ಪದ್ಧತಿ ಸಹ ಸರಿಯಾಗಿಲ್ಲ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಒಂದು ಸಲ ಪೇಪರನ್ನು ಪರೀಕ್ಷಕರು ಕರೆಕ್ಟ್ ಮಾಡಿದ ಮೇಲೆ ಮತ್ತೊಮ್ಮೆ ಮೇಲಿನ ಅಧಿಕಾರಿಗಳು ಅದನ್ನು ತಪಾಸ್ ಮಾಡಿ ನೋಡುವುದು ಒಳ್ಳೆಯದು. ಈ ರೀತಿ ಪುನರ್‌ಪರಿಶೀಲನೆ ಮಾಡುವ ಪದ್ಧತಿ ಇಲ್ಲದಿರುವುದರಿಂದ ಕಡಿಮೆ ನಂಬರ್ ಬಂದಿದ್ದರೂ ಸಹ ಜಾಸ್ತಿ ನಂಬರ್ ಹಾಕುವ ಕೆಲಸ ನಡೆಯುತ್ತಿದೆ. 13 ನಂಬರ್ ಬಂದಿದ್ದರೆ ಅದನ್ನು 18 ಮಾಡುತ್ತಾರೆ. ಇದನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಇದರ ಜೊತೆಗೆ ಇಂದು ಕನ್ನಡ ಭಾಷೆಗೆ ಅಷ್ಟೊಂದು ಮಹತ್ವ ಕೊಡುತ್ತಿಲ್ಲವಾದ್ದರಿಂದ ಅನೇಕ ವಿದ್ಯಾರ್ಥಿಗಳಿಗೆ ದುರ್ಯೋಧನ, ದುಶ್ಶಾಸನ, ಹರಿಶ್ಚಂದ್ರ ಮುಂತಾದ ಹೆಸರುಗಳನ್ನು ಸರಿಯಾಗಿ ಬರೆಯುವುದಕ್ಕೆ ಬರುತ್ತಿಲ್ಲ. ಶಿಕ್ಷಕರು ಸಹ ವಿದ್ಯಾರ್ಥಿಗಳಿಗೆ ಸರಿಯಾದ ಟ್ರೈನಿಂಗ್ ಕೊಡುತ್ತಿಲ್ಲ. ಇಂದು ಮಕ್ಕಳು ಮತ್ತು ಶಿಕ್ಷಕರು ದುರ್ವ್ಯವಹಾರದಲ್ಲಿದ್ದಾರೆ. ಇದನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಮುಖ್ಯವಾಗಿ ಈಗಿನ ಪರಿಕ್ಷಾ ಪದ್ಧತಿಯನ್ನು ಬದಲಾವಣೆ ಮಾಡಬೇಕು ಮತ್ತು ಲಾಂಗ್ವೇಜ್ ದೃಷ್ಟಿಯಿಂದ ಒಂದು ಸಲ ಕರೆಕ್ಟ್ ಆದ ಪೇಪರನ್ನು ತಪಾಸ್ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಸ್ವಾಮಿ ವಿವೇಕಾನಂದರು ಈ ರೀತಿ ಹೇಳಿದ್ದಾರೆ :—

> A poor teacher tells, an average teacher explains, a good teacher demonstrates, a great teacher inspires, A teacher may never truly teach unless he is still learing himself or herself. A lamp can never light another lamp unless it continues to burn its own flame.

ಈ ಒಂದು ಶಿಕ್ಷಣವು ವ್ಯವಹಾರ ದೃಷ್ಟಿಯಿಂದ ನಡೆಯುವುದು ಸರಿಯಲ್ಲವೆಂದು ಹೇಳುತ್ತೇನೆ. ಅಧ್ಯಾಪಕರು ತಮ್ಮ ಅನುಕೂಲಕ್ಕಾಗಿ ಈ ರೀತಿ ಮಾಡುವುದು ಸರಿಯಲ್ಲ. ಮುಖ್ಯವಾಗಿ ನಮ್ಮ ಮಕ್ಕಳಿಗೆ ಮಾರಲ್ ಅಂಡ್ ಸ್ಪಿರಿಚ್ಯುಯಲ್ ಎಜುಕೇಷನ್ ಬೇಕು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri H. S. SIDDAPPA.—Sir, I want to make a submission. Tomorrow happens to be the birth day of Dr. Ambedkar who gave us the Constitution. Even the Government of India is releasing a commemorative stamp tomorrow through the Postel Department. As such it is incumbent on our part to offer our respect to that great national leader and it is but right that we also observe a holiday tomorrow. Not only this House, Government offices also should obsesve a holiday and pay our respect to that great leader, —Dr. Ambedkar who gave us the Constitution.

Sri B. B. SAYANAK.—Tomorrow is second saturday and it is a holiday for Government.

5-30 P. M.

† **Sri C. M. ARUMUGHAM** (K.G.F.).—Sir, Maharashtra has declared the brith day of Dr. Ambedkar as a Government holiday and the Government India is also paying due respect to him by erecting his statue in the premises of Parliament. I therefore appeal to the Government to deelare April 14 as a public holiday and to instal the photo of Dr. Ambedkar in this House. It is the legitimate duty of the Government to do so because leaders like Mahathma Gandhi and Dr. Ambedkar are very few in our country. Fortunately, tomorrow happens to be Second Saturday which is holiday for Government servants, I therefore request that the Legislature may also observe it as a holiday in order to facilitate the members in participating in the birth day function of Dr. Ambedkar. He is the architect of the Indian Constitution and a staunch advocate of the oppressed and the depressed. He has sacrificed his life for the have nots in this country.

Mr. DEPUTY SPEAKER.—I have the highest admiration for Dr. Ambebkar because I have known him and met him twice. I have also read his wrtings. But I on my own, I cannot take a decision. Sombody on behalf of the Government must say-something.

Sri H. SIDDAVEERAPPA (Minister for Health).—As You said, Sir, I also knew Dr. Ambedkar personally. In fact, we were together in Constitution House. He is one of the greatest men but if only Sri Arumugham had broached this matter yesterday or little earlier, Government could have taken a decision. The Leader of the House is not there now and he is the person to take a decision in this matter. Therefore, I very much regret that I am not able to say anything in the matter.

Sri C. M. ARUMUGHAM.—The dicision is not of the Government alone; it is a decision of the House. The Leader of the House is always expected to be in the House and if for any reason he cannot be present or has to go outside the headquarters, he should make suitable arrangements so that somebody on behalf of the Government can take decisions. Otherwise it becomes difficult.

Sri H. SIDDAVEERAPPA.--That is really not the point. If they raise it suddenly, how can anybody say anything ?

Sri B. B. SAYANAK.—The House can take a decision.

Sri H. SIDDAVEERAPPA.—On the spur of the moment ?

Mr. DEPUTY SPEAKER.—The House can always take a decision after due and mature discussion and not all of a sudden.

Sri C. M. ARUMUGHAM.-This is not the first time that this matter is being raised. Even in the previous session this has been raised.

Mr. DEPUTY SPEAKER.—I fully agree with the sentiments expressed by the hon. Member. But all of a sudden I cannot allow a decision to be taken. The Leader of the House, the Leader of the Opposition and the leaders of various groups should come together, discuss this matter and come to a conclusion after due and mature discussion. Otherwise it becomes embarrassing for me. I now call upon Sri Arumugham to speak on the Education Demand.

Sri C. M. ARUMUGHAM.—I am speaking on a Demand which costs about Rs. 70 crores. I do not know whether there is any convention or law that 25 per cent of the State's Budget should be spent on Education. For the last two days so many hon. members have spoken on Education. They all say that our Education Minister is a good man. When a major number of people talk like that, we have to follow it. He is a most non-controversial minister in this cabinet. The other day somebody asked me, How is the Education Minister. I said he is good. I have not heard that he ever said 'no' to anybody Even if one were to say he wants Vidhana Soudha, he will say, we will consider. So good he is and I really compliment this old man.

Sri H. SIDDAVEERAPPA.—He is not old

Sri A. R. BADARINARAYANA.—I am young in spirit.

Sri C. M. ARUMUGHAM.—He is very good. But all the time he is saying that he will do. At no time he has said 'no'. But, I want him in course of time to implement the promises he makes. He has not yet become a controversial person and nobody says that he must be replaced. As a matter of fact he is given the responsibility to spend nearly one fourth of the Budget. Hon. members on both the sides have confidence in him. But spending is one thing and spending wisely and properly is one thing. Let him not adopt the policy of "men may come ; men may go but I shall remain for ever". Such an attitude should be changed. He has started Junior Colleges all over the State without proper buildings, staff and there are several complaints.

Sri A. R. BADARINARAYANA.—They will come in due course.

Sri C. M. ARUMUGHAM.—What I want you is to implement what all you say. That is my request to you. I have found him above board. Nobody can complain that he is communal, except of course once he went and addressed a meeting convened by a particular community.

Sri A.R. BADARINARAYANA.—I went and advised them to behave themselves,

Sri C. M. ARUMUGHAM.—From 1957 to 1962 myself and Sri Badarinarayan were sitting together, though he belonged to the Congress. Therefore I have seen him. But what the people will think is, he went to a meeting organised by a particular community. So, he must have self imposed restriction to attend such meetings.

I want him to have a little more control over his officers and the department.

I have so many points to speak on education, from nursery to college. Article 27 of the Constitution says that the State should not incur expenditure for promotion of interest of one section of the society. As our Minister knows, there are three universities in our State. I have spoken sometime ago about the Karnataka University. This university almost belongs to one particular community or caste. You must take action. This has been going on for several years and we cannot tolerate any more. From Vice Chancellor down to the peon's post it cannot be meant only for one family or one community- Our Education Minister must do some justice. We must have a uniform Act for all the universities functioning in the State. There is also another university started by Sri V.K.R.V. Rao.

Sri H SIDDAVEERAPPA.—It is an Institute.

Sri C. M. ARUMUGHAM.—To me it appears to be a university. I can call it as an university of V.K.R.V. Rao I am not asking any explanation from the Government but I am only putting to them that is it not a parallel university in Bangalore ? This institution of Dr. V.K.R. V. Rao came into existence during the time of the President's rule without considering its merit. Carlton House is a big buildnig How was it that a Government building was given to him ? This a matter about which our Minister should take action. Lakhs of money are granted to him by the Development Commissioner Sri G.V.K. Rao. This is a matter on which an investigation should be conducted and action taken by the Education Department. I have information which I can disclose to the House that staff has been appointed in this Institute on a fat Salary ranging from 1500 to Rs. 2,500 by the Head of this Institute and they belong to one commnnity.

When we spend money it must be distributed properly. Sir, this V.K.V. Rao's parallel University in Bangalore needs thorough probe. I want to know how that big Carlton house building was given to this University ? What were the circumstances under which this University

(SRI C. M. ARUMUGHAM)

was helped ? This a matter which shou d be taken cognizance of by the Hon. Minister for Education and take action to put an end to any communal institutions coming up in this State.

Sir, sometime back the so-called Director of School of Mines in K.G.F. was transferred. For the last 10 months this School is with out a Driector. This institution is not even brought under the control of Director of Technical Educati n. There is no control over this institution for the last 10 months. The Education Department which is so unweildy with so many officers, but no ofiicer takes a decision worth the the name. Every one throws the responsibility on the other. I want to know how l ng this institiution will be neglectep without bringing it under the control of Director of Technical Education ? An ordinary Assistant Engineer even without requisite qualifications is put in charge of this institution.

Another thing is we have a College that is K.G.F. First Grade College. For the last three months three is no Principal and the Governing Council of the College has also not met for the last three months. When the Government is giving grants to this institution, it must also satisfy whether it is functioning properly. There is tripartite management by the Municipality, management of Bharath Gold Mines and the workers of Gold Mines. The Deputy Commissiner is the Chairman only because of his position, but he cannot take interest in the affairs of this institution effectively. The Principal was transferred and he became the Director of Mysore Minerals. Sir, even these appointments of Lecturers, Directors etc., have all been done on political influence. Some politician sitting at Delhi influences here. I want that such a thing should not happen. I wantthe Hon Mnister for Education to purify this department. I have great regard for Mr. Badrinarayan because he is a man with some discipline, but I want he should purify the Department any do justice to all the educationa! institutions. I have written letters to the Department saying that a school in my constituency is running without proper buildings ; classes are being conducted in bathrooms. I want him to do justice to K.G.F. area.

With these words, I conclude.

MR. DEPUTY SPEAKER.—There are some more hon. members to speak They would have come prepared to speak. I don't want to disappoint them and therefore I want to extend the time.

† ಶ್ರೀ ಎಂ. ವಿ. ರುದ್ರಪ್ಪ (ಹೊಸದುರ್ಗ).—ಮಾನ್ಯ ಉಪಾಧ್ಯಕ್ಷರೇ, ಈ ದಿನ ಈ ಸದನದ ಮುಂದೆ ಮಾನ್ಯ ವಿದ್ಯಾಮಂತ್ರಿಗಳು ತಂದಿರತಕ್ಕ ವಿದ್ಯಾ ಇಲಾಖೆಯ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕಲವು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊಟ್ಟಮೊದಲನೆಯದಾಗಿ ನಾನು ಹೇಳುವುದೇನೆಂದರೆ ಈ ರಾಜ್ಯದಲ್ಲಿ ಎಲ್ಲಿ ಪ್ರಾಥಮಿಕ ತರಗತಿಗಳು ಅವಶ್ಯವಿದೆಯೋ ಅಲ್ಲಿ ಹೊಸದಾಗಿ ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡಿ ತೆರೆಯಬೇಕಾಗಿದೆ. ಹೆಚ್ಚುಹೆಚ್ಚಾಗಿ ಈಗ ಹೊಸದಾಗಿ ಪ್ರಾಥಮಿಕಶಾಲೆ

ಗಳನ್ನು ತಕ್ಷಣ ತೆರೆಯುವುದಕ್ಕೆ ಹೆಚ್ಚಿಗೆ ಹಣವನ್ನು ಮಂಜೂರು ಮಾಡಿ ವಿದ್ಯಾ ಬೆಳವಣಿಗೆಗೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ವಿದ್ಯಾಮಂತ್ರಿಗಳನ್ನು ಪ್ರಾರ್ಥನೆಮಾಡುತ್ತೇನೆ. ತಾಲ್ಲೂಕಾ ಲೆವಲ್‌ನಲ್ಲಿ ಅನೇಕ ಬ್ರಾಂಚ್‌ಗಳಿವೆ. ಆ ಬ್ರಾಂಚ್ ಸ್ಕೂಲುಗಳಲ್ಲಿ ಉಪಾಧ್ಯಾಯರುಗಳೇ ಇಲ್ಲ. ಆದ್ದರಿಂದ ಅಲ್ಲಿಗೆ ಪ್ರತಿಯೊಂದು ಬ್ರಾಂಚಿಗೆ ಒಬ್ಬೊಬ್ಬ ಶಾಶ್ವತವಾಗಿ ಉಪಾಧ್ಯಾಯರನ್ನು ನೇಮಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಇಲ್ಲದಿದ್ದರೆ ಹಳ್ಳಿಗಳ ಕಡೆ ಬಹಳ ತೊಂದರೆಯಾಗುತ್ತದೆ. ಇನ್ನೊಂದು ಸಲಹೆ ಶಾಲಾ ಕಟ್ಟಡಗಳ ಕೊರತೆ ಬಹಳ ಜಾಸ್ತಿಯಾಗಿದೆ. ನಾವು ಹಳ್ಳಿಗಳ ಕಡೆ ಹೋದ ಕಡೆಗಳಲ್ಲಿ ಎಷ್ಟೇ ಭಾಷಣಗಳನ್ನು ಮಾಡಿದರೂ ಕೂಡ ಶೇಕಡ 80ರಷ್ಟು ಇರುವ ರೈತರಿಗೆ ದಿನಕ್ಕೆ ಕೇವಲ 12 ಅಣೆ ಮಾತ್ರ ಆದಾಯವಿದ್ದರೆ ಅಂತಹವರು ಶಾಲಾ ಕಟ್ಟಡಗಳಿಗೆ ಏನು ಸಹಾಯಮಾಡಬಲ್ಲರು ಎಂಬುದಾಗಿ ನಾನು ಸರ್ಕಾರದವರನ್ನು ಕೇಳುತ್ತೇನೆ. ಶಾಲಾ ಕಟ್ಟಡಗಳಿಗೆ ಇದುವರೆಗೆ ಒದಗಿಸಿರುವ ಹಣ ಬಹಳ ಕಡಿಮೆಯಾಗಿರುವುದರಿಂದ, ಅದರಲ್ಲಿಯೂ ಈಗ ಕೊಡುತ್ತಿರುವ ಎರಡೂವರೆ ಸಾವಿರ ರೂಪಾಯಿಗಳಿಂದ ಏನೂ ಮಾಡುವುದಕ್ಕೆ ರೈತರಿಗೆ ಆಗದೇ ಇರುವುದರಿಂದ ಮತ್ತು ರೈತರು ಹೆಚ್ಚಿಗೆ ಈ ಬಾಬಿಗೆ ಹಣ ಕೊಡುವುದಕ್ಕೂ ಆಗದೇ ಇರುವುದರಿಂದ ಸರ್ಕಾರದವರು ಹೆಚ್ಚಿಗೆ ಈ ಬಾಬಿಗೆ ಗ್ರಾಂಟ್ ಕೊಡಬೇಕು. ಏಕೆಂದರೆ ಪಂಚಾಯತಿಯಲ್ಲಿಯೇ ಆಗಲೀ ಅಥವಾ ತಾಲ್ಲೂಕ್‌ಬೋರ್ಡಿನಲ್ಲಿಯೇ ಆಗಲೀ ಹಣ ಅಷ್ಟಾಗಿ ಇರುವುದಿಲ್ಲ. ಈಗ ಸರ್ಕಾರದವರು ಏನೊಂದು ಧನ ಸಹಾಯವನ್ನು ಕೊಡುತ್ತಿದ್ದಾರೆ, ಅದನ್ನೇ ಇನ್ನೂ ಸ್ವಲ್ಪ ಜಾಸ್ತಿ ಮಾಡಿ ಈ ಹಳ್ಳಿಗಾಡಿನ ಜನರಿಗೆ ಸಹಾಯ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಇಂಟೀರಿಯರ್ ಪಾರ್ಟ್‌ನಲ್ಲಿ ಉಪಾಧ್ಯಾಯರಿಗೆ ವಾಸಕ್ಕೆ ಮನೆಗಳು ಸಿಕ್ಕದೆ ಅಲ್ಲಿಗೆ ಯಾರನ್ನು ವರ್ಗ ಮಾಡಿದರೂ ಹೋಗುತ್ತಿಲ್ಲ. ಇದರಿಂದ ಆ ಗ್ರಾಮಗಳ ಮಕ್ಕಳಿಗೆ ಬಹಳ ತೊಂದರೆಯಾಗಿದೆ. ಇಂಥ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಸರ್ಕಾರದವರು ಈಗಿನಿಂದಲೇ ಪ್ರತಿ ವರ್ಷದ ಬಡ್ಜೆಟ್ಟಿನಲ್ಲೂ ಈ ಬಾಬಿಗೋಸ್ಕರವಾಗಿ ಇಂತಿಷ್ಟು ಹಣ ಎಂದು ರಿಜರ್ವ್ ಮಾಡುತ್ತಾ ಬರುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ.

6-00 P.M.

ಇನ್ನು ನಮ್ಮ ಹೊಸದುರ್ಗದಲ್ಲಿ ಒಂದು ನರ್ಸರಿ ಸ್ಕೂಲು ಕಳೆದ 8 ವರ್ಷಗಳಿಂದ ಕೆಲಸ ಮಾಡುತ್ತಿದೆ. ಅದಕ್ಕೆ ಇಲ್ಲಿಯವರೆಗೂ ಒಂದು ವರ್ಷದ ಗ್ರಾಂಟ್ ಸಹಿತ ಬಂದಿಲ್ಲ. ಈ ವಿಚಾರದಲ್ಲಿ ಸರ್ಕಾರಕ್ಕೆ ಅನೇಕ ಮನವಿಗಳನ್ನು ಸಲ್ಲಿಸಿದ್ದಾಯಿತು. ನಾನೇ ಖುದ್ದಾಗಿ ಮಾನ್ಯ ವಿದ್ಯಾ ಮಂತ್ರಿಗಳಿಗೆ ಒಂದು ಪತ್ರವನ್ನು ಸಹಾ ಬರೆದಿದ್ದೇನೆ. ಏನಾದರೂ ಅದಕ್ಕೆ ದೊರೆಯಬೇಕಾದ ಗ್ರಾಂಟ್ ಇಲ್ಲಿಯವರೆಗೂ ಕಳೆದ 8 ವರ್ಷಗಳ ಗ್ರಾಂಟ್ ಹಾಗೇ ನಿಂತು ಹೋಗಿದೆ. ಇದನ್ನು ಮಾನ್ಯ ಸಚಿವರು ಕೂಡಲೆ ಆ ಬಡಮಕ್ಕಳ ಹಿತದೃಷ್ಟಿಯಿಂದ ಬರುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಇತ್ತೀಚೆಗೆ ಸರ್ಕಾರದವರು ಎಲ್ಲಾ ಕಡೆಗಳಲ್ಲೂ ಹೈಸ್ಕೂಲುಗಳನ್ನು ತೆರೆಯುವುದಕ್ಕೆ ಒಂದು ಹೆಚ್ಚಿನ ಅವಕಾಶವನ್ನು ಒದಗಿಸುತ್ತಿದ್ದಾರೆ. ಇತ್ತೀಚೆಗೆ ನಮ್ಮ ಹೊಸದುರ್ಗ ತಾಲ್ಲೂಕಿನಲ್ಲೂ ಒಂದು ಹೈಸ್ಕೂಲನ್ನು ಹೊಸದಾಗಿ ಸ್ಥಾಪನೆ ಮಾಡಲಾಯಿತು. ಆದರೆ ಅಲ್ಲಿ ಆ ಶಾಲೆಯ ಆಡಳಿತದ ಬಗ್ಗೆ ಇರತಕ್ಕ ಕಮಿಟಿಯಲ್ಲಿ ಒಂದೇ ಜಾತಿಯವರು ಸೇರಿಕೊಂಡು ಅವರ ಒಂದು ಜಾತಿಗೆ ಸೇರಿದ ಉಪಾಧ್ಯಾಯರುಗಳನ್ನೇ ಅಲ್ಲಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಿದ್ದಾರೆ ಇಂಥಾದ್ದನ್ನು ಸರ್ಕಾರದವರು ತಪ್ಪಿಸಬೇಕು. ಇನ್ನು ಮುಂದೆ ಇಂಥ ಹೊಸಶಾಲೆಗಳನ್ನು ತೆರೆಯುವ ಸಂದರ್ಭ ಬಂದಾಗ ಸರ್ಕಾರದವರು ಅವರಲ್ಲಿ ಒಂದು ಕ್ಲಾಜನ್ನು ಸೇರಿಸಿ ಆ ಶಾಲೆಯ ಆಡಳಿತದ ಬಗ್ಗೆ ನೇಮಕವಾಗತಕ್ಕ ಕಮಿಟಿಯಲ್ಲಿ ಎಲ್ಲಾ ಜಾತಿಯವರಿಗೂ ಪ್ರಾತಿನಿಧ್ಯ ಇರುವುದಕ್ಕ ಅವಕಾಶವಿರಬೇಕೆಂಬುದನ್ನು ಸರ್ಕಾರದವರು ಕಡ್ಡಾಯ ಮಾಡಿದರೆ ಇಂಥ ಅನಾನುಕೂಲ, ಅನ್ಯಾಯಗಳನ್ನು ಸ್ವಲ್ಪಮಟ್ಟಿಗಾದರೂ ತಡೆಗಟ್ಟಲು ಸಾಧ್ಯವಾಗಬಹುದು. ಅದೇ ಕಮಿಟಿಯಲ್ಲಿ 18 ಪರ್ಸೆಂಟ್ ಹರಿಜನ ಗಿರಿಜನರ ಪ್ರಾತಿನಿಧ್ಯಕ್ಕೂ ಅವಕಾಶವಿರುವಂತೆ ಒಂದು ಪ್ರಾವಿಜನ್ನನ್ನು ಅಡಕ ಮಾಡುವುದು ಅತ್ಯವಶ್ಯಕ. ಮತ್ತು ನಾನೀಗ ಹೇಳಿದ ಶಾಲೆಯ ಕಮಿಟಿಯನ್ನು ಕೂಡಲೆ ಬದಲಾಯಿಸಿ ಅದನ್ನು ರೀಕಾನ್‌ಸ್ಟಿಟ್ಯೂಟ್ ಮಾಡಿ ಅದರಲ್ಲಿ ಎಲ್ಲಾ ಕೋಮುಗಳಿಗೂ ಪ್ರಾತಿನಿಧ್ಯವಿರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಇನ್ನು ನಮ್ಮ ಹೊಸದುರ್ಗ ತಾಲ್ಲೂಕಿನಲ್ಲಿ 11 ಹೈಸ್ಕೂಲುಗಳು ಕೆಲಸಮಾಡುತ್ತಿವೆ. ವರ್ಷಂ ಪ್ರತಿ 500ಕ್ಕೂ ಹೆಚ್ಚು ಮಂದಿ ಎಸ್.ಎಸ್.ಎಲ್.ಸಿ.

(ಶ್ರೀ ಎಂ. ವಿ. ರುದ್ರಪ್ಪ)

ಪಬ್ಲಿಕ್ ಎಗ್ಸಾಮಿನೇಷನ್ನಿಗೆ ಕುಳಿತುಕೊಂಡು ಶೇಕಡ 50ಕ್ಕೂ ಮೇಲ್ಪಟ್ಟು ಉತ್ತೀರ್ಣರಾಗುತ್ತಾರೆ, ಆದುದರಿಂದ ನನ್ನ ತಾಲ್ಲೂಕಿಗೆ ಒಂದು ಜೂನಿಯರ್ ಕಾಲೇಜನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಮೇಲಾಗಿ ಅದು ಮೂಲೆಕಟ್ಟಿನಲ್ಲಿರತಕ್ಕ ಪ್ರದೇಶ. ಅಲ್ಲಿಯ ಹುಡುಗರು ಬಡವರು. ಅವರು ಬೇರೆ ಕಡೆಗೆ ಹೋಗಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಿಲ್ಲ. ಅದಕ್ಕಾಗಿ ಅಲ್ಲಿಗೆ ಒಂದು ಜೂನಿಯರ್ ಕಾಲೇಜನ್ನು ಕೊಡಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಸ್ವಾಮಿ ಅಧ್ಯಕ್ಷರೇ, ತಾವು ಕೊಟ್ಟಿರತಕ್ಕ ಅತ್ಯಲ್ಪವಾದ ಕಾಲಾವಧಿಯನ್ನು ನಾನು ಅರಿತು, ಯಾರಾದರೂ ಹೊರಗಡೆ ಇರತಕ್ಕ ಜನರು ಏನು ಸ್ವಾಮಿ, ತಾವು ಸಭೆಯಲ್ಲಿ ಏನೇನು ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದಿರಿ ಎಂದು ಕೇಳಿದರೆ, ಅವರಿಗೆ ನಾನು ಏನಾದರೂ ಮೂರು ಮಾತುಗಳನ್ನು ಹೇಳಬೇಕಾದ್ದಿದೆಯಲ್ಲ ಎಂಬ ದೃಷ್ಟಿಯಿಂದ ಈಗ ಮಾತನಾಡಬೇಕಾಗಿದೆ.

ನಮ್ಮ ಮಾನ್ಯ ವಿದ್ಯಾ ಸಚಿವರು ಚಿನ್ನದಂಥಾ ವ್ಯಕ್ತಿಗಳು. ಅವರ ಶೀಲ, ಅವರ ನಡತೆ, ಅವರ ಸ್ವಚ್ಛತೆಗಳನ್ನು ಎಲ್ಲರೂ ಮೆಚ್ಚಿಕೊಳ್ಳಬೇಕು ಎಂದು ನಾನು ಹೊರಗಡೆ ಜನರಿಗೆ ಹೇಳಿದಾಗ ಅವರು ಹಾಗಾದರೆ ಇನ್ನುಳಿದ ಮಂತ್ರಿಗಳೆಲ್ಲರೂ ಲಂಚಕೋರರೇನು ಎಂದು ಅವರು ಕೇಳಿದರೆ ಅದಕ್ಕೆ ನನ್ನ ಒಂದೇ ಒಂದು ಉತ್ತರ 'ಎಸ್'.

ಇನ್ನು ಎರಡನೆಯದಾಗಿ ನಮ್ಮ ವಿದ್ಯಾಮಂತ್ರಿಗಳು ಕೆಲಸದಲ್ಲಿ ಇವರ ದಕ್ಷತೆ, ಇವರ ಧೈರ್ಯ ಸ್ಥೈರ್ಯಗಳು, ಇವರಲ್ಲಿರಕ್ಕ ಪ್ರಾಮಾಣಿಕತೆ, ಗಂಡಸರೋಪಾದಿಯಲ್ಲಿ ಕೆಲಸ ಮಾಡತಕ್ಕ ಪ್ರವೃತ್ತಿ ಇವರಲ್ಲಿದೆ ಎಂದರೆ ಆಗ ಹೊರಗಡೆ ಇರತಕ್ಕವರು ಹಾಗಾದರೆ ಇನ್ನು ಉಳಿದ ಮಂತ್ರಿಗಳಾದರೂ ಅಷ್ಟು ದಕ್ಷರಲ್ಲವೇ ಎಂದಾಗ, ಅದಕ್ಕೆ ನನ್ನ ಒಂದೇ ಉತ್ತರ 'ನೋ' ಎಂದು.

ಇನ್ನು ಮೂರನೆಯದಾಗಿ ಇದನ್ನೆಲ್ಲಾ ನಿಮ್ಮ ಪಕ್ಷ ಸಹಿಸುತ್ತದೆಯೇ ಎಂದರೆ ಅದಕ್ಕೆ ನನ್ನ ಉತ್ತರ 'ನೋ' ಎಂದು. ಹಾಗಾದರೆ ಇದನ್ನೆಲ್ಲಾ ನಾಳೆ ಬರತಕ್ಕ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡುಗಳ ಚುನಾವಣೆಯಲ್ಲಿ ಸಂಪಡಿಸೋಣವೇ ಎಂದು ಅವರು ಕೇಳಿದರೆ, ಅದಕ್ಕೆ ನನ್ನ ಉತ್ತರ 'ಆಲ್‌ರೈಟ್' ಅಷ್ಟೇ. ಹೀಗೆ ಅವರಿಗೆ ಏನಾದರೂ ಮೂರು ಮಾತುಗಳನ್ನು ಹೇಳಿದಂತಾಯಿತು. ಆ ಮೂರು ಮಾತುಗಳು ಎಂದರೆ, 'ಎಸ್,' 'ನೋ' ಮತ್ತು 'ಆಲ್‌ರೈಟ್'.

ನಾನು ಇಷ್ಟನ್ನು ಹೇಳಿ ನನ್ನ ಮುಂದಿರತಕ್ಕ ವಿದ್ಯಾ ಖಾತೆಯಲ್ಲಿ ನನಗೆ ಕಂಡು ಬಂದಂಥ ನ್ಯೂನತೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಅಧ್ಯಕ್ಷರೇ ನನ್ನದೊಂದು ಪಾಯಿಂಟ್ ಆಫ್ ಆರ್ಡರು. ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರು ತಾಲ್ಲೂಕ್ ಬೋರ್ಡುಗಳ ಚುನಾವಣೆ ವಿಚಾರ, ಪಕ್ಷದ ವಿಚಾರಗಳನ್ನು ಎತ್ತಿಕೊಂಡು ಒಂದು ನಾಟಕದೋಪಾದಿ ಮಾತನಾಡುವುದಕ್ಕೆ ಹೊರಟಿದ್ದಾರೆ. ಆದರೆ ಈಗ ಸಭೆಯ ಮುಂದೆ ಚರ್ಚೆಗಿರುವುದು ವಿದ್ಯಾಭ್ಯಾಸದ ಬೇಡಿಕೆಯನ್ನು ಅನುಮೋದಿಸುವುದು. ಹಾಗಿರುವಾಗ ಅವರು ಮಾತನಾಡುತ್ತಿರುವುದು ಸರಿಯೇ ಎಂದು ಕೇಳುತ್ತೇನೆ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ, ಅಧ್ಯಕ್ಷರೇ, ನಾನಲ್ಲ ಇಲ್ಲಿ ನಾಟಕವಾಡುವುದಕ್ಕೆ ಬಂದಿರುವುದು. ಇತ್ತೀಚೆಗೆ ದೇಶದಲ್ಲಿ ಈ 'ಗರೀಬೀ ಹಟಾವೋ' ಬಗ್ಗೆ ಒಂದು ನಾಟಕದ ಕಂಪನಿ ತಯಾರಾಗಿದೆ. ಅಲ್ಲದೆ ಈ ವಿದ್ಯಾ ಬೇಡಿಕೆಯಲ್ಲಿ ನಾಟಕ ಅಕ್ಯಾಡೆಮಿಗೂ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಆದರೆ ಆ 'ಗರಿಭೀ ಹಟಾವೋ' ನಾಟಕದ ಕಂಪನಿ ಬೇರಾವುದು ಅಲ್ಲ, ಇಲ್ಲೇ, ನನ್ನ ಕಣ್ಣು ಎದುರಿಗೇ ಇಲ್ಲಿಯೇ ಕುಳಿತಿರತಕ್ಕ ಈ ನಮ್ಮ ಎದುರು ಪಕ್ಷದವರೇ. ಅಂದರೆ ಆಡಳಿತ ಪಕ್ಷದವರೇ ಆ 'ಗರೀಭೀ ಹಟಾವೋ' ನಾಟಕವನ್ನು ಅಭಿನಯಿಸತಕ್ಕ ಕಂಪನಿಯವರು ಅಂದರೆ ಅದು ತಪ್ಪಾಗಲಾರದು. ಆದುದರಿಂದ ಆ ನಾಟಕ ಕಂಪನಿಯವರು ನನಗೆ ನಾಟಕವಾಡುತ್ತಾರೆ ಎಂದು ಹೇಳುತ್ತಿರುವುದು ಸರಿಯಾದ್ದಲ್ಲ.

ಮಕ್ಕಳು ಅಂದರೆ ದೇವರ ಸಮಾನ. ಅಂಥ ಎಳೆಯ ಶಿಶುಗಳನ್ನು ರಾ-ಮೆಟೀರಿಯಲ್‌ಸನ್ನು ನಾವು ಒಳ್ಳೆಯ ಫಿನಿಷ್ಡ್ ಪ್ರಾಡೆಕ್ಟ್ ಮಾಡಿಕೊಡಿ, ನಿಮ್ಮ ಫ್ಯಾಕ್ಟರಿಯಲ್ಲಿ ಎಂದು ಹೇಳಿ ಈ ಫ್ಯಾಕ್ಟರಿಯೋಪಾದಿಯಲ್ಲಿರತಕ್ಕ ಶಾಲೆಗಳಿಗೆ ಹಾಕಿದರೆ ನಾಳೆ ಫಿನಿಷ್ಡ್ ಪ್ರಾಡಕ್ಟಾಗಿ ಇವರು ಹೊರಗೆ ಬಂದಾಗ ಇವರಲ್ಲಿ ಗಂಡಸರು ಯಾರು ಹೆಂಗಸರು ಯಾರು ಎಂಬುದನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಾಗದಂತಹ ರೀತಿಯಲ್ಲಿ ಹೊರಗೆ ಬರುತ್ತಾರೆ. ಮಕ್ಕಳನ್ನು ಕಾಲೇಜು ವ್ಯಾಸಂಗಕ್ಕೆ ಹಾಕುವುದು ಇದಕ್ಕೇನೇನು ? ಅಲ್ಲಿ ನಡೆಯುತಕ್ಕ ದಿನಚರಿ ವಿದ್ಯಮಾನಗಳನ್ನು ವಿದ್ಯಾಸಚಿವರು ಪರಿಶೀಲನೆ ಮಾಡಿದ್ದಾರೆಯೇ ? ಹಿಂದಿನಿಂದಲೂ ಅನೇಕರು ಈ ವಿದ್ಯಾ ಇಲಾಖೆಯನ್ನು ಇತರೇ ಇಲಾಖೆಗಳೊಂದಿಗೆ ತುಲನೆ ಮಾಡಿ ದೇಶದಲ್ಲಿ ಈ ವಿದ್ಯಾ ಇಲಾಖೆ ಒಂದನ್ನು ಬಿಟ್ಟರೆ ಬೇರೆಲ್ಲಾ ಇಲಾಖೆಗಳೂ ಲಂಚಕೋರ ಇಲಾಖೆಗಳೇ ಎಂದು ಹೇಳುತ್ತಿದ್ದರು ಆದರೆ ಈಗಿನ ಪರಿಸ್ಥಿತಿಯೇನು? ಗ್ರಾಮದಲ್ಲಿ ಮಕ್ಕಳು ಬೆಣ್ಣೆಯನ್ನು ತೆಗೆದುಕೊಂಡು ಹೋಗಿ ಕೊಟ್ಟರೆ ಅವನು ಒಳ್ಳೆಯ ಹುಡುಗ. ಎಂಥಾ ಕಾಲ ಬಂತಪ್ಪಾ ? ನನ್ನ ವ್ಯಸನವನ್ನು ಇಲ್ಲಿ ಯಾರಿಗೆ ಹೇಳಿಕೊಳ್ಳಲಿ ? ಕಾಲೇಜುಗಳಲ್ಲಿ ವ್ಯಾಸಂಗ ಮಾಡತಕ್ಕ ಹುಡುಗರೆಲ್ಲಾ ಉದ್ದವಾದ ಕೂದಲುಗಳನ್ನು ಬೆಳೆಸುವುದರಲ್ಲೇ ಅವರ ಜಾಣತನವೆಲ್ಲಾ ಬಾಡಿಹೋಗುತ್ತಿದೆ. ಹೀಗಾದರೆ ನಾವು ಗರೀಬೀ ಹಟಾವೋ ಮಾಡಿದಂತೆಯೇ. ಕಾಲೇಜುಗಳಲ್ಲಿ ಪಾಠಮಾಡತಕ್ಕ ಕಡೆ ಎಲ್ಲಿ ಹೆಣ್ಣುಮಕ್ಕಳು ಅಭ್ಯಾಸ ಮಾಡುತ್ತಿದ್ದಾರೋ ಅಲ್ಲಿ ಬೋಧಿಸತಕ್ಕ ಪ್ರೊಫೆಸರುಗಳು ದುರ್ನಡತೆಯಲ್ಲಿ ಧುರೀಣರಂತೆ. ಇದು ಯಾರಿಗೆ ಗೊತ್ತಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಏನು ಹೇಳಿದ್ದು ಗೊತ್ತಾಗಲಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—''ಜಗಾತುಗೋ ಬಡ್ಡಿಗೆ ಮಗು ತೂಗುವುದು ಗೊತ್ತಿಲ್ಲವೇ'' ಅಂದಹಾಗೆ ತಮಗೆ ಗೊತ್ತಿಲ್ಲದ್ದು ಯಾವುದು ? ಆದರೆ ತಾವೀಗ ಅಧಿಕಾರದ ಅಂಧಕಾರದಲ್ಲಿದ್ದೀರಾ ತಾವು ಭೀಷ್ಮಾಚಾರ್ಯರಂತೆ ಇರಬೇಕಾಗಿದ್ದ ವ್ಯಕ್ತಿಗಳು. ಆದರೆ ಯಾವಾಗ ತಾವೂ ಮತ್ತು ನಮ್ಮ ಮುಖ್ಯಮಂತ್ರಿಗಳು ಈ ಕ್ಯಾಬಿನೆಟ್ಟನಲ್ಲಿ ಕಾಲಿಟ್ಟರೋ ಅಗಲೇ ಇದರಲ್ಲಿ ರಾಹು ಕೇತುಗಳು ಪ್ರವೇಶಮಾಡಿದಂತಾಗಿ, ಮೈಸೂರಿನ ಜನತೆಗೆ ಲಭಿಸುತ್ತಿದ್ದ ಅನುಕೂಲಗಳಿಗೆಲ್ಲಾ ಧಕ್ಕೆಯನ್ನು ತಂದಿರಿ. ಈ ಪಾಪದ ಹೊರೆ ನಿಮ್ಮ ತಲೆಯ ಮೇಲಿದೆ. ದೇಶದಲ್ಲಿ ಉಂಟಾಗಿರತಕ್ಕ ಅನಾನುಕೂಲ, ಅನ್ಯಾಯ ಅಕ್ರಮಗಳಿಗೆಲ್ಲಾ ನೀವೇ ಜವಾಬ್ದಾರರು. ಎಲ್ಲಾ ಮಂತ್ರಿಗಳೂ ಜನರನ್ನು ರಕ್ಷಣೆಮಾಡುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಅವರು ಜನರ ಕಷ್ಟವನ್ನು ಸರಿಯಾಗಿ ಗಮನಿಸಿ ಸೂಕ್ತ ಕ್ರಮ ಕೈಗೊಳ್ಳದೆ ಹೋದರೆ ರಾಜ್ಯವು ಎಲ್ಲಿಗೆ ಹೋಗುವುದೆಂಬುದನ್ನು ಯೋಚನೆ ಮಾಡಬೇಕು. ಅವರು ಭೀಷ್ಮಾಚಾರ್ಯರಿದ್ದ ಹಾಗೆ, ಇಲ್ಲಿ ಕೃಪ ದ್ರೋಣ, ಅಶ್ವತ್ಥಾಮ ಎಲ್ಲಾ ಇದ್ದಾರೆ. ಈ ರಾಜ್ಯದಲ್ಲಿರುವ ಮಂತ್ರಿಮಂಡಲವನ್ನು ಕಿತ್ತುಹಾಕಿದರೆ ಈ ದೇಶ ಉಳಿಯುವುದೇ! ವಿದ್ಯಾಮಂತ್ರಿಗಳು ಸೌಜನ್ಯಪುರುಷರು. ಮುಗ್ಧ ಮಕ್ಕಳನ್ನು ಅವರ ಕೈಗೆ ಕೊಟ್ಟಿರುವಾಗ ಆ ಮಕ್ಕಳ ಬಗ್ಗೆ ಸರಿಯಾದ ಗಮನ ಕೊಡಬೇಡವೇ ? ಸ್ವಶಕ್ತಿಯಿಂದ ಸ್ವಾಭಿಮಾನದಿಂದ ತಮ್ಮ ಕಾಲಮೇಲೆ ತಾವು ನಿಂತುಕೊಳ್ಳಲು ಅವಕಾಶ ಮಾಡಬೇಕು. ವಿದ್ಯಾಭ್ಯಾಸ ಮಾಡಿದ ಮೇಲೆ ಕೆಲಸಬೇಕೆಂದು ಮಂತ್ರಿಗಳು ಮತ್ತು ಶಾಸಕರ ಮನೆ ಬಾಗಿಲಿಗೆ ಬರುವಂತಾಗಬಾರದು. ಯಾರು ದೇಶಕ್ಕೆ ಗೌರವ ತಂದು ಕೀರ್ತಿಪಾತ್ರರಾಗಬೇಕೋ ಅವರು ವಿದ್ಯಾ ಸಂಸ್ಥೆಗಳಿಗೆ ಮತ್ತು ತಂದೆ ತಾಯಿಗಳಿಗೆ ಕಂಟಕಪ್ರಾಯರಾಗುತ್ತಿದ್ದಾರೆ, ಯೂನಿವರ್ಸಿಟಿಯಿಂದ ಬಂದಮೇಲೆ ಅವರು ಈ ರೀತಿ ಆಗುತ್ತಿದ್ದಾರೆ. ಆದುದರಿಂದ ಸಲಹೆ ಮಾಡುವುದು ವಿದ್ಯಾಭ್ಯಾಸದ ಪ್ರಗತಿಯ ಬಗ್ಗೆ ನಾಲ್ಕಾರು ಜನರ ಒಂದು ಸಮಿತಿ ಮಾಡಿ ವಿದ್ಯಾಭ್ಯಾಸ ಪದ್ಧತಿ ದೇಶದಲ್ಲಿ ಹೇಗಿರಬೇಕು ಎಂದು ಅವರು ಆಲೋಚನೆಮಾಡಿ ವರದಿ ಕೊಡುವಂತೆ ಮಾಡಬೇಕು. ಹೆಚ್ಚು ಹಣ ಖರ್ಚಾದರೂ ಚಿಂತೆಯಿಲ್ಲ, ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಉತ್ತಮ ಪ್ರಜೆಗಳಾಗಲು ತಕ್ಕ ವಿದ್ಯಾಭ್ಯಾಸ ಕೊಡಬೇಕು ಎಂದು ಸೂಚಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಡಿ. ಹಲಗೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ವಿದ್ಯಾ ಮಂತ್ರಿಗಳು ಮಂಡಿಸಿರುವ ಸುಮಾರು 67 ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಂತೋಷದಿಂದ ಒಪ್ಪುತ್ತೇನೆ. ಇಷ್ಟು ಹಣ ಸಾಲದು, 100 ಕೋಟಿ ರೂಪಾಯಿಗಳ ಬೇಡಿಕೆಯಾದರೂ ಇಟ್ಟಿದ್ದರೆ ಚೆನ್ನಾಗಿತ್ತು ಎಂದು ಹೇಳಿ ಕೆಲವು ಮಾತುಗಳನ್ನು ಹೇಳುತ್ತೇನೆ. ವಿದ್ಯಾ ಇಲಾಖೆಯಲ್ಲಿ ಖರ್ಚಿದೆ, ಲಾಭವಿಲ್ಲ ಎಂದು ಕೆಲವರು ಹೇಳುವುದುಂಟು. ಲಾಭ ಬರುವುದು ದೇಶದ ಸತ್ಪ್ರಜೆ ತಯಾರಿಸುವುದರಲ್ಲಿ, ನಾಗರೀಕತೆಯನ್ನು ಬೆಳೆಸುವುದರಲ್ಲಿ. ಬೌದ್ಧಿಕ ಮತ್ತು ದೈಹಿಕ ಶಕ್ತಿಗಳೆರಡನ್ನೂ ಕೂಡ ಬೆಳೆಸುವ ಇಲಾಖೆ ಬಲಯುತವಾಗಿರಬೇಕು, ಎಷ್ಟು ಹಣ ಇದಕ್ಕೆ ಖರ್ಚುಮಾಡಿದರೂ ಚಿಂತೆಯಿಲ್ಲ, ಈ ದೇಶದ ಭವಿಷ್ಯ ರೂಪಿಸುವ ಈ ಇಲಾಖೆಗೆ ಖರ್ಚು ಮಾಡುವ ಹಣ ಕಡಿಮೆ.

(ಶ್ರೀ ಡಿ. ಹಲಗೇಗೌಡ)

ನಮಗಿಂತ ಚಿಕ್ಕ ಸಂಸ್ಥಾನದವರು ನಾವು ಖರ್ಚು ಮಾಡುವ ಒಂದೂವರೆಯಷ್ಟು ಖರ್ಚು ಮಾಡುತ್ತಿದ್ದಾರೆ. ಪ್ರಗತಿ ಸಾಧಿಸಬೇಕಾದರೆ ಕೊಟ್ಟ ಹಣ ಯಾವರೀತಿ ವ್ಯಯವಾಗುತ್ತಿದೆ ಎಂಬುದನ್ನು ನೋಡಬೇಕು. ಮೊದಲೇ ಹೇಳಿದ ಹಾಗೆ 3 ಕೋಟಿ ಜನಾಂಗವಿರುವ ಈ ರಾಜ್ಯಕ್ಕೆ ಕೇವಲ 68 ಕೋಟಿ ರೂಪಾಯಿಗಳ ಬೇಡಿಕೆ ಏನೇನೂ ಸಾಲದು. ಸೇಕಡ 30 ಜನಷ್ಟು ವಿದ್ಯಾವಂತರನ್ನು ಮಾಡುವುದಕ್ಕೇ ಕೇಳಿರುವ ಹಣ ಸಾಲದಿರುವಾಗ ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಲು ಈ ಹಣ ಏನೇನೂ ಸಾಲದು. ಸೇಕಡ 70-80 ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಗುರಿಯಿದೆ. ಕೊಡುವ ಸೌಲಭ್ಯ ಏನೇನೂ ಸಾಲದು. ಕೊಡುವ ಹಣದಲ್ಲಿ ಹೆಚ್ಚು ಭಾಗ ಉಪಾಧ್ಯಾಯರ ಸಂಬಳಕ್ಕೆ ಹೋಗುವುದು. ಇಷ್ಟು ಸಂಬಳ ತೆಗೆದುಕೊಂಡು ಗುರು ಮಾಡುವ ಕೆಲಸವೇನು ಎಂದು ಯೋಚನೆ ಮಾಡಬೇಕಾಗಿದೆ. ಈಗ ಗುರು ಎನ್ನುವುದಕ್ಕೆ ಬದಲಾಗಿ ಮೇಷ್ಟ್ರು ಎಂದು ಕರೆಯುವುದನ್ನು ನೋಡಿ ನಾಚಿಕೆ ಪಡಬೇಕಾಗಿದೆ. ಇದರಲ್ಲೇನೂ ಅರ್ಥವಿಲ್ಲ. ಇಂದು ವಿದ್ಯಾಭ್ಯಾಸದ ಮಟ್ಟ ಬಹಳ ಕೆಳಗಿಳಿದಿದೆ, ಈ ಕೂಗು ಕೇಳಿ ಬರುತ್ತಿದೆ. ಎಲ್ಲಿ ಇಳಿದಿದೆಯೆಂದು ಯೋಚನೆಮಾಡುವುದಾದರೆ ಪಠ್ಯಕ್ರಮ ಹಿಂದಿದ್ದುದಕ್ಕಿಂತ ಸುಲಭವಾಗಿದೆ. ಹಿಂದಿದ್ದ ಕ್ರಮಕ್ಕೂ ಈಗಿರುವುದಕ್ಕೂ ಹೋಲಿಕೆ ಮಾಡಿ ನೋಡಿದರೆ ಅತ್ಯುತ್ತಮವಾದ ಪಠ್ಯಕ್ರಮವಿದೆ, ವೈಜ್ಞಾನಿಕವಾದ ಮತ್ತು ಸಾಮಾಜಿಕ ನೀತಿಗೆ ಸಂಬಂಧಪಟ್ಟ ಪಾಠಗಳಿವೆ. ಆ ಪಾಠಗಳನ್ನು ಸರಿಯಾಗಿ ಬೋಧಿಸುವ ಸರಿಯಾದ ಅಧ್ಯಾಪಕರಿಲ್ಲ. ಈಗಿನ ಅಧ್ಯಾಪಕರಿಗೆ ಪಠ್ಯಕ್ರಮವನ್ನು ಸರಿಯಾಗಿ ಬೋಧಿಸುವ ಶಕ್ತಿಯಿಲ್ಲ. ಆದುದರಿಂದ ಬೋಧಿಸಲು ತರಬೇತಾದ ಅಧ್ಯಾಪಕರನ್ನು ಕೊಡುವುದು ಒಳ್ಳೆಯದು, ಅಧ್ಯಾಪಕರ ಬಗ್ಗೆ ಅನೇಕ ಟೀಕೆಗಳಿವೆ, ಬಿ.ಎ., ಬಿ.ಎಸ್.ಸಿ., ಪಾಸಾದವರು ಅಧ್ಯಾಪಕರಾಗಿ ಬರುವರು, ಅವರಿಗೆ ಕನ್ನಡ ಸರಿಯಾಗಿ ಬರೆಯುವುದಕ್ಕೇ ಬರುವುದಿಲ್ಲ ಎಂಬ ಟೀಕೆ ಇದೆ. ಅಲ್ಲದೆ ಈಗ ಕೆಲವು ಕಡೆ ಉಪಾಧ್ಯಾಯರಿಗೆ ಕೆಲಸ ಜಾಸ್ತಿ. ಗ್ರಾಮಾಂತರ ಪ್ರದೇಶಗಳಲ್ಲಿ ಒಬ್ಬ ಉಪಾಧ್ಯಾಯರೇ ಕೆಲವು ಶಾಲೆಗಳಲ್ಲಿರುವರು, 40 ವಿದ್ಯಾರ್ಥಿಗಳಿಗೊಬ್ಬ ಉಪಾಧ್ಯಾಯರಿರಬೇಕೆಂದಿದೆ. ಕೆಲವು ಶಾಲೆಗಳಲ್ಲಿ 3-4 ತರಗತಿಗಳಿದ್ದು ಒಬ್ಬರೇ ಅವುಗಳಿಗೆಲ್ಲಾ ಪಾಠ ಹೇಳಬೇಕು, ಜೊತೆಗೆ ಅವರು ತಮ್ಮ ದಿನಚರಿಯನ್ನು ಮಾಡಬೇಕು, ನೋಟ್ಸ್ ಬರೆಯಬೇಕು, ಮಧ್ಯಾಹ್ನದ ಊಟಕ್ಕೆ ವ್ಯವಸ್ಥೆ ಸಹ ಮಾಡಬೇಕು. ಈ ಎಲ್ಲಾ ಕಾರಣಗಳಿಂದ ಸರಿಯಾಗಿ ಪಾಠ ಹೇಳಲು ಅವಕಾಶವಿಲ್ಲದಂತಾಗಿದೆ. ಅಕ್ಷರ ಜ್ಞಾನ ಕೂಡ ಕೆಲವರಿಗಿರುವುದಿಲ್ಲ, ಭಾಷಾ ಜ್ಞಾನ ಇರುವುದಿಲ್ಲ, ಇದರಿಂದ ವಿದ್ಯಾರ್ಥಿಗಳ ಮಟ್ಟ ಕೆಳಮಟ್ಟಕ್ಕೆ ಹೋಗಿದೆ. ಹಿಂದೆ ಸ್ವಾತಂತ್ರ್ಯ ಪೂರ್ವದಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ಭಾಷಾ ಪಂಡಿತರನ್ನು ನೇಮಕ ಮಾಡುತ್ತಿದ್ದರು. ಈಗ ಅನೇಕ ಪ್ರೌಢ ಶಾಲೆಗಳಲ್ಲಿ ಭಾಷಾ ಪಂಡಿತರಿಲ್ಲ. ಇದು ಕೂಡ ಮಟ್ಟ ಕೆಳಗಿಳಿಯಲು ಕಾರಣವಾಗಿದೆ. ಒಂದು ಸಲ ಸರಿಯಾಗಿ ಪಾಠ ಹೇಳಿದರೆ ಮುಂದೆ ಭಾಷಾಜ್ಞಾನ ಸರಿಯಾಗಿರಲು ಅವಕಾಶವಿರುವುದು. ಇಂದು ಅನೇಕರಿಗೆ ಭಾಷಾಜ್ಞಾನವಿಲ್ಲದೆ, ವಿಷಯ ಜ್ಞಾನವಿಲ್ಲದೆ ತೊಂದರೆಯಾಗಿದೆ. ಇದಕ್ಕೆ ಗಮನ ಕೊಟ್ಟು ಸರಿಯಾದ ವ್ಯವಸ್ಥೆ ಮಾಡಬೇಕು. ಸರಿಯಾದ ಸುಧಾರಣೆಯಾಗಬೇಕು.

ಈ ರೀತಿಯಿಂದ ವಿದ್ಯಾಭ್ಯಾಸದ ಸುಧಾರಣೆ ನಡೆಯಬೇಕು. ಮೂರನೆಯ ತರಗತಿಯಿಂದ ಇಂಗ್ಲೀಷ್ ಬೋಧಿಸಬೇಕು, ಕಾಂಪೋಸಿಟ್ ಕೋರ್ಸ್ ಬಗ್ಗೆ ಯೋಚನೆ ಮಾಡುತ್ತಾ ಇದ್ದಾರೆ ಎಂದು ಕೇಳಿ ಬಂದಿದೆ. ಮೂರನೆಯ ತರಗತಿಯಿಂದ ಇಂಗ್ಲೀಷ್ ಬೋಧಿಸತಕ್ಕ ಕಾರ್ಯಕ್ಕೆ ಕೈ ಹಾಕಿದರೆ ಅಪಾಯದ ಕೆಲಸಕ್ಕೆ ಕೈ ಹಾಕಿದಂತಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕನ್ನಡ ಬಾರದೆ ಇರುವ ಕಡೆ ಇಂಗ್ಲೀಷ್ ನೀರನ್ನು ಗಂಟಲೊಳಗೆ ಬಿಟ್ಟಂತಾಗುತ್ತದೆ. ಕನ್ನಡ ಬಾರದ ಮಗುವಿಗೆ ಇಂಗ್ಲೀಷ್ ಭಾಷೆಯ ಹೊರೆ ಹೊರೆಸುವುದಕ್ಕೆ ಹೋದರೆ ಶಿಕ್ಷಣ ಹೇಗೆ ಆಗುತ್ತದೆ ಎಂದು ಯೋಚನೆ ಮಾಡಬೇಕು. ಈಗ ಪ್ರೈಮರಿ ತರಗತಿಯನ್ನು ಇಂಗ್ಲೀಷ್ ಬೋಧಿಸತಕ್ಕ ಕಾರ್ಯಕ್ಕೆ ಕೈಹಾಕಿದರೆ ಅದಕ್ಕೆ ದೊಡ್ಡ ವಿರೋಧವನ್ನು ಎದುರಿಸಬೇಕಾಗುತ್ತದೆ ಎನ್ನು ಎಚ್ಚರಿಕೆಯನ್ನು ಈ ಮೂಲಕ ಕೊಡ ಬಯಸುತ್ತೇನೆ. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಟ್ಟು, ನರ್ಸರಿ ಶಿಕ್ಷಣಕ್ಕೆ ಹೆಚ್ಚು ಹೆಚ್ಚು ಜವಾಬ್ದಾರಿ ವಹಿಸಿಕೊಳ್ಳತಕ್ಕ ಉಪಾಧ್ಯಾಯರನ್ನು ನೇಮಕ ಮಾಡಬೇಕು. ನರ್ಸರಿ, ಪ್ರಾಥಮಿಕ ವಿದ್ಯಾಭ್ಯಾಸ ಚೆನ್ನಾಗಿ ನಡೆದರೆ ಕಾಲೇಜು ವಿದ್ಯಾಭ್ಯಾಸ ಚೆನ್ನಾಗಿ ನಡೆಯುತ್ತದೆ. ಜೊತೆಗೆ ಅಧ್ಯಾಪಕರನ್ನು 40 ಮಕ್ಕಳಿಗೆ ಒಬ್ಬರನ್ನು ನೇಮಿಸುತ್ತಾ ಇದ್ದೀರಿ. ಈ ರೀತಿ ಮಾಡದೆ ತರಗತಿಯ ಮೇಲೆ ನೇಮಿಸಬೇಕಾಗುತ್ತದೆ. ಮೂರು ತರಗತಿಗೆ ಮೂರು ಶಿಕ್ಷಕರು ಇರಬೇಕು. ಒಬ್ಬರೆ ಉಪಾಧ್ಯಾಯರು ಇದ್ದರೆ ಎಲ್ಲವನ್ನೂ ಮಾಡುವುದು ಕಷ್ಟವಾಗುತ್ತದೆ.

ಈಗ ಕರೆಸ್ಪಾಂಡೆನ್ಸ್ ಕೋರ್ಸ್ ಇದೆ, ಸರ್ಕಾರದ ಯಾವ ಖರ್ಚೂ ಇಲ್ಲದೆ ಶಿಕ್ಷಣವನ್ನು ಹೆಚ್ಚಿಸಿಕೊಳ್ಳತಕ್ಕ ಕೆಲವು ವಿಧಾನ ಇದೆ. ಅಂಚೆಯ ಮೂಲಕ ಶಿಕ್ಷಣ ಪಡೆದು, ಶ್ರಮ ಪಟ್ಟು ತಮ್ಮ ವಿದ್ಯಾಭ್ಯಾಸ ಮಟ್ಟವನ್ನು ಹೆಚ್ಚಿಸಿಕೊಳ್ಳುತ್ತಾರೆ. ಇಂಥವರ ಬಗ್ಗೆ ನಾನು ಸರ್ಕಾರಕ್ಕೆ ಸಲಹೆಮಾಡುವುದು ಏನೆಂದರೆ, ಅವರು ಪರೀಕ್ಷೆಗೆ ಕುಳಿತುಕೊಳ್ಳುವ ದಿನಗಳನ್ನು ಒಒಡಿ ದಿನಗಳನ್ನಾಗಿ ಮಾಡಬೇಕು ಎಂದು. ಸರ್ಕಾರ ಅವರ ಮೇಲೆ ಯಾವ ದುಡ್ಡನ್ನೂ ಖರ್ಚು ಮಾಡುವುದಿಲ್ಲ. ಕಷ್ಟ ಪಟ್ಟು ತಾವೇಸ್ವತಃ ವ್ಯಾಸಂಗ ಮಾಡತಕ್ಕ ವಿದ್ಯಾರ್ಜನೆ ಮಾಡತಕ್ಕ ವಿದ್ಯಾರ್ಥಿಗಳಿಗೆ ಇಂಥ ಒಂದು ರಜಾದಿನವನ್ನು ಒದಗಿಸಿಕೊಡುವುದು ಒಳ್ಳೆಯದು.

ಆರೋಗ್ಯ ಮತ್ತು ವಿದ್ಯಾನಿಲಯದ ಸೌಕರ್ಯ ಹೆಚ್ಚಾಗಬೇಕು. ಗ್ರಾಮಾಂತರದಿಂದ ನಗರ ಪ್ರದೇಶಗಳಿಗೆ ಹೋಗುವ ವಿದ್ಯಾರ್ಥಿಗಳು ಇದ್ದಾರೆ. ಯಾವ ಸೌಕರ್ಯವೂ ಇಲ್ಲದೆ ತೊಂದರೆ ಪಟ್ಟುಕೊಂಡು ವಿದ್ಯಾಭ್ಯಾಸದ ಕಡೆ ಗಮನಕೊಡುವುದು ಕಷ್ಟವಾಗಿರುತ್ತದೆ. ವಿದ್ಯಾರ್ಥಿಗಳಿ ಗೋಸ್ಕರ ಪ್ರತ್ಯೇಕವಾದ ಆಸ್ಪತ್ರೆಗಳನ್ನು ತೆರೆದರೂ ಚಿಂತೆಯಿಲ್ಲ, ಕೂಲಿಗಾರರಿಗೆ, ಶ್ರಮ ಜೀವಿ ಗಳಿಗೆ ಆಸ್ಪತ್ರೆಗಳನ್ನು ತೆರೆಯುವುದಿಲ್ಲವೇ ಹಾಗೆ ವಿದ್ಯಾರ್ಥಿನಿಲಯದ ಮಂದಿರಗಳನ್ನು ಕಟ್ಟಿ ವಿದ್ಯಾರ್ಥಿಗಳಿಗೆ ಮೀಸಲಾಗಿರತಕ್ಕ ಆಸ್ಪತ್ರೆಗಳನ್ನು ತೆರೆಯುವುದು ಒಳ್ಳೆಯದು. ವಿದ್ಯಾರ್ಥಿನಿಲ ಯದ ಸೌಕರ್ಯವನ್ನು ಹೆಚ್ಚು ಹೆಚ್ಚಾಗಿ ಒದಗಿಸಿಕೊಡಬೇಕು. ಸಮಾಜ ಕಲ್ಯಾಣ ಮಂತ್ರಿಗಳು, ವಿದ್ಯಾ ಮಂತ್ರಿಗಳು ಇದರ ಬಗ್ಗೆ ಮನಸ್ಸು ಕೊಟ್ಟು ಹೆಚ್ಚು ಹಣ ಕೊಟ್ಟಿದ್ದೇವೆಂದು ಹೇಳುತ್ತಾರೆ. ಅದು ಸಾಲದು, ಅದರ ನಾಲ್ಕರಷ್ಟು, ಐದರಷ್ಟು ಹಣ ಕೊಡಬೇಕು. ವಿದ್ಯಾರ್ಥಿಗಳಿಗೋಸ್ಕರ ಸೌಕರ್ಯಗಳನ್ನು ಹೆಚ್ಚಿಸಿದರೆ, ವಿದ್ಯಾಮಟ್ಟ ದಿನದಿಂದ ದಿನಕ್ಕೆ ಹೆಚ್ಚಾಗಿ ಹೋಗುತ್ತದೆ. ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ವಿದ್ಯಾರ್ಥಿಗಳು ಕಡಿಮೆ ನಂಬರ್‌ಗಳನ್ನು ತೆಗೆದುಕೊಂಡಿ ರುತ್ತಾರೆ, ಅಂಥವರನ್ನು ಖಾಸಗೀ ಶಾಲೆಗಳವರು ತೆಗೆದುಕೊಳ್ಳುವುದಿಲ್ಲ. ಕೇವಲ ಫಸ್ಟ್‌ಕ್ಲಾಸ್ ನಂಬರುಗಳನ್ನು ತೆಗೆದುಕೊಂಡಿದ್ದವರನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಕಡಿಮೆ ಅಂಕಗಳನ್ನು ತೆಗೆದುಕೊಂಡಿರುವ ವಿದ್ಯಾರ್ಥಿಗಳನ್ನು ಕಾಲೇಜುಗಳಲ್ಲಿ ತೆಗೆದುಕೊಂಡು ಒಳ್ಳೆಯ ಫಲಿತಾಂಶವನ್ನು ಅವರು ತರುವುದು ಒಳ್ಳೆಯದು ಎಂದು ನನ್ನ ಭಾವನೆ. ನಗರ ಪ್ರದೇಶದಲ್ಲಿ ಹೆಚ್ಚಿನ ಸೌಕರ್ಯಗಳು ಇರುತ್ತದೆ, ಇಲ್ಲಿ ಹೆಚ್ಚು ನಂಬರ್ ಅನ್ನು ತೆಗೆದುಕೊಂಡು ವಿದ್ಯಾರ್ಥಿಗಳನ್ನು ಕಾಲೇಜುಗಳಲ್ಲಿ ಸೇರಿಸಿಕೊಂಡು ಹೆಚ್ಚಿನ ಫಲಿತಾಂಶವನ್ನು ತರುವುದು ಆಶ್ಚರ್ಯವೇನಲ್ಲ. ಗ್ರಾಮಾಂತರ ಪ್ರದೇಶ ಗಳಲ್ಲಿ ಅಧ್ಯಾಪಕರ ಕೊರತೆ, ಬಡತನದ ಬವಣೆ, ಇನ್ನೂ ಕೆಲವು ಕಾರಣಗಳಿಂದ ಹೆಚ್ಚಿನ ಮಟ್ಟದ ವಿದ್ಯಾಭ್ಯಾಸವನ್ನು ಇವರು ಮಾಡುವುದಕ್ಕಾಗುವುದಿಲ್ಲ, ಆದ್ದರಿಂದ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಮೂರನೆಯ ದರ್ಜೆಯಲ್ಲಿ ಪಾಸ್ ಮಾಡಿದ ವಿದ್ಯಾರ್ಥಿಗಳಿಗೂ ಕಾಲೇಜುಗಳಲ್ಲಿ ಸೇರಿಸಿ ಕೊಳ್ಳುವುದಕ್ಕೆ ಅನುಮತಿ ಕೊಡಬೇಕು ಇಲ್ಲದಿದ್ದರೆ, ಬರೀ ನಗರಪ್ರದೇಶದಲ್ಲಿರುವವರ ಮಕ್ಕಳೇ ವಿದ್ಯಾಭ್ಯಾಸಮಾಡುವುದಕ್ಕೆ ಅನುಕೂಲವಾಗಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ವಿದ್ಯಾ ಭ್ಯಾಸ ಕುಂಠಿತವಾಗುತ್ತದೆ. ಆದ್ದರಿಂದ ಇವರಿಗೂ ಒಳ್ಳೆಯ ಕಾಲೇಜುಗಳಲ್ಲಿ ಪ್ರವೇಶ ಕೊಟ್ಟು ಅನುಕೂಲಮಾಡಬೇಕೆಂದು ಒತ್ತಾಯಿಸುತ್ತೇವೆ. ನಗರ ಪ್ರದೇಶದಲ್ಲಿರುವ ಖಾಸಗಿ ಕಾಲೇಜು ಸಂಸ್ಥೆಗಳು ಲಾಭ ಬಡುಕ ಸಂಸ್ಥೆಗಳಾಗಿವೆ. ಗ್ರಾಮಾಂತರ ಪ್ರದೇಶದಲ್ಲಿರುವ ಖಾಸಗಿ ಕಾಲೇಜು ಸಂಸ್ಥೆಗಳು ಲಾಭ ಬಡುಕ ಸಂಸ್ಥೆಗಳಾಗಿವೆ. ಗ್ರಾಮಾಂತರ ಪ್ರದೇಶದಲ್ಲಿರುವ ಯಾವ ಖಾಸಗೀ ವಿದ್ಯಾ ಸಂಸ್ಥೆಗಳೂ ಲಾಭದಿಂದ ಕೆಲಸ ಮಾಡುತ್ತಿಲ್ಲ. ಅನೇಕ ವೇಳೆ ವಿದ್ಯಾರ್ಥಿಗಳನ್ನು ಒದಗಿಸಿ ಕೊಡಬೇಕಾದರೆ, ಅಧ್ಯಾಪಕರಿಗೆ ಸಂಬಳ ಕೊಡಬೇಕಾದರೆ ಸಂಸ್ಥೆಗಳವರಿಗೆ ಕಣ್ಣಿನಲ್ಲಿ ನೀರು ಬರುತ್ತದೆ. ವರ್ಷಕ್ಕೆ 5-10 ರೂಪಾಯಿ ಡೊನೇಷನ್ ತೆಗೆದುಕೊಳ್ಳತಕ್ಕವರನ್ನೂ ನಗರದ ಸಂಸ್ಥೆಗಳಲ್ಲಿ ನೂರು ರೂಪಾಯಿ ತೆಗೆದುಕೊಳ್ಳತಕ್ಕವರನ್ನೂ ಒಂದೇ ತಕ್ಕಡಿಯಲ್ಲಿ ತೂಗಿ ಇಬ್ಬ ರನ್ನೂ ಒಂದೇ ರೀತಿಯಿಂದ ಕಾಣಬಾರದು. ನಗರ ಪ್ರದೇಶದಲ್ಲಿ ಲಾಭ ಬಡುಕ ವಿದ್ಯಾಸಂಸ್ಥೆಗಳು ಏನುಇವೆ ಅವನ್ನು ತಡೆಗಟ್ಟಬೇಕು. ನರ್ಸರಿ ಶಾಲೆ, ಪ್ರೈಮರಿ ಶಾಲೆಗಳಿಗೆ 5-10ರೂಪಾಯಿಗಳನ್ನು ತೆಗೆದುಕೊಳ್ಳುವುದನ್ನು ತಪ್ಪಿಸಬಾರದು. ಮತ್ತು ಹೈಸ್ಕೂಲುಗಳಲ್ಲಿ ತಿಂಗಳಿಗೆ 2ರೂಪಾಯಿ ಗಳನ್ನು ಹೈಸ್ಕೂಲುಗಳಲ್ಲಿ ತೆಗೆದುಕೊಳ್ಳುವುದನ್ನು ಪ್ರತಿಬಂಧಿಸಬಾರದು. ಶಾಲಾ ಕಾಲೇಜುಗಳ ಸಂಖ್ಯೆಯನ್ನು ಬೆಳೆಸುವುದು ಮುಖ್ಯವಾದ ದೃಷ್ಟಿಯಲ್ಲ, ಏತಾನಮಿಯನ್ನೂ ಹೆಚ್ಚಿಸಬೇಕು. ಮತ್ತು ಮಕ್ಕಳು ಕಲಿತುಕೊಳ್ಳುವ ವಿದ್ಯೆಗೆ ಒಳ್ಳೆಯ ವಾತಾವರಣವನ್ನು ಗುಣ ಮಟ್ಟವನ್ನು ಹೆಚ್ಚಿಸು ವುದಕ್ಕೆ ಏರ್ಪಾಡು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ರಾಷ್ಟ್ರೀಯ ಅಧ್ಯಾಪಕರಿಗೆ ಕಲಾವಿದರಿಗೆ ಸರಿಯಾದ ರೀತಿಯಲ್ಲಿ ಸನ್ಮಾನ ಕೊಡಬೇಕು. ಕಲಾ ವಿಧರಾದ ಆರ್. ಎಸ್. ನಾಯಿಡು ಅವರು ಹಿಂದೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ದ್ದುಂಟು. ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕಾನ್ಸರ್ ರೋಗದಿಂದ ನರಳುತ್ತಿದ್ದಾರೆ. ಅಂಥ

ವರಿಗೆ ಸರ್ಕಾರದ ಹಣದ ಸಹಾಯವನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕಲಾವಿಧರ ಕಡೆ, ಅಧ್ಯಾಪಕರ ಕಡೆ, ಸಮಾಜ ಸುಧಾರಕರ ಕಡೆ, ಸರ್ಕಾರದವರು ಗಮನ ಹರಿಸಿ ಅವರ ರುಣ ವನ್ನು ತೀರಿಸಬೇಕು ಎಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಕೃಷ್ಣರಾವ್ (ಗೋರಿಬಿದನೂರು).—ಸನ್ಮಾನ ಅಧ್ಯಕ್ಷರೇ, ವಿದ್ಯಾ ಸಚಿವರು ಮುಂದಿ ಟಿರತಕ್ಕ 67ಕೋಟಿ ರೂಪಾಯಿಗಳ ಬೇಡಿಕೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಹಲವಾರು ಸಲಹೆಗಳನ್ನು ಮಾಡಲು ಬಯಸುತ್ತೇನೆ. ಇವತ್ತಿನದಿವಸ ನಮ್ಮ ದೇಶದ ವಿದ್ಯಾ ಭ್ಯಾಸದ ಮಟ್ಟ ಬಹಳ ಮಟ್ಟಿಗೆ ಕೆಳಗೆ ಇಳಿಯುತ್ತಿದೆ ಎಂದರೆ ಅದು ಎಲ್ಲರೂ ಕೂಡ ಒಪ್ಪತಕ್ಕ ವಿಚಾರ, ಹಿಂದಿನ ವಿದ್ಯಾಭ್ಯಾಸ ಹೇಗೆ ಇತ್ತು, ವಿದ್ಯಾ ಗುರುಗಳ ಲಕ್ಷಣ ಹೇಗೆ ಇತ್ತು, ಎನ್ನುವು ದರ ಬಗ್ಗೆ ಅನೇಕ ಜನ ಸ್ನೇಹಿತರು ಮಾತನಾಡಿದ್ದಾರೆ. ಇದರ ಮೇಲೆ ನಾನು ಹೆಚ್ಚಾಗಿ ಮಾತ ನಾಡಲು ಅಪೇಕ್ಷಿಸುವುದಿಲ್ಲ. ಒಟ್ಟಿನಲ್ಲಿ ವಿದ್ಯಾ ಇಲಾಖೆ ತನ್ನ ಸ್ಟ್ಯಾಂಡರ್ಡ್ ಎಂದು ಏನು ಹೇಳುತ್ತಾರೋ ಅದನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇವತ್ತಿನ ದಿವಸ ಬಿ. ಎ. ಪಾಸ್ ಮಾಡಿರತಕ್ಕ ಹುಡುಗರು ಸರಿಯಾಗಿ ಇಂಗ್ಲೀಷಿನಲ್ಲಿ ಒಂದು ವಾಕ್ಯ ಇವನ್ನಾಗಲೀ ಪತ್ರವನ್ನಾಗಲಿ ಬರೆಯುವುದಕ್ಕೆ ಅರ್ಹತೆ ಪಡೆದಿಲ್ಲ ಎಂದು ಕೆಲವರು ಹೇಳಿದರು. ನನಗೂ ಕೂಡ ಇದು ನಿಜ ಎಂದು ಅನ್ನಿಸುತ್ತದೆ. ಇಂಥಾ ವಿದ್ಯಾ ಮಟ್ಟವನ್ನು ಇನ್ನೂ ಏರಿಸಬೇಕು ಎಂದು ಈ ಸಂದರ್ಭದಲ್ಲಿ ವಿದ್ಯಾ ಮಂತ್ರಿಗಳನ್ನು ಬಹಳ ಕಳಕಳಿಯಿಂದ ಪ್ರಾರ್ಥನೆಮಾಡುತ್ತೇನೆ.

ಎರಡನೆಯದಾಗಿ, ನಮ್ಮ ದೇಶದಲ್ಲಿ, ಬೆಂಗಳೂರು ಮತ್ತು ದೊಡ್ಡ ದೊಡ್ಡ ಜಿಲ್ಲಾ ಮಟ್ಟ ದಲ್ಲಿ, ತಾಲ್ಲೂಕು ಮಟ್ಟದಲ್ಲಿ ನರ್ಸರಿ ಸ್ಕೂಲುಗಳು ಇವೆ. ಮಕ್ಕಳಿಗೆ ನರ್ಸರಿ ಸ್ಕೂಲನಿಂದ ಹಿಡಿದು ಯೂನಿವರ್ಸಿಟಿಯವರೆಗೆ ಒಳ್ಳೆಯ ವಿದ್ಯಾಭ್ಯಾಸ ಕೊಡುವುದಕ್ಕೆ ಅವಕಾಶ ಇದೆ. ಹಳ್ಳಿಗಾಡಿನಲ್ಲಿ ರತಕ್ಕ ಮಕ್ಕಳಿಗೆ ಈ ಒಂದು ನರ್ಸರಿ ಸ್ಕೂಲುಗಳ ಅವಶ್ಯಕತೆ ಖಂಡಿತವಾಗಿಯೂ ಇದೆ ಎಂದು ನಾನು ಭಾವಿಸುತ್ತೇನೆ. ನರ್ಸರಿ ಸೆಕ್ಷನ್ ಇಲ್ಲದ ಮೇಲೆ ಮಕ್ಕಳನ್ನು ನೇರವಾಗಿ ಪ್ರೈಮರಿ ಸ್ಕೂಲಗೆ ತೆಗೆದುಕೊಂಡು ಹೋಗಿ ಬಿಟ್ಟರೆ ಮಕ್ಕಳು ಏನು ಓದುತ್ತಾರೆ ? ಅವರಿಗೆ ಅಕ್ಷರಭ್ಯಾಸ ಸರಿ ಯಾಗಿ ಅ ಆ ವನ್ನು ತಿದ್ದುವುದಕ್ಕೆ ಹಚ್ಚಿ ವರ್ಣಮಾಲೆಯನ್ನು ಕಲಿತುಕೊಂಡು ನಂತರ ಒಂದು ವಿದ್ಯಾಭ್ಯಾಸ ಪಾಠಗಳನ್ನು ಶುರು ಮಾಡಿದರೆ ಆಗ ಮಕ್ಕಳಿಗೆ ಚೆನ್ನಾಗಿ ಗೊತ್ತಾಗುತ್ತದೆ. ನರ್ಸರಿ ಸ್ಕೂಲುಗಳನ್ನು ನಿರ್ಲಕ್ಷಿಸಿದರೆ, ನರ್ಸರಿ ಸ್ಕೂಲುಗಳು ಉತ್ತಮ ಆಗುವವರೆಗೆ ವಿದ್ಯಾ ಭ್ಯಾಸ ಚೆನ್ನಾಗಿ ಆಗುವುದಿಲ್ಲ. ನರ್ಸರಿ ಮತ್ತು ಪ್ರೈಮರಿ ಸ್ಕೂಲುಗಳಿಗೆ ಎಸ್.ಎಸ್.ಎಲ್.ಸಿ, ಪಾಸ್ ಮಾಡಿದವರನ್ನು ಅಧ್ಯಾಪರನ್ನಾಗಿ ಹಾಕುತ್ತಾರೆ. ಆದರೆ ಪ್ರೈಮರಿ ಸ್ಕೂಲ್ ಮಟ್ಟ ಹೆಚ್ಚಬೇಕಾದರೆ, ಕನಿಷ್ಟಪಕ್ಷ ಗ್ರಾಜುಯೇಟ್ಸ್‌ಗಳನ್ನಾದರೂ ಹಾಕಬೇಕು. ಪ್ರತಿಯೊಂದು ಹಳ್ಳಿಯ ಪ್ರೈಮರಿ ಶಾಲೆಗಳಿಗೂ ಕೂಡ ಪದವೀಧರರನ್ನು ಉಪಾಧ್ಯಾಯರನ್ನಾಗಿ ಹಾಕಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

6–30 P. M

ನರ್ಸರಿ ಮತ್ತು ಪ್ರೈಮರಿ ಈ ಎರಡು ವಿದ್ಯಾಭ್ಯಾಸವೂ ಕೂಡ ಅವಶ್ಯಕ, ಈ ಎರಡರಲ್ಲ ಕೂಡ ಮಕ್ಕಳಿಗೆ ಶಿಸ್ತನ್ನು ಕಲಿಸತಕ್ಕ ಪಾಠಗಳನ್ನು ಇಂಟ್ರೊಡ್ಯೂಸ್ ಮಾಡುವುದು ಬಹುಮಟ್ಟಿಗೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಮಾನ್ಯ ವಿದ್ಯಾಮಂತ್ರಿಗಳು ಇವೊತ್ತಿನದಿವಸ ಬೆಂಗಳೂರಿ ನಿಂದ ಹಿಡಿದು ಪಟ್ಟಣಗಳಲ್ಲ, ತಾಲ್ಲೋಕು ಮಟ್ಟದಲ್ಲ ಒಳ್ಳೆಒಳ್ಳೆಯ ಶಾಲೆ ಕಟ್ಟಡಗಳನ್ನು ಕೊಟ್ಟಿದ್ದಾರೆ, ಇವೊತ್ತು ಅನೇಕ ಹಳ್ಳಿಗಳಲ್ಲ ಮರದ ಕೆಳಗೆ ಶಾಲೆಗಳು ನಡೆಯುತ್ತಾ ಇರುವುದು ಪ್ರತ್ಯಕ್ಷವಾಗಿ ತೋರಿಸಬೇಕಿಲ್ಲ. ಪ್ರೈಮರಿ ಸ್ಕೂಲು ಕಟ್ಟಡಕಟ್ಟಬೇಕಾದರೆ 6,100 ರೂಪಾಯಿ ಎಸ್ಟಿಮೇಟ್ ಆಗುತ್ತದೆ. 6,100 ರೂಪಾಯಿಗಳಲ್ಲಿ ಕೇವಲ ಸರ್ಕಾರ 2ಸಾವಿರ ರೂಪಾಯಿ ಗಳನ್ನು ಮಾತ್ರ ಕೊಟ್ಟು ಬಾಕಿ ಹಣವನ್ನು ಲೋಕಲ್ ಕಾಂಟ್ರಿಬ್ಯೂಷನ್‌ನಿಂದ ವಸೂಲು ಮಾಡಿ ಕಟ್ಟಡ ಕಟ್ಟಿ ಎಂದು ಹೇಳುತ್ತಾರೆ. 2ಸಾವಿರ ರೂಪಾಯಿ ಕೊಟ್ಟು 4 ಸಹಸ್ರ ರೂಪಾಯಿಗಳನ್ನು ಹಳ್ಳಿಗಾಡಿನಲ್ಲಿ ವಸೂಲುಮಾಡಿ ಎಂದರೆ ಅದನ್ನು ಕೊಡಬೇಕಾದರೆ ಖಂಡಿತವಾಗಿ ಬಹಳಮಟ್ಟಿಗೆ ಕಷ್ಟವಾಗುತ್ತದೆ. ಬೇಸಿಕ್ ನೆಸಿಸಿಟಿ ಇರತಕ್ಕ ಒಂದು ಶಾಲಾ ಕಟ್ಟಡವನ್ನು ಇವೊತ್ತಿನದಿವಸ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಸರ್ಕಾರ ಮುಂದೆ ಬಂದು ಕಟ್ಟಿಸಿದರೆ ಮಾತ್ರ ಆ ಕೆಲಸ ಸಾಧ್ಯ

ವಾಗುತ್ತದೆಯೇ ಹೊರತು ಇಲ್ಲದೆ ಹೋದರೆ ಖಂಡಿತ ಲೋಕಲ್ ಕಾಂಟ್ರಿಬ್ಯೂಷನ್‌ಸಿಂದ ವಸೂಲು ಮಾಡಿ ಕಟ್ಟಡ ಕಟ್ಟಿಸುವುದು ಕಷ್ಟಕರವಾದ ವಿಚಾರ ಎನ್ನುವುದನ್ನು ಇವೊತ್ತಿನ ದಿವಸ ಸರ್ಕಾರದ ಗಮನಕ್ಕೆ ತರುತ್ತೇನೆ. ಆದುದರಿಂದ ಶಾಲಾಕಟ್ಟಡಕ್ಕೆ ಏನು ಖರ್ಚಾಗುತ್ತದೆ ಅದನ್ನು ಸಂಪೂರ್ಣವಾಗಿ ಸರ್ಕಾರದವರೇ ಕೊಟ್ಟು ಕಟ್ಟಡಗಳನ್ನು ಕಟ್ಟಿಸಿಕೊಡಬೇಕು ಎಂದು ಹೇಳಿ ಪ್ರಾರ್ಥನೆ ಮಾಡುತ್ತೇನೆ. ಹೈಸ್ಕೂಲು ಕಟ್ಟಡಗಳು ಆಗುತ್ತಾ ಇವೆ ಅವಕ್ಕೆ ಸರಿಯಾದ ಒಂದು ಹಾಸ್ಟಲ್ ವ್ಯವಸ್ಥೆಯಿಲ್ಲ. ಹಾಸ್ಟಲ್ ವ್ಯವಸ್ಥೆ ಎಷ್ಟು ಮುಖ್ಯವೋ ಹಾಸ್ಟಲ್ ಕಟ್ಟಡಗಳೂ ಅಷ್ಟೇ ಮುಖ್ಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏತಕ್ಕೆಂದರೆ ಎಲ್ಲಾ ಜಾತಿ, ಎಲ್ಲಾ ಜನಾಂಗದ ಎಲ್ಲಾ ಕೋಮಿನವರು ಒಂದೇ ಹಾಸ್ಟಲ್‌ನಲ್ಲಿ ಬೆಳೆದ ಪಕ್ಷದಲ್ಲಿ ಕೋಮುವಾರು ಭಾವನೆ ಕಡಿಮೆಯಾಗಿ ಎಲ್ಲರೂ ಒಂದೇ ಎನ್ನುವ ಭಾವನೆ ಬಹುಮಟ್ಟಿಗೆ ಪ್ರಯೋಜನವಾಗುತ್ತದೆ ಎಂದು ಹೇಳುತ್ತೇನೆ. ಹೈಸ್ಕೂಲು ಹಾಸ್ಟಲ್ ಕಟ್ಟಡ ಇರಬೇಕು ಎಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಹಾಗೆಯೇ ಉಪಾಧ್ಯಾಯರ ವಿಚಾರ. 1947ನೇ ಇಸವಿಯಲ್ಲಿ ಕಾಲೇಜು ಲೆಕ್ಚರರ್‌ಗಳಿಗೆ ಏನು ಸಂಬಳ ಕೊಡುತ್ತಿದ್ದರೂ ಅದೇ ಸಂಬಳ ಹೈಸ್ಕೂಲು ಹೆಡ್‌ಮಾಸ್ಟರ್‌ಗೆ ಕೊಡುತ್ತಿದ್ದರು. 1960ನೇ ಇಸವಿಯಲ್ಲಿ ಪೇಸ್ಕೇಲ್ ರಿವೈಸ್ ಮಾಡಿದಾಗ ಕಾಲೇಜ್ ಲೆಕ್ಚರರ್‌ಗೆ 300-700 ಸ್ಕೇಲ್ ಕೊಟ್ಟರೆ ಹೆಡ್‌ಮಾಸ್ಟರ್‌ಗೆ 275-500 ಸ್ಕೇಲ್ ಕೊಟ್ಟರು. ಇದನ್ನು ದಯವಿಟ್ಟು ಬದಲಾಯಿಸಿ ಕಾಲೇಜ್ ಲೆಕ್ಚರರ್‌ಗೆ ಏನು 300—700 ರೂಪಾಯಿ ಸ್ಕೇಲ್ ಕೊಡುತ್ತಾ ಇದ್ದಾರೆ, ಅದೇ ಸ್ಕೇಲನ್ನು ಇವರಿಗೂ ಕೊಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ವಿದ್ಯಾಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ಈಗ ಕೆಲವು ಗ್ರಾಮಗಳಿಂದ ಹೈಸ್ಕೂಲುಗಳಿಗೆ ಬಂದು ವಿದ್ಯಾಭ್ಯಾಸ ಮಾಡತಕ್ಕ ಮಕ್ಕಳಿಗೆ ಶಾಲೆಗಳಲ್ಲಿ ಸೀಟು ಸಿಕ್ಕುವುದು ಬಹುಮಟ್ಟಿಗೆ ಕಷ್ಟಕರವಾದ ವಿಚಾರವಾಗಿದೆ. 60—70 ಮಾರ್ಕ್ಸ್ ತಗೆದುಕೊಂಡು ಅಥವಾ ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಮಾಡಿದವರಿಗೆ ಶಾಲೆಗಳಲ್ಲಿ ಸೀಟು ಸಿಕ್ಕಿ ಬಾಕಿಯವರಿಗೆ ಸೀಟು ಸಿಕ್ಕದೆ ಕಷ್ಟವಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಹಳ್ಳಿಗಾಡಿನಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಈ ಶಾಲೆಗಳಲ್ಲಿ ಸೀಟು ಕೊಡುವಾಗ ಸ್ವಲ್ಪಮಟ್ಟಿಗೆ ರಿಯಾಯಿತಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಲೋಕಲ್ ಬೋರ್ಡ್ ಹೈಸ್ಕೂಲುಗಳನ್ನು ಸರ್ಕಾರ ವಹಿಸಿಕೊಂಡಿದ್ದಾರೆ, ವಹಿಸಿಕೊಂಡಮೇಲೆ ಅಲ್ಲಿ ಅನೇಕ ಹೈಸ್ಕೂಲುಗಳಿಗೆ ಕಟ್ಟಡವಿಲ್ಲ. ಉದಾಹರಣೆ ಹೇಳಬೇಕು ಎಂದರೆ ಗೋರಿಬಿದನೂರು ಪಾನದ ಹೊಸಹಳ್ಳಿ ಹೈಸ್ಕೂಲನ್ನು ತಾಲ್ಲೋಕುಬೋರ್ಡಿನಿಂದ ಸರ್ಕಾರದವರು ತೆಗೆದುಕೊಂಡಿರಿ. ಅಲ್ಲಿ ಬಿಲ್ಡಿಂಗ್ ಇಲ್ಲ, ಮಕ್ಕಳನ್ನು ತೆಗೆದುಕೊಂಡು ಬಂದು ಎಲ್ಲಿ ಶಾಲೆ ನಡೆಸಬೇಕು ಗೊತ್ತಿಲ್ಲ. ಅಲ್ಲಿಯ ಒಬ್ಬ ದಾನಿಗಳು 20ಸಾವಿರ ರೂಪಾಯಿ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಆದ್ದರಿಂದ ಅದನ್ನು ತೆಗೆದುಕೊಂಡು ಉಳಿದಿದ್ದನ್ನು ಸರ್ಕಾರದವರು ಹಾಕಿ, ಅಲ್ಲಿ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ವಿದ್ಯಾಮಂತ್ರಿಗಳು ಬಹಳ ಯೋಗ್ಯರು, ಉತ್ತಮರು ಅವರ ವಿಚಾರದಲ್ಲಿ ಒಳ್ಳೆಯ ಅಭಿಪ್ರಾಯ ಇದೆ, ಇಂಥ ಮಂತ್ರಿಗಳು ಅನೇಕ ಕಾಲ ಇದ್ದು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಯನ್ನು ಮುಂದುವರಿಸುವುದು ಅಲ್ಲದೆ ರಾಷ್ಟ್ರದ ವಿದ್ಯಾ ಮಟ್ಟವನ್ನು ಹೆಚ್ಚಿಸಲಿಕ್ಕೆ ಪ್ರಯತ್ನ ಮಾಡಲಿ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—Tomorrow, there is reply from the Government on this demand,

The House now stands adjourned to meet tomorrow at 9 a.m.

The House adjourned at Forty Minutes past Six of the Clock to meet again at Nine of the Clock on Saturday, the 14th April 1973.